ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೬೦ Volume 160	ಬೆಂಗಳೂರು, ಸೋಮವಾರ ೦೩, ನವೆಂಬರ್, ೨೦೨೫ (ಕಾರ್ತಿಕ , ೧೨, ಶಕವರ್ಷ, ೧೯೪೭) BENGALURU, MONDAY 03, NOVEMBER, 2025 (KARTHIKA , 12, SHAKAVARSHA, 1947)	ಸಂಚಿಕೆ ೨೦೭ Issue 207

ಭಾಗ ೩

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ಮಹಾನಗರ ಪಾಲಿಕೆ ದಾವಣಗೆರೆ

ಜಾಹೀರಾತು ಉಪವಿಧಿ–2025

ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ ಅಧಿನಿಯಮ 1976ರ ಸೆಕ್ಷನ್ 423(24) ರಡಿ ರಚಿಸಿದ ಜಾಹಿರಾತು ಉಪವಿಧಿಗಳು

ಕ್ರ. ಸಂ.	ಭಾಗ	ಉಪ ವಿಧಿ	ವಿಷಯ ಸೂಚಿ	ಪುಟ ಸಂಖ್ಯೆ
1	I	1	ಸಂಕ್ಷಿಪ್ತ ಹೆಸರು ವ್ಯಾಪ್ತಿ ಮತ್ತು ಪ್ರಾರಂಭ	03
2		2	ಅರ್ಥವಿವರಣೆ	03–08
3	II	3	ಹೊರಾಂಗಣ ಜಾಹೀರಾತುಗಳಿಗೆ ಸಂಬಂಧಿಸಿದಂತೆ ನಿಯಮಗಳು ವಾಣಿಜ್ಯ ಜಾಹೀರಾತುಗಳ ಅಳವಡಿಕೆ ಮತ್ತು ಪ್ರದರ್ಶನ ನಿಯಮಗಳು	09–18
		3 ಬಿ.	ಸ್ವ ಜಾಹೀರಾತುಗಳ ಅಳವಡಿಕೆ ಮತ್ತು ಪ್ರದರ್ಶನದ ಕುರಿತು ಪ್ರಮಾಣಗಳು	18
		3.ಸಿ.	ಕಿಟಕಿ (Window) ಜಾಹೀರಾತುಗಳ ಪ್ರಮಾಣಗಳು	18
		3.ಡಿ.	ಪೆಟ್ರೋಲ್ ಬಂಕ್‌ಗಳ ಮೇಲಿನ ಜಾಹೀರಾತು ಪ್ರಮಾಣಗಳು	19
		3.ಇ.	ಹೊರಾಂಗಣ ಚಲನಚಿತ್ರ ಜಾಹೀರಾತುಗಳು ಮತ್ತು ಸಿನಿಮಾ ಗೃಹಗಳಲ್ಲಿ ಪ್ರದರ್ಶಿಸುವ ಸ್ಲೈಡುಗಳ ಕುರಿತಾದ ಪ್ರಮಾಣಗಳು	19
		3.ಎಫ್.	ಚಾಲನೆಯಲ್ಲಿನ ಪ್ರದರ್ಶನಗಳ ಜಾಹೀರಾತುಗಳ ಪ್ರಮಾಣಗಳು (ಮೊಬೈಲ್ ಜಾಹೀರಾತುಗಳು)	20
		3.ಜಿ.	ಬ್ಯಾನರ್ಸ್ ತಾತ್ಕಾಲಿಕ ಕಮಾನುಗಳು ಮತ್ತು ಫಲಕಗಳು, ಕಟ್ಟಡಕ್ಕೆ ಸುತ್ತಿರುವ (Building Wraps) ಮೂಲಕ ಪ್ರದರ್ಶಿಸುವ ಜಾಹೀರಾತು ಪ್ರಮಾಣಗಳು	20–21
		3.ಹೆಚ್.	ಗಾಳಿ ತುಂಬಿರುವ ಮಾಧ್ಯಮದಲ್ಲಿ (ಬಲೂನುಗಳ ಮೇಲೆ) ಪ್ರದರ್ಶಿಸುವ ಜಾಹೀರಾತುಗಳ ಬಗ್ಗೆ ಪ್ರಮಾಣಗಳು	21–22
		3.ಐ.	ದಿಕ್ಸೂಚಿ ಫಲಕಗಳನ್ನು ಅಳವಡಿಸುವ ಮತ್ತು ಪ್ರದರ್ಶಿಸುವ ಕುರಿತಾದ ಪ್ರಮಾಣಗಳು	22

		3.ಜೆ.	ಪಾಲಿಕೆಯ ಸ್ವತ್ತುಗಳ ಮೇಲಿರುವ ವಿನ್ಯಾಸಗಳಲ್ಲಿ ಪ್ರದರ್ಶಿಸುವ ಜಾಹೀರಾತುಗಳ ಕುರಿತಾದ ಪ್ರಮಾಣಗಳು	23
		3.ಕೆ.	ಅಂಗಡಿ ಮುಂಗಟ್ಟುಗಳು, ರೆಸ್ಟೋರಂಟ್‌ಗಳು, ಹೋಟೆಲ್‌ಗಳು ಹಾಗೂ ಇತರೇ ವ್ಯವಹಾರ ಮತ್ತು ವಾಣಿಜ್ಯ ಸಂಸ್ಥೆಗಳು, ಇತ್ಯಾದಿಗಳಲ್ಲಿ ಪ್ರದರ್ಶಿಸುವ ಭಾರಿ ಸ್ವ ಜಾಹೀರಾತುಗಳಿಗೆ ಮಾತ್ರ ಅನ್ವಯಿಸುವ ಪ್ರಮಾಣಗಳು	23
		3.ಎಲ್.	ಕ್ರೀಡಾಂಗಣದಲ್ಲಿ ಹೊರಾಂಗಣ ಜಾಹೀರಾತು	23
	III	4	ಹೊರಾಂಗಣ ಜಾಹೀರಾತುಗಳ ಬಗ್ಗೆ ಕಾರ್ಯ ವಿಧಾನ	24–26
		4.ಎ.	ಹೊರಾಂಗಣ ಜಾಹೀರಾತುಗಳ ಅಳವಡಿಕೆ ಮತ್ತು ಪ್ರದರ್ಶನಗಳಿಗೆ ಕಾರ್ಯವಿಧಾನ	
		4.ಬಿ.	ಚಾಲಿತ ಪ್ರದರ್ಶನಗಳ ಕಾರ್ಯವಿಧಾನ	26
		4.ಸಿ.	ಬ್ಯಾನರ್ಸ್‌ಗಳು, ತಾತ್ಕಾಲಿಕ ಕಮಾನುಗಳು, ಫಲಕಗಳು ಮತ್ತು ಕಟ್ಟಡದ ರ‍್ಯಾಪ್‌ಗಳು (Wraps) ಇವುಗಳಲ್ಲಿ ಪ್ರದರ್ಶಿಸುವ ಜಾಹೀರಾತುಗಳಿಗೆ ಸಂಬಂಧಿಸಿದ ಕಾರ್ಯವಿಧಾನ	26–27
		4. ಡಿ.	ಗಾಳಿ ತುಂಬಿದ ಮಾಧ್ಯಮದ ಮೂಲಕ ಅಥವಾ ಬಲೂನುಗಳ ಮೇಲೆ ಪ್ರದರ್ಶಿಸುವ ಜಾಹೀರಾತುಗಳಿಗೆ ಕ್ರಮ ವಿಧಾನ	27
		4. ಇ.	ಜಾಹೀರಾತು ದಿಕ್ಸೂಚಿ ಫಲಕಗಳನ್ನು ಅಳವಡಿಸುವ ಕುರಿತು ಕ್ರಮ ವಿಧಾನ	27
		4. ಎಫ್.	ಅಂಗಡಿ ಮುಂಗಟ್ಟುಗಳು, ಉಪಹಾರ ಗೃಹಗಳು, ಹೋಟೆಲ್‌ಗಳು ಮತ್ತು ಇತರೇ ವ್ಯಾಪಾರ ಮತ್ತು ವಾಣಿಜ್ಯ ಸಂಸ್ಥೆ ಇತ್ಯಾದಿಗಳಲ್ಲಿ ತಯಾರಿಕೆದಾರರಿಂದ ಬಹುರಾಷ್ಟ್ರೀಯ ಕಂಪನಿಗಳನ್ನೊಳಗೊಂಡು ಇತರೇ ಉತ್ಪಾದಕರುಗಳಿಂದ ನೇರವಾಗಿ ಪ್ರದರ್ಶಿಸುವ ಜಾಹೀರಾತುಗಳಿಗೆ ಸಂಬಂಧಿಸಿದಂತೆ ಕ್ರಮ ವಿಧಾನ	27–28
		4. ಜಿ.	ಹೊರಾಂಗಣ ಕ್ರೀಡಾಂಗಣಗಳಲ್ಲಿ ಪ್ರದರ್ಶಿಸುವ ಜಾಹೀರಾತು ಸಂಬಂಧದ ಕ್ರಮ ವಿಧಾನ	28
	IV	5.	ಅಂಗಡಿ ಜಾಹೀರಾತುಗಳ ಪ್ರಮಾಣಗಳು	29–30
	V	6.	ಅಂಗಡಿ ಜಾಹೀರಾತುಗಳ ಕುರಿತಾದ ಕ್ರಮ ವಿಧಾನ	31
	VI	7.	ಇತರೆ ಕ್ರಮ ವಿಧಾನಗಳು	32
			ಜಾಹೀರಾತು ವಲಯಗಳ ಪಟ್ಟಿ	33–34
			ಅನುಬಂಧಗಳು	
	ಅನುಬಂಧ–1		ಜಾಹೀರಾತು ಶುಲ್ಕ ಹಾಗೂ ನೆಲಬಾಡಿಗೆ ದರ ಪಟ್ಟಿ	35–36
	ಅನುಬಂಧ–2		ಎ.ಬಿ.ಸಿ. ವಲಯಗಳ ಫಲಕಗಳ ಎತ್ತರ ಮತ್ತು ಅಳತೆಯ ವಿವರ	36
	ಅನುಬಂಧ–3 ಅನುಬಂಧ–3A		ಜಾಹೀರಾತು ಫಲಕಗಳ ಅನುಮತಿಗಾಗಿ ಸಲ್ಲಿಸಬೇಕಾದ ಅರ್ಜಿ ನಮೂನೆ ಮತ್ತು ವಿಧಾನ	37–47
	ಅನುಬಂಧ–4		ಅನುಮತಿ ನೀಡಿರುವ ಜಾಹೀರಾತು ಫಲಕಗಳ ನವೀಕರಣದ ನಿಗಧಿತ ಅರ್ಜಿ ನಮೂನೆ	48–53
	ಅನುಬಂಧ–5		ಜಾಹೀರಾತು ದಿಕ್ಸೂಚಿ ಫಲಕಗಳ ನಿಗಧಿತ ಅರ್ಜಿ ನಮೂನೆ	54
	ಅನುಬಂಧ–6		ಅಂಗಡಿ ಮುಂಗಟ್ಟು, ಜಾಹೀರಾತುಗಳ ಸ್ವಯಂ ಘೋಷಣೆಯ ನಿಗಧಿತ ಅರ್ಜಿ ನಮೂನೆ	55–58
	ಅನುಬಂಧ–7		ಜಾಹೀರಾತು ಏಜೆನ್ಸಿಯಾಗಿ ಪರವಾನಿಗೆ ಪಡೆಯುವ ಬಗ್ಗೆ ಸಲ್ಲಿಸುವ ಅರ್ಜಿ ನಮೂನೆ	59–61
	ಅನುಬಂಧ–8		ಜಾಹೀರಾತು ನೀಡುವ ಬಗ್ಗೆ ಭೂ ಮಾಲೀಕರಿಂದ ನಿರಾಕ್ಷೇಪಣಾ ಪ್ರಮಾಣ ಪತ್ರದ ನಮೂನೆ	62
	ಅನುಬಂಧ–9		ಕಟ್ಟಡ ಭದ್ರತೆಯ ನಿರಾಕ್ಷೇಪಣಾ ಪ್ರಮಾಣ ಪತ್ರದ ಅರ್ಜಿ ನಮೂನೆ	63
	ಅನುಬಂಧ–10		ಕಾರ್ಯಪಾಲಕ ಅಭಿಯಂತರರು ಕಟ್ಟಡ ಭದ್ರತೆಯ ಬಗ್ಗೆ ನೀಡುವ ನಿರಾಕ್ಷೇಪಣಾ ಪ್ರಮಾಣ ಪತ್ರದ	64

ದಾವಣಗೆರೆ ಮಹಾನಗರ ಪಾಲಿಕೆ

ಜಾಹೀರಾತು ಉಪವಿಧಿ – 2025 (ಕರಡು ಪ್ರತಿ)

(ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಅಧಿನಿಯಮ 1976ರ ಸೆಕ್ಷನ್ 423 (24) ರಡಿ) ರಚಿಸಿದ ಜಾಹೀರಾತು ಉಪವಿಧಿಗಳು

ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಜಾಹೀರಾತುಗಳ ನಿಷೇಧ, ನಿಯಂತ್ರಣ ಮತ್ತು ಕ್ರಮಬದ್ದತೆ ಕುರಿತು ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976 ರ ಸೆಕ್ಷನ್ 423 (24) ರಡಿಯಲ್ಲಿ ದಾವಣಗೆರೆ ಮಹಾನಗರ ಪಾಲಿಕೆ ರಚಿಸಿರುವ ಉಪವಿಧಿಗಳು.

ಭಾಗ – I

ಸಾಮಾನ್ಯ

1.ಎ **ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ**

1.ಎ 1 ಈ ಉಪವಿಧಿಗಳನ್ನು ದಾವಣಗೆರೆ ಮಹಾನಗರ ಪಾಲಿಕೆ ಉಪವಿಧಿಗಳು–2025 ಎಂದು ಕರೆಯತಕ್ಕದ್ದು.

1.ಎ 2 ಈ ಉಪ ವಿಧಿಗಳು ಕರ್ನಾಟಕ ಮುನಿಸಿಪಲ್ ಕಾಯ್ದೆ 1976 ರ ಅಧ್ಯಾಯ–2 ರ ಅನ್ವಯ ಪ್ರಕಟಿಸಿರುವ ದಾವಣಗೆರೆ ಮಹಾನಗರ ಪಾಲಿಕೆ ಅಧಿಕಾರ ವ್ಯಾಪ್ತಿಯೊಳಗೆ ಅನ್ವಯಿಸತಕ್ಕದ್ದು.

1.ಎ 3 ಈ ಉಪವಿಧಿಗಳು–2025 ನೇ ಸಾಲಿನ ಏಪ್ರಿಲ್ 1 ರಿಂದ ಜಾರಿಗೆ ಬರತಕ್ಕದ್ದು.

1 ಬಿ **ಉದ್ದೇಶ ಮತ್ತು ವ್ಯಾಪ್ತಿ ಈ ಉಪ ವಿಧಿಗಳ ಉದ್ದೇಶಗಳು ಈ ಕೆಳಕಂಡಂತಿವೆ.**

1 ಬಿ 1 ಯಾವುದೇ ಬೀದಿ, ಸಾರ್ವಜನಿಕ ರಸ್ತೆ ಅಥವಾ ಸಾರ್ವಜನಿಕ ಅಥವಾ ಖಾಸಗಿ ಸ್ಥಳ, ಸಾರ್ವಜನಿಕ ಅಥವಾ ಖಾಸಗಿ ಕಟ್ಟಡ, ಗೋಡೆ, ಫಲಕ, ಕಟ್ಟಡ, ಮರ, ದೀಪಸ್ಥಂಬಗಳು, ಅಥವಾ ಯಾವುದೇ ರಸ್ತೆಗಳಲ್ಲಿ ಸಾರ್ವಜನಿಕರಿಗೆ ಕಾಣಬಹುದಾದಂತಹ ಸ್ಥಳದಲ್ಲಿ, ಜಾಹೀರಾತು ಅಳವಡಿಸುವುದು, ದಾಖಲಿಸುವುದು, ಸ್ಥಾಪಿಸುವುದು, ನಾಟುವುದು, ನಿಲ್ಲಿಸುವುದು, ಫಲಕದ ಗಾತ್ರ ಮಾದರಿ ಮತ್ತು ಜಾಹೀರಾತುಗಳ ಪ್ರದರ್ಶನವನ್ನು ನಿರ್ಬಂಧಿಸುವುದು.

1 ಬಿ 2 ಅನಿರ್ಬಂಧಿತ ಸ್ಥಳಗಳಲ್ಲಿ ಜಾಹೀರಾತು ಫಲಕಗಳ ಅಳವಡಿಕೆ ಸ್ಥಾಪಿಸುವಿಕೆ, ದಾಖಲಿಸುವಿಕೆ, ನಿಲ್ಲಿಸುವುದು, ಅಳತೆ ಮಾದರಿ ಹಾಗೂ ಪ್ರದರ್ಶನವನ್ನು ನಿಯಂತ್ರಿಸಿ ಕ್ರಮಬದ್ದಗೊಳಿಸುವುದು.

1 ಬಿ 3 ಸಾರ್ವಜನಿಕ ಸುರಕ್ಷೆ ಫಲಕಗಳು ಮತ್ತು ಲಾಂಛನಗಳ ಕ್ರಮಬದ್ದ ಅಳವಡಿಕೆಗೆ ಪ್ರೋತ್ಸಾಹ ನೀಡುವುದು.

1 ಬಿ 4 ದಾವಣಗೆರೆ ನಗರವು ಶೈಕ್ಷಣಿಕ ಮತ್ತು ವಾಣಿಜ್ಯ ಚಟುವಟಿಕೆಗಳ ನಗರವಾಗಿರುವ ಹಿನ್ನೆಲೆಯಲ್ಲಿ ನಗರದ ಸೌಂದರ್ಯವನ್ನು ಉತ್ತಮಪಡಿಸಲು.

1 ಬಿ 5 ನಗರದ ಸೌಂದರ್ಯ ಮತ್ತು ವಾಣಿಜ್ಯಾತ್ಮಕ ಸಮತೋಲನವನ್ನು ಸಾಧಿಸಿ ನವೀನ ಮಾದರಿಗಳಿಗೆ ಉತ್ತೇಜನ ನೀಡುವುದು.

1 ಬಿ 6 ಸಮರ್ಪಕವಾದ ದಾಖಲಾತಿಗಳು ಹಾಗೂ ಕ್ರಮಬದ್ಧವಾಗಿ ಜಾರಿಗೊಳಿಸುವುದರ ಮೂಲಕ ಕಾನೂನಿನಡಿಯಲ್ಲಿ ನ್ಯಾಯಬದ್ಧವಾಗಿ ನಡೆಯುವುದು.

2 **ಅರ್ಥವಿವರಣೆ :–**

2 ಎ 1 **ಜಾಹೀರಾತು :–** ಜಾಹೀರಾತು ಎಂದರೆ ಯಾವುದೇ ಉತ್ಪನ್ನ ಅಥವಾ ಸೇವೆಯನ್ನು ವಾಣಿಜ್ಯಾತ್ಮಕ ದೃಷ್ಟಿಯಿಂದ ಪ್ರೋತ್ಸಾಹಿಸಲು ಯಾವುದೇ ಘೋಷಣೆ ಅಥವಾ ಶಬ್ದ, ಅಕ್ಷರ, ಮೂಲ ಆಕಾರ ಅಥವಾ ಇವೆಲ್ಲವನ್ನು ಜೋಡಿಸಿದ ಲಾಂಛನ, ಇವುಗಳ ಮೂಲಕ ನಿರ್ದೇಶಿಸಿರುವ ಫಲಕಗಳು, ಬ್ಯಾನರ್ಸ್‌ಗಳು ತಾತ್ಕಾಲಿಕ ಕಮಾನುಗಳು ಎಲೆಕ್ಟ್ರಾನಿಕ್ ಫಲಕಗಳು, ಅಥವಾ ಯಾವುದೇ ರೀತಿಯ ಕಣ್ಣಿಗೆ ಕಾಣುವ ಪ್ರದರ್ಶನ ಮಾಧ್ಯಮಗಳನ್ನೊಳಗೊಂಡಿರುತ್ತವೆ.

2 ಎ 2 **ಜಾಹೀರಾತು ಶುಲ್ಕ :–** ಎಂದರೆ ಕೆ.ಎಂ.ಸಿ ಕಾಯಿದೆ 1976 ರ ಸೆಕ್ಷನ್ 134 ರ ಅನ್ವಯ ಜಾಹೀರಾತುಗಳ ಮೇಲೆ ನಗರ ಪಾಲಿಕೆಯು ಆಗಿಂದ್ದಾಗ್ಗೆ ವಿಧಿಸುವ ಶುಲ್ಕ.

2 ಎ 3 **ಏಜೆನ್ಸಿ : –** ಎಂದರೆ ಪಾಲಿಕೆಯಲ್ಲಿ ಹೊರಾಂಗಣ ಜಾಹೀರಾತುಗಳ ಏಜೆನ್ಸಿಯಡಿ ಸದಸ್ಯತ್ವ ಹೊಂದಿದ್ದು ಅರ್ಜಿ ಸಲ್ಲಿಸಿರುವ ಯಾವುದೇ ವ್ಯಕ್ತಿ ಅಥವಾ ನೊಂದಣಿಯಾದ ಸಂಸ್ಥೆ, ವ್ಯಾಪಾರ ಮಳಿಗೆ, 1932 ರ ಪಾಲುದಾರಿಕೆ ಕಾಯ್ದೆಯನ್ವಯ ಅಥವಾ ಕಂಪನಿ ಕಾಯಿದೆ 1956 ರಲ್ಲಿ ಒಳಗೊಂಡಿರುವ ಭಾಗೀದಾರರು ಅಥವಾ ಕಂಪನಿ.

2 ಎ 4 **ಜಾಹೀರಾತು ಶಾಖೆಗೆ ನಿಯೋಜಿತ ಅಧಿಕಾರಿ : –** ಅಂದರೆ ದಾವಣಗೆರೆ ಮಹಾನಗರ ಪಾಲಿಕೆಗೆ ಜಾಹೀರಾತು ಇಲಾಖೆಗೆ ನಿಯೋಜಿಸಿರುವ ಜಾಹೀರಾತು ವಿಭಾಗಕ್ಕೆ ನಿಯೋಜಿತವಾದ ಯಾವುದೇ ಅಧಿಕಾರಿ.

2 ಎ 5 **ಪ್ರಕಾಶ ಮೂಲಕ (ಬ್ಯಾನರ್) ಜಾಹೀರಾತು : –** ಅಂದರೆ ಸಾರ್ವಜನಿಕ ಸ್ಥಳಗಳಲ್ಲಿ ಸಾರ್ವಜನಿಕರ ಗಮನ ಸೆಳೆಯುವುದಕ್ಕಾಗಿ ಯಾವುದೇ ಜಾಹೀರಾತು ಅಥವಾ ಘೋಷಣೆ ಅಥವಾ ಲಿಖಿತ ವಿಷಯವಿರುವ ವಸ್ತ್ರದ ಅಥವಾ ಇತರೆ ಪದಾರ್ಥದ ನಿಷೇಧಿತ ವಸ್ತುಗಳಿಂದ ತಯಾರಿಸಿದ ಪದಾರ್ಥಗಳನ್ನು ಹೊರತುಪಡಿಸಿ ತುಂಡು ಅಥವಾ ಬಗ್ಗುವ ಗುಣವುಳ್ಳ ವಸ್ತು.

2 ಎ 6 **ಕಟ್ಟಡಕ್ಕೆ ಸುತ್ತಿರುವ ಜಾಹೀರಾತು:–** ಅಂದರೆ (ಬಿಲ್ಡಿಂಗ್ ರ್ಯಾಪ್ ಜಾಹೀರಾತು) ಕಟ್ಟಡದ ಯಾವುದೇ ಭಾಗದಲ್ಲಿ ಅಥವಾ ಕಟ್ಟಡ ನಿರ್ಮಾಣ ಹಂತದಲ್ಲಿರುವ ಕಟ್ಟಡಕ್ಕೆ ಅಂಟಿಸುವ ಅಥವಾ ಮುಂಭಾಗದಲ್ಲಿ ಅಂಟಿಸಿರುವ ಅಥವಾ ಪ್ರದರ್ಶಿಸುವ ಜಾಹೀರಾತು.

2 ಎ 7 **ತಾತ್ಕಾಲಿಕ ಸಗಟು ಜಾಹೀರಾತು : –** ನಿರ್ದಿಷ್ಟ ಸ್ಥಳದಲ್ಲಿ ಅಥವಾ ರಸ್ತೆಯಲ್ಲಿ ಹಬ್ಬದ ಅಥವಾ ಉತ್ಸವ ಸಂದರ್ಭದಲ್ಲಿ ಪ್ರದರ್ಶಿಸುವ ಜಾಹೀರಾತು. ಇದಕ್ಕೆ ಸಂಬಂಧಿಸಿದಂತೆ ತಾತ್ಕಾಲಿಕ ಫಲಕಗಳು, ಕಮಾನುಗಳು, ಬ್ಯಾನರ್ಸ್ ಹಾಗೂ ಸ್ಥಂಬಗಳ ಮೇಲಿನ ಪತಾಕೆ, ದೊಡ್ಡ ಗಾತ್ರದ ವಾಣಿಜ್ಯ ಫಲಕಗಳು, ಸೇವಾ ವಾಹನ ಅಥವಾ ಡೆಲಿವರಿ ವಾಹನ ಮೇಲೆ ಪ್ರದರ್ಶಿಸುವ ಜಾಹೀರಾತುಗಳು.

2 ಎ 8 **ರೈಲ್ವೆ/ಬಸ್ ತಂಗುದಾಣ ಜಾಹೀರಾತು : –** ರೈಲ್ವೆ ನಿಲ್ದಾಣ ಮತ್ತು ರೈಲ್ವೆಗೆ ಸೇರಿದ ಸ್ವತ್ತಿನಲ್ಲಿ ಹಾಗೂ ಬಸ್ ನಿಲ್ದಾಣ ಮತ್ತು ಬಸ್ ನಿಲ್ದಾಣದ ಆವರಣದಲ್ಲಿ ಪ್ರದರ್ಶಿಸುವ ಜಾಹೀರಾತು ಬಸ್ ತಂಗುದಾಣದ ವಿನ್ಯಾಸ ಮೇಲೆ ಟ್ರಾನ್ಸ್‌ಲೈಟ್ ಅಥವಾ ವಿನೈಲ್ ಪ್ರದರ್ಶನ ಜಾಹೀರಾತು.

2 ಎ 9 **ನೆಲಬಾಡಿಗೆ : –** ಜಾಹೀರಾತು ಫಲಕವನ್ನು ಪಾಲಿಕೆ ವ್ಯಾಪ್ತಿಯಲ್ಲಿ ನಗರ ಪಾಲಿಕೆಗೆ ಸೇರಿದ ಜಾಗಗಳಲ್ಲಿ ಅಳವಡಿಸುವ ಫಲಕಕ್ಕೆ ನೀಡುವ ಬಾಡಿಗೆ.

2 ಎ 10 **ವಾಣಿಜ್ಯ ಫಲಕಗಳು : –** ಜಾಹೀರಾತು ಏಜೆನ್ಸಿಗಳು ಖಾಸಗಿ ಉದ್ದಿಮೆದಾರರು, ವ್ಯಾಪಾರಸ್ಥರು ಮತ್ತು ಇನ್ನಿತರೆ ಸಂಸ್ಥೆಗಳು ವಾಣಿಜ್ಯ ದೃಷ್ಟಿಯಿಂದ ಪ್ರದರ್ಶಿಸುವ ಜಾಹೀರಾತು ಫಲಕಗಳು.

2 ಎ 11 **ಆಯುಕ್ತರು : –** ಅಂದರೆ ದಾವಣಗೆರೆ ಮಹಾನಗರ ಪಾಲಿಕೆಯ ಆಯುಕ್ತರು

2 ಎ 12 **ಸೂಕ್ತ ಪ್ರಾಧಿಕಾರ : –** ಅಂದರೆ ಆಯುಕ್ತರು ಅಥವಾ ಪಿ.ಪಿ ಕಾಯ್ದೆಯ ಅಡಿ ನಿಯೋಜಿಸುವ ಅಧಿಕಾರಿ ಅಥವಾ ಪೌರನಿಗಮ ಕಾಯಿದೆ ಅಡಿ ನಿಯೋಜಿಸುವ ಅಧಿಕಾರಿ.

2 ಎ 13 **ಪಾಲಿಕೆ : –** ಅಂದರೆ ದಾವಣಗೆರೆ ಮಹಾನಗರ ಪಾಲಿಕೆ

2 ಎ 14 **ದಿಕ್ಸೂಚಿ ಫಲಕಗಳು : –** ಖಾಸಗಿ ಅಥವಾ ವಾಣಿಜ್ಯ ಸಂಸ್ಥೆಗಳು ತಮ್ಮ ಕಛೇರಿ ಅಥವಾ ವಾಣಿಜ್ಯ ಸ್ಥಳಗಳಿಗೆ ಹೋಗಲು ಅಳವಡಿಸಲಾದ ಫಲಕಗಳು

2 ಎ 15 **ವಿಳಂಬಿತ ನವೀಕರಣ ಶುಲ್ಕ : –** ಬೈಲಾದಲ್ಲಿ (ಉಪವಿಧಿಗಳಲ್ಲಿ ಅಥವಾ ಉಪನಿಯಮಗಳಲ್ಲಿ) ನವೀಕರಣಕ್ಕಾಗಿ ನಿಗಧಿಪಡಿಸಿದ ಅವಧಿ ಮೀರಿ ನವೀಕರಣಕ್ಕಾಗಿ ಸಲ್ಲಿಸಿದ ಅರ್ಜಿಗಳಿಗೆ ವಿಧಿಸುವ ಶುಲ್ಕ/ದಂಡ.

2 ಎ 16 **ಎಲೆಕ್ಟ್ರಾನಿಕ್ ಪ್ರದರ್ಶನ : –** ವಿದ್ಯುಚ್ಛಕ್ತಿ ಸಹಾಯದಿಂದ ಪ್ರದರ್ಶಿಸುವ ಜಾಹೀರಾತು ಪ್ರದರ್ಶನ, ಎಲೆಕ್ಟ್ರಾನಿಕ್ ಅಥವಾ ವಿದ್ಯುತ್‌ನಿಂದ ಅಂದರೆ ನಿಯಾನ್ ಲೈಟ್ ಅಥವಾ ಎಲ್‌ಸಿಡಿ ಇತ್ಯಾದಿಗಳ ಮೂಲಕ ಪ್ರದರ್ಶಿಸುವ ಜಾಹೀರಾತುಗಳು.

2 ಎ 17 **ಸದಸ್ಯತ್ವ ಹೊಂದಿರುವ ಜಾಹೀರಾತು ಏಜೆನ್ಸಿ : –** ನಗರ ಪಾಲಿಕೆಗೆ ಜಾಹೀರಾತು ಏಜೆನ್ಸಿ ಪ್ರದರ್ಶಿತ ಶುಲ್ಕ ಪಾವತಿಸಿ ಪಾಲಿಕೆಯಿಂದ ಸದಸ್ಯತ್ವ ಹೊಂದಿರುವ ಜಾಹೀರಾತು ಏಜೆನ್ಸಿ ಇವರುಗಳು ಹೊರಾಂಗಣ ಜಾಹೀರಾತುದಾರರಾಗಿರುವವರು ಅಥವಾ ಇತರೇ ಮಾಧ್ಯಮಗಳ ಜಾಹೀರಾತುದಾರರಾಗಿರುವವರು.

2 ಎ 18 **ಸದಸ್ಯತ್ವ(ನೊಂದಣಿ) ಶುಲ್ಕ : –** ಪಾಲಿಕೆಯ ಜಾಹೀರಾತು ಸದಸ್ಯತ್ವ ಹೊಂದಲು ಪ್ರತಿ ವರ್ಷ ಪಾಲಿಕೆಗೆ ಪಾವತಿ ಮಾಡಬೇಕಿರುವ ನಿಗಧಿಪಡಿಸಿದ ಶುಲ್ಕ.

2 ಎ 19 **ಫುಟ್ ಓವರ್ ಬ್ರಿಡ್ಜ್ ಜಾಹೀರಾತು : –** ಪಾದಚಾರಿಗಳು ಉಪಯೋಗಿಸುವ ಮೇಲು ಸೇತುವೆ ಇಕ್ಕೆಲಗಳಲ್ಲಿ ಪ್ರದರ್ಶಿಸುವ ಜಾಹೀರಾತು ಅಥವಾ ಪಾದಚಾರಿ ಮೇಲು ಸೇತುವೆ ಮೇಲೆ ಇಕ್ಕೆಲಗಳಲ್ಲಿ ಪ್ರದರ್ಶಿಸುವ ಜಾಹೀರಾತು.

2 ಎ 20 **ವಿದ್ಯುತ್ ಪೆಟ್ಟಿಗೆ ಜಾಹೀರಾತು : –** ಪಾರದರ್ಶಕ ಅಥವಾ ತಿಳಿಯಾದ ಪ್ಲಾಸ್ಟಿಕ್ ಹಾಳೆಯ ಮೇಲ್ಮೈಯುಳ್ಳ ಲೋಹದ ಹಾಳೆಯ ಪೆಟ್ಟಿಗೆಯ ಹಿಂಭಾಗದಿಂದ ವಿದ್ಯುತ್ ದೀಪ ಬೆಳಗಿ ಪ್ರದರ್ಶಿಸುವ ಜಾಹೀರಾತು.

2 ಎ 21 **ಗ್ಯಾಂಟ್ರಿ ಜಾಹೀರಾತು :–** ಅಂದರೆ ಲೋಹದಿಂದ ತಯಾರಿಸಿದ ಮತ್ತು ಮೇಲ್ಭಾಗವನ್ನು ತೊಲೆಯಿಂದ ಜೋಡಿಸಲ್ಪಟ್ಟ ರಸ್ತೆಯ ಎರಡೂ ಬದಿಗಳಲ್ಲಿರುವ ಕಂಬಗಳ ಮೇಲೆ ಅಳವಡಿಸಿರುವ ಗ್ಯಾಂಟ್ರಿಗಳ ಮೇಲೆ ಸಂಚಾರದ ವಿರುದ್ಧ ದಿಕ್ಕಿನಲ್ಲಿರುವ ರಸ್ತೆಯ ಮೇಲೆ ಪ್ರದರ್ಶಿಸುವ ಜಾಹೀರಾತುಗಳು.

2 ಎ 22 **ಫಲಕಗಳ ಜಾಹೀರಾತು :–**(Hoardings Advertisement) ಪ್ರಚಾರದ ದೃಷ್ಟಿಯಿಂದ ಅಥವಾ ಮಾಹಿತಿ ನೀಡಿ ಜನರನ್ನು ಒಂದು ಸ್ಥಳ, ವ್ಯಕ್ತಿಗಳಿರುವಲ್ಲಿಗೆ, ಸಾರ್ವಜನಿಕ ಮನರಂಜನಾ ಅಥವಾ ಮಾರಾಟಕ್ಕಿರುವ ವಸ್ತುಗಳ ವಿಷಯದಲ್ಲಿ ಆಕರ್ಷಿಸುವ ದೃಷ್ಟಿಯಿಂದ ನೆಲದ ಮೇಲೆ ಅಥವಾ ಕಟ್ಟಡದ ಮೇಲ್ಭಾಗ, ಗೋಡೆಯ ಮೇಲೆ ಅಥವಾ ಪೆರಾಫಿಟ್ ಅಥವಾ ಅದರ ಮೇಲ್ಭಾಗದಲ್ಲಿ ಇರುವ ವಿನ್ಯಾಸದ ಯಾವುದೇ ಚಿಹ್ನೆ, ಅಕ್ಷರ ಅಥವಾ ರೇಖಾ ಚಿತ್ರದ ಮೂಲಕ ಹೊರಾಂಗಣದಲ್ಲಿ ಮಾತ್ರ ಪ್ರದರ್ಶಿಸುವ ಜಾಹೀರಾತು.

2 ಎ 23 **ಅನಧಿಕೃತ ಫಲಕದ ಜಾಹೀರಾತು : –** ಅಂದರೆ ನ್ಯಾಯ ಸಮ್ಮತ ನವೀಕರಣ ಪರವಾನಿಗೆ ಹೊಂದದೆ ಇರುವ ಅಥವಾ ಪರವಾನಿಗೆ ರದ್ದಾದ ಮೂವತ್ತು ದಿನಗಳೊಳಗಾಗಿ ಜಾಹೀರಾತಿನ ವಿನೈಲ್, ಟ್ರಾನ್ಸ್‌ಲೈಟ್ ಮುಂತಾದ ಹಾಳೆಗಳನ್ನು ಬದಲಾಯಿಸದೇ ಇರುವ (ಆಡಳಿತಾತ್ಮಕ

ವಿಳಂಬ ಹೊರತುಪಡಿಸಿ) ಜಾಹೀರಾತು, ಜಾಹೀರಾತು ಪ್ರದರ್ಶನಕ್ಕೆ ನೀಡಿದ ಪರವಾನಿಗೆ ರದ್ದುಗೊಳಿಸಿರುವ ಅಥವಾ ತಿರಸ್ಕರಿಸಲ್ಪಟ್ಟ ಏಜೆನ್ಸಿಗಳೇ ಜಾಹೀರಾತುಗಳು ಈ ನಿರೂಪಣೆಯ ವ್ಯಾಪ್ತಿಗೆ ಒಳಗೊಂಡಿದೆ.

2 ಎ 24 **ಸಮ್ಮಿಶ್ರ ಜಾಹೀರಾತುಗಳ ಫಲಕ : –** ಅಂದರೆ ವಿವಿಧ ರೀತಿಯ ಫಲಕಗಳು ಅಂದರೆ ಪ್ರಕಾಶಿತವಲ್ಲದ ಪ್ರಕಾಶಿತ ಮತ್ತು ಭಾಗಶ: ನಿಯಾನ್ ಲಕ್ಷಣವನ್ನು ಹೊಂದಿರುವ ಫಲಕಗಳನ್ನು ಜೋಡಿಸಿರುವ ಫಲಕ ಇಂತಹ ಫಲಕಗಳಿಗೆ ಅನುಮತಿ ನೀಡುವಾಗ ಫಲಕದ ವಿನ್ಯಾಸ ಹಾಗೂ ಸುರಕ್ಷತಾ ಕ್ರಮ, ಮುಂತಾದವುಗಳ ಬಗ್ಗೆ ಖಾತರಿ ಪಡಿಸಿಕೊಂಡ ನಂತರವೇ ಆಯುಕ್ತರು ಅನುಮತಿ ನೀಡಬಹುದು.

2 ಬಿ **ಜಾಹೀರಾತು ಫಲಕಗಳನ್ನು ಈ ಕೆಳಕಂಡ ವರ್ಗೀಕರಿಸಲಾಗಿದೆ.**

2 ಬಿ 1 **ಪ್ರಕಾಶಿತವಲ್ಲದ ಜಾಹೀರಾತು ಫಲಕ : –** ಜಾಹೀರಾತು ಫಲಕ ಬೆಳಗಿಸಲು ಅದರ ಎದುರಿಗೆ ವಿದ್ಯುತ್ ದೀಪವಿಲ್ಲದ ಫಲಕ.

2 ಬಿ 2 **ಪ್ರಕಾಶಿತ ಜಾಹೀರಾತು ಫಲಕ : –** ವಿದ್ಯುತ್ ದೀಪದ ಮುಖಾಂತರ ಬೆಳಗಿಸುವ ಮೂಲಕ ಪ್ರಕಾಶಗೊಳ್ಳುವ ಸೂರ್ಯಾಸ್ತಮದ ನಂತರವೂ ಗೋಚರಿಸುವ ಜಾಹೀರಾತು ಫಲಕ.

2 ಬಿ 3 **ಟ್ರೈವಿಜನ್ ಜಾಹೀರಾತು : –** ಅಂದರೆ ಒಂದು ಮೇಲ್ಮೈ ನಂತರ ಇನ್ನೊಂದು ಮೇಲ್ಮೈ ಗೋಚರಿಸುವಂತೆ ಸಮಕಾಲಿಕವಾಗಿ ಸುತ್ತುತ್ತಿರುವ ತ್ರಿಕೋನಾಕಾರದ ಪಟ್ಟಿಯ ಮೇಲೆ ಪ್ರದರ್ಶಿಸುವ ಜಾಹೀರಾತು ತ್ರಿಕೋನಾಕಾರದ ಮೂರು ಮೇಲ್ಭಾಗಗಳ ಮೇಲೆ ಮೂರು ಬೇರೆ ಬೇರೆ ಜಾಹೀರಾತು ಸಂದೇಶಗಳನ್ನು ಪ್ರದರ್ಶಿಸಲಾಗುತ್ತದೆ. ಇವು ಪ್ರಕಾಶಿತವಿರಬಹುದು ಅಥವಾ ಇಲ್ಲದಿರಬಹುದು.

2 ಬಿ 4 **ಬ್ಯಾಕ್‌ಲಿಟ್ ಜಾಹೀರಾತು ಫಲಕ : –** ವಿದ್ಯುತ್ ದೀಪದ ಮುಂಭಾಗದಲ್ಲಿ ಅಳವಡಿಸಿರುವ ಮುದ್ರಿತ ವಿನೈಲ್ ಜಾಹೀರಾತು ಫಲಕ

2 ಬಿ 5 **ಯೂನಿಪೋಲ್/ಏಕ ಕಂಬ ಫಲಕಗಳು : –** ಒಂದೇ ಸ್ಟೀಲ್ ಕೊಳವೆಯ ಆಧಾರದ ಮೇಲೆ ವಿನ್ಯಾಸವನ್ನು ಅಳವಡಿಸಿ ಜಾಹೀರಾತನ್ನು ಪ್ರದರ್ಶಿಸುವುದು.

2 ಬಿ 6 **ನಿಯಾನ್ ಜಾಹೀರಾತು ಫಲಕಗಳು : –** ಅಂದರೆ ರಾತ್ರಿಯ ಸಮಯದಲ್ಲಿ ಮಾತ್ರ ಚಾಲನೆಗೊಳ್ಳುವ ನಿಯಾನ್ ದೀಪ/ಬಲ್ಬು/ಪ್ರಕಾಶ ಹೊಂದಿರುವ ಜಾಹೀರಾತು ಫಲಕ ಇವುಗಳು ಒಂದು ಅಥವಾ ಹೆಚ್ಚು ವಿವಿಧ ಬಣ್ಣಗಳಲ್ಲಿ ಸಮಕಾಲಿಕವಾಗಿ ಬೆಳಗುವ ಫಲಕ.

2 ಬಿ 7 **ಗಾಳಿಯ ಮೂಲಕ ಬಲೂನುಗಳಲ್ಲಿ ಪ್ರದರ್ಶಿಸುವ ಜಾಹೀರಾತು : –** ಅಂದರೆ ಹೀಲಿಯಂ ಗ್ಯಾಸ್ ತುಂಬಿ ಬಲೂನುಗಳು ಅಥವಾ ಗಾಳಿಯಲ್ಲಿ ತೇಲುವ ವಾಯುಮಾನಗಳ ಮೇಲೆ ಪ್ರದರ್ಶಿತ ಜಾಹೀರಾತು.

2 ಬಿ 8 **ಹೊರಾಂಗಣ ಜಾಹೀರಾತು : –** ಹೊರವಲಯದಲ್ಲಿ ಪ್ರದರ್ಶಿಸುವ ಜಾಹೀರಾತು.

2 ಬಿ 9 **ಹೊರಾಂಗಣ ಜಾಹೀರಾತು ಮಾಧ್ಯಮ : –** ಅಂದರೆ ಫಲಕಗಳು ಗ್ಯಾಂಟ್ರಿಗಳು, ಕಟ್ಟಡಕ್ಕೆ ಸುತ್ತಿದ ಜಾಹೀರಾತುಗಳು ಗಾಳಿಯಲ್ಲಿ ತೇಲುವ, ಇತ್ಯಾದಿ ಜಾಹೀರಾತು ಮಾಧ್ಯಮಗಳ ಮೂಲಕ ಹೊರವಲಯದಲ್ಲಿ ಪ್ರದರ್ಶಿಸುವ ಜಾಹೀರಾತುಗಳು.

2 ಬಿ 10 **ಸಂಚಾರಿ ವಾಹನ (ಮೊಬೈಲ್) ಜಾಹೀರಾತು ಪ್ರದರ್ಶನ : –** ಅಂದರೆ ಚಲಿಸುತ್ತಿರುವ ಅಥವಾ ಆಯ್ದ ಸ್ಥಳದಲ್ಲಿ ನಿಲ್ಲಿಸಿ ವಾಹನದ ಹಿಂದಿನ ಬದಿಯಲ್ಲಿ ನಿಲ್ಲಿಸಿದ ಅಥವಾ ಸುತ್ತುವ ಅಥವಾ ಒಂದು ವಸ್ತುವಿನ ಬಗ್ಗೆ ಹಲಗೆಯ ಒಂದು ಬದಿ ಅಥವಾ ಎರಡೂ ಬದಿಗಳಲ್ಲಿ ವೀಕ್ಷಿಸಲು ಅನುಕೂಲವಾಗುವಂತೆ ಪ್ರದರ್ಶಿಸುವ ಜಾಹೀರಾತು

2 ಬಿ 11 **ಭಿತ್ತಿಪತ್ರ : –** ಅಂದರೆ ಸಾರ್ವಜನಿಕ ಸ್ಥಳದಲ್ಲಿ ಜಾಹೀರಾತಿನ ಪ್ರದರ್ಶನಕ್ಕೆ ಮೇಲ್ಮೈ ಇರುವ ಗೋಡೆಗೆ ಪೆರಾಪೆಟ್ ಮೇಲೆ ಹಾಳೆ ಅಥವಾ ವಸ್ತು ಅಂಟಿಸುವುದನ್ನು ಮತ್ತು ಬರೆಯುವುದನ್ನು ಸಂಪೂರ್ಣ ನಿಷೇಧಿಸಲಾಗಿದೆ.

2 ಬಿ 12 **ಪೋಲೀಸ್ ಕಿಯೋಸ್ಕ್ : –** ಪ್ರಕಾಶಿತ ಹೊಳೆಯುವ ಚಿಹ್ನೆಗಳನ್ನೊಳಗೊಂಡಂತೆ ಸಂಚಾರ ಪೋಲೀಸ್ ಕಿಯೋಸ್ಕ್ ಮೇಲ್ಚಾವಣೆಯ ಮೇಲೆ ಪ್ರದರ್ಶಿಸುವ ಜಾಹೀರಾತು

2 ಬಿ 13 **ದೂರವಾಣಿ ಕಿಯೋಸ್ಕ್ : –** ದೂರವಾಣಿ ಕಿಯೋಸ್ಕ್ ಮೇಲೆ ಪ್ರದರ್ಶಿಸುವ ಜಾಹೀರಾತು

2 ಬಿ 14 **ಸ್ಥಂಬ/ಬೀದಿ ದೀಪದ ಕಂಬ ಜಾಹೀರಾತು (Pole Advertisement) :** ಅಂದರೆ ಜಾಹೀರಾತುಗಳಿಗೆಂದೇ ಇರುವ ಸ್ಥಂಬದ/ಬೀದಿ ದೀಪದ ಕಂಬದ ಮೇಲೆ ಅಳವಡಿಸಿದ ಹಲಗೆಗಳ ಒಂದು ಅಥವಾ ಎರಡೂ ಬದಿಗಳಲ್ಲಿ ಪ್ರದರ್ಶಿಸುವ ಜಾಹೀರಾತು ಪೋಲ್ಯಾಡ್ಸ್ ಫಲಕವನ್ನು ಅಳವಡಿಸುವುದನ್ನು ನಿಷೇದಿಸಿದೆ.

2 ಬಿ 15 **ನಿಗಧಿತ ಅರ್ಜಿ ನಮೂನೆ : –** ಅಂದರೆ ಜಾಹೀರಾತನ್ನು ಅಳವಡಿಸಲು ಮತ್ತು ಪ್ರದರ್ಶಿಸಲು ಪಡೆಯಬೇಕಾದ ಪರವಾನಿಗೆಗಾಗಿ ಅಥವಾ ಹೊರ ಮಾಧ್ಯಮಗಳಿಗೆ ಈಗಾಗಲೇ ನೀಡಿರುವ ಪರವಾನಿಗೆಯ ನವೀಕರಣಕ್ಕಾಗಿ ಪಾಲಿಕೆಗೆ ಸಲ್ಲಿಸಲು ಆಯುಕ್ತರಿಂದ ನಿಗಧಿಪಡಿಸಿರುವ ಅರ್ಜಿ ನಮೂನೆ.

2 ಬಿ 16 **ಸಾರ್ವಜನಿಕರ ಉಪಯೋಗಕ್ಕಾಗಿರುವ ಜಾಹೀರಾತು : –** ಅಂದರೆ ಸಾರ್ವಜನಿಕರ ಉಪಯೋಗಕ್ಕಾಗಿರುವ ಕಟ್ಟಡ ಅಥವಾ ವಿನ್ಯಾಸ ಅಂದರೆ ಸಾರ್ವಜನಿಕ ಶೌಚಾಲಯ ಇತ್ಯಾದಿಗಳಲ್ಲಿ ಪ್ರದರ್ಶಿಸುವ ಜಾಹೀರಾತು.

2 ಬಿ 17 **ಸಾರ್ವಜನಿಕ ಉದ್ಯಾನವನ : –** ಅಂದರೆ ರಾಜ್ಯ ಸರ್ಕಾರ ಅಥವಾ ಪಾಲಿಕೆ, ದಾವಣಗೆರೆ–ಹರಿಹರ ನಗರಾಭಿವೃದ್ದಿ ಪ್ರಾಧಿಕಾರ ಇತ್ಯಾದಿ ಅಂಗ ಸಂಸ್ಥೆಗಳು ಸಾರ್ವಜನಿಕರ ಮನರಂಜನೆಗಾಗಿ ನಿರ್ವಹಿಸುತ್ತಿರುವ ಉದ್ಯಾನವನಗಳು.

2 ಬಿ 18 **ರಸ್ತೆ ವಿಭಜಕಗಳ ಜಾಹೀರಾತು : – (Road median or Road divider)** ಅಂದರೆ ಸಾರ್ವಜನಿಕರು ಉಪಯೋಗಿಸುವ ಎರಡು ರಸ್ತೆಗಳ ಮಧ್ಯದಲ್ಲಿ ಅಂದರೆ ಮೀಡಿಯನ್/ರಸ್ತೆ ವಿಭಜಕದಲ್ಲಿ ಪ್ರದರ್ಶಿಸುವ ಜಾಹೀರಾತುಗಳು.

2 ಬಿ 19 **ಮನರಂಜನಾ ಮೈದಾನಗಳು : –** ಅಂದರೆ ಮಾರಾಟದ ವಸ್ತುಗಳ ಪ್ರದರ್ಶನಗಳು, ಕ್ರೀಡಾ ಕೂಟಗಳು ಕಲೆ, ಸಾಂಸ್ಕೃತಿಕ ಮತ್ತು ಸಂಗೀತ ಕಾರ್ಯಕ್ರಮಗಳು ಇತ್ಯಾದಿಗಳಿಗೆಂದೇ, ಸರ್ಕಾರದ ಅಥವಾ ಪಾಲಿಕೆ ಸ್ವತ್ತಿನಲ್ಲಿ ನಿಗಧಿಪಡಿಸಿರುವ ಸ್ಥಳಗಳು.

2 ಬಿ 20 **ಪುನರ್ ಪರಿಶೀಲನಾ ಅರ್ಜಿ : –** ಅಂದರೆ ಹೊರಾಂಗಣ ಜಾಹೀರಾತಿನ ಪ್ರದರ್ಶನ ಮತ್ತು ಅಳವಡಿಕೆಗೆ ಸಲ್ಲಿಸಿದ ಅರ್ಜಿಗೆ ಸಂಬಂಧಿಸಿದಂತೆ ಪಾಲಿಕೆ ನೀಡಿದ ಆದೇಶದ ಪುನರ್ ಪರಿಶೀಲನೆ ಕೋರಿ ಆಯುಕ್ತರಿಗೆ ನಿಗಧಿತ ನಮೂನೆಯಲ್ಲಿ ಸಲ್ಲಿಸುವ ಅರ್ಜಿ.

2 ಬಿ 21 **ಸ್ಕ್ರೋಲರ್ ಜಾಹೀರಾತು ಪ್ರದರ್ಶನ : –** ಅಂದರೆ ಸುರಳಿಯಂತೆ ಸುತ್ತುತ್ತಿರುವ ಮುದ್ರಿತ ಹಾಳೆಯನ್ನು ರೋಲರುಗಳ ಆಧಾರದ ಮೇಲೆ ಉರುಳಿಸಿ ಪೆಟ್ಟಿಗೆಯಂತಿರುವ ಸಾಧನದ ಮೇಲೆ ಪ್ರದರ್ಶಿಸುವ ಜಾಹೀರಾತು ಇದು ಪ್ರಕಾಶಿತವಿರದಿರಬಹುದು ಅಥವಾ ಪ್ರಕಾಶಿತವಿರಬಹುದು.

2 ಬಿ 22 **ಸ್ವ ಜಾಹೀರಾತು : –** ಅಂದರೆ ಪ್ರಕಾಶಿತ ಅಥವಾ ಪ್ರಕಾಶಿತವಲ್ಲದ ನಾಮಫಲಕ. ಕೇವಲ ಹೆಸರು ಮತ್ತು ಒಂದು ನಿರ್ದಿಷ್ಟ ಕಟ್ಟಡದಲ್ಲಿ ನಡೆಸುತ್ತಿರುವ ಸ್ವಂತ ವ್ಯವಹಾರ ಅಥವಾ ಸಾಮಾಜಿಕ ಚಟುವಟಿಕೆಗೆ ಸಂಬಂಧಿಸಿದಂತೆ ವಿಳಾಸವನ್ನಷ್ಟೇ ಹೊಂದಿರತಕ್ಕದ್ದು.

2 ಬಿ 23 **<u>ಅಂಗಡಿ ಮುಂಗಟ್ಟಿನ ಜಾಹೀರಾತು : –</u>** ವ್ಯಾಪಾರ ಅಥವಾ ಅಲ್ಲಿನ ವ್ಯವಹಾರ ನಡೆಸುತ್ತಿರುವ ಸ್ಥಳದಲ್ಲಿ ಮಾರಾಟಕ್ಕಿರುವ ವಸ್ತುಗಳು, ಹೆಸರು, ನೀಡುತ್ತಿರುವ ಸೇವೆಯ ವಿವರ ಇವುಗಳ ಬಗ್ಗೆ ವಿಳಾಸ ಪ್ರದರ್ಶಿಸುವ ಇತ್ಯಾದಿ ಒಳಗೊಂಡ ಜಾಹೀರಾತು.

2 ಬಿ 24 **<u>ಅಂಗಡಿ ಮುಂಗಟ್ಟಿನ ಸಗಟು (ಬಲ್ಕ್) ವಾಣಿಜ್ಯ ಜಾಹೀರಾತು : –</u>** ಅಂದರೆ ವಿವಿಧ ವಾಣಿಜ್ಯ ಸಂಸ್ಥೆಗಳು ತಮ್ಮ ವ್ಯಾಪಾರದ ಗುರುತು ಅಥವಾ ಚಿಲ್ಲರೆ ಮಾರಾಟಕ್ಕಿರುವ ಉತ್ಪನ್ನ ಅಥವಾ ಉತ್ಪನ್ನಗಳ ಹೆಸರು ಅಥವಾ ಇತರೇ ಚಿಲ್ಲರೆ ವ್ಯವಹಾರದ ಕುರಿತು ಚಿಲ್ಲರೆ ಮಾರಾಟ ಅಂಗಡಿಗಳ ಮುಂಗಟ್ಟುಗಳಲ್ಲಿ ಸದರಿ ಚಿಲ್ಲರೆ ಅಂಗಡಿಯ ಹೆಸರು ಮತ್ತು ವಿಳಾಸದೊಂದಿಗೆ ಪ್ರದರ್ಶಿಸುವ ಜಾಹೀರಾತು.

2 ಬಿ 25 **<u>ಬೀದಿ ಪೀಠೋಪಕರಣಗಳ ಮೇಲಿನ ಜಾಹೀರಾತು : –</u>** ಅಂದರೆ ಸಾರ್ವಜನಿಕರ ಉಪಯೋಗಕ್ಕಾಗಿರುವ ವಿನ್ಯಾಸಗಳ ಅಂದರೆ ಬೆಂಚುಗಳು, ಕಸದ ತೊಟ್ಟಿಗಳು, ಹಳಿಗಳು ಮುಂತಾದವುಗಳ ಮೇಲೆ ಪ್ರದರ್ಶಿಸುವ ಜಾಹೀರಾತು.

2 ಬಿ 26 **<u>ತಾತ್ಕಾಲಿಕ ಕಮಾನು ಜಾಹೀರಾತು : –</u>** ಕೆಲವು ವಿಶೇಷ ಸಂದರ್ಭಗಳಲ್ಲಿ ಗಣ್ಯ ವ್ಯಕ್ತಿಗಳು ಭೇಟಿ ನೀಡುವ ಸಮಯದಲ್ಲಿ ಅವರುಗಳಿಗೆ ಸ್ವಾಗತ ಕೋರಲು ಅಥವಾ ಅಂಗಡಿಗಳ ಮಾರಾಟದ ಬಗ್ಗೆ ಪ್ರದರ್ಶಿಸುವ ಜಾಹೀರಾತು ಇಂತಹ ಪ್ರದರ್ಶನಗಳನ್ನು ಕನಿಷ್ಠ ಒಂದು ದಿನದಿಂದ ಗರಿಷ್ಠ ಹದಿನೈದು ದಿನಗಳವರೆಗೆ ಮಾತ್ರ ಸೀಮಿತವಾಗಿರುತ್ತದೆ.

2 ಬಿ 27 **<u>ತಾತ್ಕಾಲಿಕ ಫಲಕಗಳ ಮೇಲಿನ ಜಾಹೀರಾತುಗಳು : –</u>** ಅಂದರೆ ಗಣ್ಯ ವ್ಯಕ್ತಿಗಳಿಗೆ ಶುಭಾಶಯ ಬಯಸಲು, ರಾಜಕೀಯ ಸಭೆ, ಉತ್ಸವಗಳು, ಶೈಕ್ಷಣಿಕ ಸಭೆಗಳು, ಕ್ರೀಡಾಕೂಟ ಅಥವಾ ಲಾಭವನ್ನು ನಿರೀಕ್ಷಿಸದೆಯೇ ಮಾಡುವ ಸಾರ್ವಜನಿಕ ಸಮಾರಂಭಗಳ ಪ್ರಚಾರಕ್ಕಾಗಿ, ತಾತ್ಕಾಲಿಕ ಫಲಕಗಳ ಮೇಲೆ ಪ್ರದರ್ಶಿಸುವ ಜಾಹೀರಾತುಗಳು. ಇವುಗಳ ಪ್ರದರ್ಶನ ಮೂರು ದಿನಗಳಗಷ್ಟೇ ಸೀಮಿತವಾಗಿದ್ದು, ವಿಶೇಷ ಸಂದರ್ಭಗಳಲ್ಲಿ ಒಂದು ತಿಂಗಳವರೆಗೆ ವಿಸ್ತರಿಸಲಾಗುವುದು. ಇಂತಹ ಜಾಹೀರಾತುಗಳಿಗಾಗಿ ರಸ್ತೆಗಳ ಮೇಲೆ ಅಥವಾ ಕಾಲುದಾರಿಗಳ ಮೇಲೆ ಯಾವುದೇ ರೀತಿಯ ಗುಂಡಿಗಳನ್ನು ತೋಡಬಾರದು ಹಾಗೂ ಅವಕಾಶ ನೀಡತಕ್ಕದಲ್ಲ.

2 ಬಿ 28 **<u>ತಾತ್ಕಾಲಿಕ ಪತಾಕೆಗಳು : –</u>** ಪಾದಚಾರಿಗಳು ಓಡಾಡುವ ದಾರಿ ಮೇಲೆ ಅಳವಡಿಸಿರುವ ಕಂಬದ ಮೇಲೆ 1 ಮೀ X 1.5 ಮೀ ಗರಿಷ್ಟ ಅಳತೆ ಪತಾಕೆಯ ಜಾಹೀರಾತು ಪ್ರದರ್ಶನ.

2 ಬಿ 29 **<u>ಸಂಚಾರ ಸಂಕೇತಗಳ ಮೇಲಿನ ಜಾಹೀರಾತು : –</u>** ಅಂದರೆ ನಗರದ ಸಂಚಾರ ಸಂಕೇತಗಳೊಂದಿಗೆ ಸಂಚಾರ ಸಂಕೇತಗಳ ಕೆಳಭಾಗದಲ್ಲಿ ಅಥವಾ ಹಿಂದಿನ ಬದಿಯಲ್ಲಿ ಅಂದರೆ ಅದೇ ಸಂಕೇತ ಕಂಬದ ಮೇಲೆ ಪ್ರದರ್ಶಿಸುವ ಜಾಹೀರಾತು.

2 ಬಿ 30 **<u>ಟ್ರಾನ್ಸ್‌ಮಿಷನ್ ಗೋಪುರ ಜಾಹೀರಾತು : –</u>** ಅಂದರೆ ನಗರದ ಗಡಿಯೊಳಗೆ ವಿವಿಧ ಮೊಬೈಲ್ ಕಂಪನಿಗಳು ಅಳವಡಿಸುವ ವಾಹಕ (Transmission) ಗೋಪುರಗಳ ಮೇಲೆ ಪ್ರದರ್ಶಿಸುವ ಜಾಹೀರಾತುಗಳನ್ನು ನಿಷೇದಿಸಿದೆ.

2 ಬಿ 31 **<u>ಗೋಡೆ ಬರಹದ ಜಾಹೀರಾತು:–</u>**. ಗೋಡೆಗಳ ಮೇಲೆ ಕೈಬರಹದಲ್ಲಿನ ಜಾಹೀರಾತುಗಳನ್ನು ನಿಷೇದಿಸಿದೆ.

2 ಬಿ 32 **<u>ಕಿಟಕಿ ಜಾಹೀರಾತು : –</u>** ಅಂದರೆ ವಾಣಿಜ್ಯ ಸಂಸ್ಥೆಗಳು ತಮ್ಮ ಉತ್ಪನ್ನ ಅಥವಾ ತಾವು ನೀಡುವ ಸೇವೆಯ ಬಗ್ಗೆ ಕುರಿತು ಅವರದೇ ಕಟ್ಟಡಗಳ ಕಿಟಕಿಗಳಲ್ಲಿ ಸಾರ್ವಜನಿಕರಿಗೆ ಗೋಚರವಾಗುವಂತೆ ಪ್ರದರ್ಶಿಸುವ ಜಾಹೀರಾತು, ಇವುಗಳು ಪ್ರಕಾಶಿತವಿರಬಹುದು, ಪ್ರಕಾಶಿತವಿಲ್ಲದಿರಬಹುದು ಸ್ಥಿರವಾಗಿರಬಹುದು ಅಥವಾ ಯಾಂತ್ರಿಕವಾಗಿ ಚಲಿಸುತ್ತಿರಬಹುದು.

2 ಬಿ 33 **<u>ರೂಫ್‌ಟಾಪ್ ಹೋರ್ಡಿಂಗ್ಸ್</u>** :– ಅಂದರೆ ಕಟ್ಟಡದ ಮೇಲ್ಭಾಗದಲ್ಲಿ ಜಾಹೀರಾತನ್ನು ಅಳವಡಿಸಲು ಹಾಗೂ ಪ್ರದರ್ಶಿಸಲು ನಿಗಧಿಪಡಿಸಿದ ಹೋರ್ಡಿಂಗ್ಸ್‌ಗಳು ಇದು ವಿದ್ಯುತ್ ದೀಪದ ಮೂಲಕ ಪ್ರಕಾಶಗೊಳ್ಳುವ ಅಥವಾ ವಿದ್ಯುತ್ ದೀಪವಿಲ್ಲದ ಫಲಕ.

2 ಬಿ 34 **<u>ಕ್ಯಾಂಟಿ ಲಿವರ್</u> :–** ಚಾಚು ತೊಲೆ ಜಾಹೀರಾತು ರಸ್ತೆಗಳಲ್ಲಿ, ಪಾರ್ಕ್‌ಗಳಲ್ಲಿ ಹಾಗೂ ಇನ್ನಿತರ ಸ್ಥಳಗಳಲ್ಲಿ ಫಲಕಗಳ ಜಾಹೀರಾತು.

2 ಬಿ 35 ಸರ್ಕಾರಿ ಕಚೇರಿಗಳು, ಸರ್ಕಾರದ ಅಂಗಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳು ಕಾರ್ಯ ಹಾಗೂ ಅರಿವು ಮೂಡಿಸುವ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಪ್ರದರ್ಶಿಸುವ ಜಾಹೀರಾತುಗಳಿಗೆ ಶುಲ್ಕ ಅನ್ವಯಿಸುವುದಿಲ್ಲ. ಆದರೆ ಅನುಮತಿ ಅವಶ್ಯಕತೆ ಇರುತ್ತದೆ.

<u>ಭಾಗ – II</u>

<u>ಹೊರಾಂಗಣ ಜಾಹೀರಾತುಗಳಿಗೆ ಸಂಬಂಧಿಸಿದಂತೆ ನಿಯಮಗಳು ವಾಣಿಜ್ಯ ಜಾಹೀರಾತುಗಳ ಅಳವಡಿಕೆ ಮತ್ತು ಪ್ರದರ್ಶನ ನಿಯಮಗಳು</u>

3ಎ (1) ಸ್ವಚ್ಛತೆ, ಸುರಕ್ಷತೆ, ನಗರ ಪಾರಂಪರಿಕತೆ ಹಾಗೂ ಇತರೆ ಕಾರಣಗಳಿಂದ ಮತ್ತು ಶಾಂತಿ ಕಾಪಾಡುವ ಉದ್ದೇಶದಿಂದ ಪಾಲಿಕೆಯು ಪ್ರಕಟಣೆಯ ಮೂಲಕ ಯಾವುದೇ ಜಾಹೀರಾತನ್ನು ನಿಷೇಧಿಸಬಹುದು, ಯಾವುದೇ ಬೀದಿ, ರಸ್ತೆ ಅಥವಾ ಖಾಸಗಿ ಸ್ಥಳ ಅಥವಾ ಸಾರ್ವಜನಿಕ ಮತ್ತು ಖಾಸಗಿ ಕಟ್ಟಡ, ಗೋಡೆ, ಫಲಕ ವಿನ್ಯಾಸ ದೀಪ ಸ್ಥಂಬಗಳು ಅಥವಾ ರಸ್ತೆಗೆ ಹೊಂದಿಕೊಂಡಿರುವ ಅಥವಾ ಗೋಚರಿಸುವ ಅಥವಾ ಕಂಬಗಳು ಇವುಗಳ ಮೇಲೆ ಪ್ರದರ್ಶಿಸುವ ಜಾಹೀರಾತುಗಳ ಅಳವಡಿಕೆ, ದಾಖಲಿಸುವುದು ನಿರ್ಮಿಸುವುದು ಉಳಿಸುವುದು ಅಥವಾ ಪ್ರದರ್ಶನವನ್ನು ಕ್ರಮಬದ್ದಗೊಳಿಸಬಹುದಾದ ಹಕ್ಕು ನಗರಪಾಲಿಕೆಗೆ ಇರುತ್ತದೆ.

3ಎ (2) **<u>ಜಾಹೀರಾತು ಫಲಕವೆಂದರೆ : –</u>** ಸಾರ್ವಜನಿಕರಿಗೆ ಒಂದು ನಿರ್ದಿಷ್ಟ ಸ್ಥಳ, ಸಾರ್ವಜನಿಕ ಕಾರ್ಯಕ್ರಮಗಳು, ಮಾರಾಟದ ವಸ್ತುಗಳ ಕುರಿತು ಮಾಹಿತಿ ನೀಡುವ ಉದ್ದೇಶದಿಂದ, ಮೈದಾನದಲ್ಲಿ ಕಟ್ಟಡ ಮೇಲ್ಛಾವಣಿ ಅಥವಾ ಪೆರಾಪಿಟ್ ಅಥವಾ ಗೋಡೆಯ ಮೇಲೆ ಚಿಹ್ನೆಗಳು, ಅಕ್ಷರಗಳು, ರೇಖಾಚಿತ್ರಗಳು ಅಥವಾ ಎರಡು ಅಥವಾ ಎರಡಕ್ಕಿಂತ ಹೆಚ್ಚಿನ ಕಂಬಗಳ ಆಧಾರದ ಮೇಲೆ ಅಳವಡಿಸಿರುವ ಜಾಹೀರಾತು ಫಲಕಗಳು, ಟ್ರೈಆಡ್ಸ್ / ಟ್ರೈ ವಿಷನ್ ಸ್ಕ್ರೂಲರ್ ಮುಂತಾದವುಗಳಿಗೆ ಉಪಯೋಗಿಸಬಹುದಾದಂತಹವುಗಳು.

3ಎ (3) ಯಾವುದೇ ವ್ಯಕ್ತಿ, ಖಾಸಗೀ ಅಥವಾ ಸಾರ್ವಜನಿಕರ ಕಟ್ಟಡಗಳು ಅಥವಾ ಸ್ವತ್ತುಗಳು, ಗೋಡೆಗಳು, ಪಾರಾಪೆಟ್‌ಗಳು ಅಥವಾ ಆವರಣಗಳು, ಖಾಸಗೀ ಫಲಕಗಳು, ಖಾಸಗೀ ವಿನ್ಯಾಸಗಳು, ಖಾಸಗಿ ಕಟ್ಟಡಗಳಲ್ಲಿರುವ ಕಂಬಗಳು ಅಥವಾ ದೀಪಸ್ಥಂಬಗಳು ಇವುಗಳ ಮೇಲೆ ಜಾಹೀರಾತನ್ನು ಅಳವಡಿಸಲು ನಿರ್ಮಿಸಲು, ಸ್ಥಿರ ಪಡಿಸಲು ಅಥವಾ ಪ್ರದರ್ಶಿಸಲು ಅನುಮತಿ ಕೋರಿ ಆಯುಕ್ತರಿಗೆ ಅರ್ಜಿ ಸಲ್ಲಿಸ ತಕ್ಕದ್ದು, ಹಾಗೂ ನಿರ್ದಿಷ್ಟ ಶುಲ್ಕ ಪಾವತಿಸಿ ಪ್ರತಿ ಜಾಹೀರಾತಿಗೆ ಅನುಮತಿ ಮುದ್ರೆ ಪಡೆಯತಕ್ಕದ್ದು

3ಎ (4) ಕಟ್ಟಡದ ಮೇಲ್ಬಾಗದಲ್ಲಿ ಅಳವಡಿಸಿರುವ ಜಾಹೀರಾತು ಫಲಕಗಳಿಗೆ ಅನುಮತಿಸುವಾಗ ಕಟ್ಟಡದ ಭದ್ರತೆಯ ಬಗ್ಗೆ ದೃಢೀಕೃತ ಪ್ರಮಾಣ ಪತ್ರವನ್ನು ಸಂಬಂಧಿಸಿದ ಪ್ರಾಧಿಕಾರದಿಂದ ಪಡೆಯತಕ್ಕದ್ದು.

3ಎ (5) ಅನುಮತಿ ನೀಡಿರುವ ಮಾದರಿಯಲ್ಲಿ ಮತ್ತು ಆಯುಕ್ತರು ನಿಗಧಿಪಡಿಸಿರುವ ಅವಧಿಯನ್ನು ಹೊರತುಪಡಿಸಿ ಯಾವುದೇ ವ್ಯಕ್ತಿಯು, ಪಾಲಿಕೆಯ ಉದ್ಯಾನವನಗಳಲ್ಲಿ ಅಥವಾ ಪಾಲಿಕೆಯ

ಮನರಂಜನಾ ಮೈದಾನಗಳಲ್ಲಿ (ಪ್ರಕಟಿಸದ ರೀತಿಯಲ್ಲಿ) ಯಾವುದೇ ಜಾಹೀರಾತನ್ನು ಅಳವಡಿಸತಕ್ಕದ್ದಲ್ಲ, ದಾಖಲಿಸತಕ್ಕದ್ದಲ್ಲ, ನಿರ್ಮಿಸತಕ್ಕದ್ದಲ್ಲ, ಇಡತಕ್ಕದ್ದಲ್ಲ ಅಥವಾ ಪ್ರದರ್ಶಿಸತಕ್ಕದ್ದಲ್ಲ, ಮತ್ತು ಈ ರೀತಿ ಅಳವಡಿಸಲು , ದಾಖಲಿಸಲು , ಸ್ಥಿರವಹಿಸಲು ಅಥವಾ ಪ್ರದರ್ಶಿಸಲು ಕಾರಣರಾಗತಕ್ಕದ್ದಲ್ಲ.

3ಎ (6) ಜಾಹೀರಾತು ಫಲಕಗಳನ್ನು ಈ ಮೊದಲು ಪರವಾನಿಗೆ ಪಡೆದು ಅಳವಡಿಸಿರುವ ಇತರೇ ಜಾಹೀರಾತು ಫಲಕಗಳ ವೀಕ್ಷಣೆಗೆ ತಡೆಯಾಗದಂತೆ, ಪ್ರದರ್ಶಿಸಬೇಕು. ಫಲಕ ಅಥವಾ ಅದರ ಮೂಲ ವಸ್ತುಗಳು (ಆಧಾರಗಳು, ಕಂಬಗಳು ಇತ್ಯಾದಿ) ಇತರೇ ಸಂಸ್ಥೆಗಳು ತಮ್ಮ ಉತ್ಪನ್ನಗಳು ಅಥವಾ ಸೇವೆಗಳ ಕುರಿತು ಪ್ರದರ್ಶಿಸಿದ ಜಾಹೀರಾತುಗಳ ಅಥವಾ ಭಾರಿ ವಾಣಿಜ್ಯ ಫಲಕಗಳ ವೀಕ್ಷಣೆಗೆ ತಡೆಯನ್ನುಂಟು ಮಾಡತಕ್ಕದ್ದಲ್ಲ.

3ಎ (7) ಜಾಹೀರಾತು ಫಲಕಗಳ ಪ್ರದರ್ಶನಕ್ಕಾಗಿ ನೀಡಿರುವ ಪರವಾನಿಗೆಯನ್ನು ಪರವಾನಿಗೆ ತಲುಪಿದ 45 ದಿನಗಳೊಳಗಾಗಿ ಉಪಯೋಗಿಸಿಕೊಳ್ಳಬೇಕು. ಪರವಾನಿಗೆಯನ್ನು ಮುಂದುವರಿಸಲು ಕೋರಿ ಸಲ್ಲಿಸಿದ ಅರ್ಜಿಯನ್ನು ನೀಡಿದ ಕಾರಣಗಳು ಸಮಂಜಸವೆಂದು ಮನದಟ್ಟಾದಲ್ಲಿ, ಆಯುಕ್ತರು, ಏಜೆನ್ಸಿಗೆ ಫಲಕದ ಅಳವಡಿಕೆಗೆ ನೀಡಿರುವ ಪರವಾನಿಗೆಯನ್ನು ಮೂರು ತಿಂಗಳುಗಳಿಗೆ ಮೀರದಂತೆ ವಿಸ್ತರಿಸಬಹುದಾಗಿದೆ. ಈ ಅವಧಿಯ ನಂತರ ಆಯುಕ್ತರು ಪರವಾನಿಗೆಯನ್ನು **ಮುಂದುವರಿಸತಕ್ಕದ್ದಲ್ಲ,** ಆದಾಗ್ಯೂ ಸದರಿ ಏಜೆನ್ಸಿಯವರು ಅವರುಗಳ ವಿವೇಚನೆಗೆ ಒಳಪಟ್ಟಂತೆ ಹೊಸದಾಗಿ ಪರವಾನಿಗೆ ಕೋರಿ ಅರ್ಜಿ ಸಲ್ಲಿಸಬಹುದಾಗಿದೆ.

3ಎ (8) ಯಾವುದೇ ಅನಧಿಕೃತ ಜಾಹೀರಾತಿಗೆ ನಿರ್ದಿಷ್ಟಪಡಿಸಿದ ಪ್ರಮಾಣದಲ್ಲಿ ದಂಡ ವಿಧಿಸಲು ಕಾರಣವಾಗುತ್ತದೆ. ಎಲ್ಲಾ ವಿಧದ ಜಾಹೀರಾತುಗಳಿಗೆ ಸಂಬಂಧಪಟ್ಟಂತೆ ಯಾವುದೇ ರೀತಿಯ ಉಲ್ಲಂಘನೆ ಕಂಡುಬಂದಲ್ಲಿ ಆಯುಕ್ತರು ನಿಗಧಿತ ಗರಿಷ್ಟ ಪ್ರಮಾಣಕ್ಕೆ ಕಡಿಮೆ ಇಲ್ಲದಂತೆ ದಂಡ ವಿಧಿಸಬಹುದಾಗಿರುತ್ತದೆ ಅಥವಾ ಅಂತಹ ಜಾಹೀರಾತು ಫಲಕವನ್ನು ತೆರವುಗೊಳಿಸಲು ಆಯುಕ್ತರು ಅಧಿಕಾರ ಹೊಂದಿರುತ್ತಾರೆ.

3ಎ (9) **<u>ಜಾಹೀರಾತು ಫಲಕಗಳು :</u>**

ಸ್ವತ್ತುಗಳ ಹಿಂಬದಿಯಲ್ಲಿ ಅಳವಡಿಸುವ ಜಾಹೀರಾತು ಫಲಕಗಳ ಸ್ವತ್ತುಗಳಲ್ಲಿ ಓಡಾಡುವ ಜನರಿಗೆ ಆಡಚಣೆ ಉಂಟು ಮಾಡತಕ್ಕದಲ್ಲ. ಮುಂದುವರಿಸುತ್ತ ಸ್ವತ್ತುಗಳ ಹಿಂಭಾಗದಲ್ಲಿ ಅಳವಡಿಸುವ ಜಾಹೀರಾತು ಫಲಕಗಳು ಪಾದಚಾರಿ ಮಾರ್ಗದ ಕಡೆಗೆ ಮುಖ ಮಾಡತಕ್ಕದ್ದಲ್ಲ ಅಥವಾ ಪಕ್ಕದ ಸ್ವತ್ತಿನ ಕಡೆಗೆ ತಿರುಗಿಸತಕ್ಕದ್ದಲ್ಲ.

3ಎ (10) ಪರವಾನಿಗೆ ಪಡೆದು ಪ್ರದರ್ಶಿಸುವ ಪ್ರತಿಯೊಂದು ಫಲಕದ ಕೆಳಭಾಗದಲ್ಲಿ (ಅಂದರೆ ಜಾಹೀರಾತಿನ ಕೆಳಭಾಗ) ಆರು ಇಂಚಿಗಿಂತ ಕಡಿಮೆ ಇಲ್ಲದ ಎತ್ತರ ಮತ್ತು ಅಷ್ಟೇ ಅಗಲವಾಗಿರುವ ಬಿಳಿಯ ಹಿನ್ನೆಲೆ ಹೊಂದಿರುವ ಲೋಹದ ಪಟ್ಟಿಯಲ್ಲಿ ಕಪ್ಪುಬಣ್ಣದ ಅಕ್ಷರಗಳಿಂದ ಎಡಭಾಗದಲ್ಲಿ ಪಾಲಿಕೆ ನೀಡಿರುವ ಗಣಕೀಕೃತ ಕೋಡ್ ಸಂಖ್ಯೆಯನ್ನು ಹಾಗೂ ಜಾಹೀರಾತು ಆರಂಭ ಮತ್ತು ಮುಕ್ತಾಯದ ಅವಧಿಯನ್ನು ಮತ್ತು ಬಲಭಾಗದಲ್ಲಿ ಏಜೆನ್ಸಿಯ ಹೆಸರನ್ನು ರಸ್ತೆಯ ಮಟ್ಟದಿಂದಲೇ ಗೋಚರಿಸುವ ರೀತಿಯಲ್ಲಿ ನಮೂದಿಸಿ ಅಳವಡಿಸತಕ್ಕದ್ದು. ನ್ಯಾಯಾಲಯದ ನಿರ್ದಿಷ್ಟ ಆದೇಶಗಳ – ನಿರ್ದೇಶನಗಳನ್ವಯ ಮುಂದುವರಿಯುವ ಫಲಕಗಳಲ್ಲಿ ಏಜೆನ್ಸಿ ಹೆಸರು ಮತ್ತು ನ್ಯಾಯಾಲಯ ಪ್ರಕರಣ ಸಂಖ್ಯೆಯ ವಿವರಗಳನ್ನು ಕಪ್ಪು ಬಣ್ಣದ ಅಕ್ಷರಗಳಿಂದ ಹಳದಿ ಬಣ್ಣದ ಹಿನ್ನೆಲೆಯಲ್ಲಿ ಪ್ರದರ್ಶಿಸತಕ್ಕದ್ದು. ತಪ್ಪಿದಲ್ಲಿ ಇಂತಹ ಜಾಹೀರಾತುಗಳನ್ನು ಅನಧಿಕೃತವೆಂದು ಪರಿಗಣಿಸತಕ್ಕದ್ದು.

3ಎ(11) ದಾವಣಗೆರೆ ನಗರದಲ್ಲಿ ಜಾಹೀರಾತು ಫಲಕಗಳ ಸ್ಥಳ ಮತ್ತು ಪ್ರದರ್ಶನವನ್ನು ನಿಯಂತ್ರಿಸುವ ಉದ್ದೇಶದಿಂದ ಸದರಿ ಕ್ಷೇತ್ರವನ್ನು ಈ ನಿಯಮಾವಳಿಗಳಿಗೆ ಲಗತ್ತಿಸಿರುವ ಅನುಸೂಚಿಗಳಲ್ಲಿ ವಿವರಿಸಿರುವಂತೆ ಎ, ಬಿ, ಸಿ ವಲಯಗಳೆಂದು ವರ್ಗೀಕರಿಸಲಾಗಿರುತ್ತದೆ.

ಈ ವಲಯಗಳಲ್ಲಿ ಸೇರದೆ ಇರುವ ರಸ್ತೆಯನ್ನು ಅದರ ಸಮೀಪವಿರುವ ವಲಯಕ್ಕೆ ಸಂಬಂಧಿಸಿದಂತೆ ಪರಿಗಣಿಸಬೇಕು.

ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯವು ದೇಶದ ರಸ್ತೆ ಸುರಕ್ಷತೆಯ ಕುರಿತು ನ್ಯಾಯಮೂರ್ತಿ ಶ್ರೀ ಕೆ.ಎಸ್ ರಾಧಾಕೃಷ್ಣನ್ ರವರ ನೇತೃತ್ವದ ಉಸ್ತುವಾರಿ ಸಮಿತಿಯ ಆದೇಶ ಪ್ರಕಾರ (ರಿಟ್ ಅರ್ಜಿ ಸಂಖ್ಯೆ:295/2012(ಸಿವಿಲ್)) ವಾಹನ ಚಾಲಕರಿಗೆ ಅಡಚಣೆ ಉಂಟು ಮಾಡುವ ಅಥವಾ ಗಮನವನ್ನು ಬೇರೆಡೆ ಸೆಳೆಯುವ ಜಾಹೀರಾತುಗಳನ್ನು ಮತ್ತು ಪಾದಚಾರಿ ಮಾರ್ಗಗಳನ್ನು (Footpath) ಒತ್ತುವರಿ ಮಾಡುವುದನ್ನು ನಿಷೇಧಿಸತಕ್ಕದಾಗಿರುವುದರಿಂದ ಅಂತಹ ಸ್ಥಳಗಳಲ್ಲಿ ಜಾಹೀರಾತುಗಳನ್ನು ಅನುಮತಿಸತಕ್ಕದ್ದಲ್ಲ.

3ಎ(12) ಯಾವುದೇ ಜಾಹೀರಾತು ಫಲಕವು :

i) ಯಾವುದೇ ಕಟ್ಟಡ ಅಥವಾ ಸ್ವತ್ತಿನಂಚುಗಳನ್ನು (ಗಡಿಯನ್ನು) ನಿಗಧಿಪಡಿಸಿದಲ್ಲಿ. ಅಂಚಿನಿಂದ ಹೊರಗೆ ಬೀದಿಗೆ ಚಾಚತಕ್ಕದ್ದಲ್ಲ.

ii) ಸಾರ್ವಜನಿಕ ಉದ್ಯಾನವನ ಅಥವಾ ವಿಹಾರಧಾಮಗಳಿರುವ ರಸ್ತೆಗಳಲ್ಲಿ ಅಲ್ಲಿಂದ ಕನಿಷ್ಟ ಹತ್ತು (10) ಮೀಟರ್ ದೂರದಲ್ಲಿರತಕ್ಕದ್ದು.

iii) ಯಾವುದೇ ವಾಸದ/ವಾಣಿಜ್ಯ ಕಟ್ಟಡದ ಕಿಟಕಿ ಅಥವಾ ಬಾಗಿಲನ್ನು ಮುಚ್ಚಲು ಅಥವಾ ತೆಗೆಯಲು ಅಡಚಣೆ ಉಂಟು ಮಾಡತಕ್ಕದ್ದಲ್ಲ.

iv) ವಿದ್ಯುತ್ ಟ್ರಾನ್ಸ್‌ಫಾರ್ಮರ್ ಅಥವಾ ವಿದ್ಯುತ್ ವಾಹಕ ತಂತಿಗಳಿಂದ (live) ಕನಿಷ್ಟ 3.5 ಮೀಟರ್‌ಗಳ ದೂರದಲ್ಲಿರತಕ್ಕದ್ದು

v) ಕನ್ನಡಕ್ಕೆ ಪ್ರಥಮ ಆದ್ಯತೆ ನೀಡತಕ್ಕದ್ದು

vi) ಕಡ್ಡಾಯವಾಗಿ ಪಾಲಿಕೆಗೆ ಸಂಬಂಧಿಸಿದ ಸಾರ್ವಜನಿಕ ಹಿತಾಸಕ್ತಿಯ ಮಾಹಿತಿ/ Slogan ಗಳನ್ನು ಜಾಹೀರಾತು ಫಲಕದ ಮೇಲ್ಭಾಗದಲ್ಲಿ ಕಡ್ಡಾಯವಾಗಿ ಶೇಕಡ 5 ರಷ್ಟು ಜಾಗದಲ್ಲಿ ಬರೆಸತಕ್ಕದ್ದು

3ಎ(12) i) ಸಾಮಾನ್ಯ ನಿಯಮದಂತೆ ಆಯುಕ್ತರು ನಿರ್ದಿಷ್ಟ ಉದ್ದೇಶ/ಅವಧಿಗೆ ಅನುಮತಿ ನೀಡಿರುವ ಸೂಚನೆಗಳ/ಸಂಕೇತಗಳ ಫಲಕದ ಹೊರತಾಗಿ, ಇತರೆ ಜಾಹೀರಾತು ಫಲಕಗಳನ್ನು ಉದ್ಯಾನವನಗಳಲ್ಲಿ ಅಥವಾ ಉಪವನಗಳಲ್ಲಿ ಅಥವಾ ಅವುಗಳಿಗೆ ಹೊಂದಿಕೊಂಡಿರುವ ಜಾಗದಲ್ಲಿ ಫ್ಲೈ ಓವರ್‌ಗಳಲ್ಲಿ ಪ್ರದರ್ಶಿಸತಕ್ಕದ್ದಲ್ಲ.

ii) ಜಾಹೀರಾತು ಅನುಮತಿ ನೀಡುವ ಸಂಬಂಧ ಪಾಲಿಕೆಯ ವ್ಯಾಪ್ತಿಯನ್ನು 'ಎ' 'ಬಿ' 'ಸಿ' ಎಂಬ ಮೂರು ವಲಯಗಳನ್ನಾಗಿ ವರ್ಗೀಕರಿಸಲಾಗಿದೆ. ಈ ವರ್ಗೀಕರಣದ ಆಧಾರದಡಿಯಲ್ಲಿ ಜಾಹೀರಾತುಗಳಿಗೆ ಅನುಮತಿ ನೀಡಲು ಕ್ರಮವಹಿಸತಕ್ಕದ್ದು.

3ಎ(13) 'ಎ' 'ಬಿ 'ಸಿ' ವಲಯಗಳಲ್ಲಿ ಈ ಕೆಳಕಂಡ ಷರತ್ತುಗಳನ್ನೊಳಗೊಂಡ ಫಲಕಗಳಿಗೆ ಅವಕಾಶ ನೀಡಲಾಗುವುದು.

i) 'ಎ' ವಲಯದಲ್ಲಿ ಅಳವಡಿಸುವ ಜಾಹೀರಾತು ಫಲಕಗಳ ಅಳತೆ 6.0 X 3.0 ಮೀಟರ್‌ಗಳಿಗೆ ಮೀರದಂತೆ ಮತ್ತು ಮೇಲ್ಚಾವಣಿಯ ಮೇಲೆ ಅಳವಡಿಸುವ ಜಾಹೀರಾತು

ಫಲಕಗಳ ಅಳತೆ 6.0 x 3.0 ಮೀಟರ್‌ಗಳಿಗೆ ಮೀರತಕ್ಕದ್ದಲ್ಲ. ಜಾಹೀರಾತು ಫಲಕಗಳ ಎತ್ತರ ನೆಲದಿಂದ 10.0 ಮೀ.ಗಿಂತ ಹೆಚ್ಚಿಗೆ ಇರತಕ್ಕದ್ದಲ್ಲ. ಎರಡು ಜಾಹೀರಾತು ಫಲಕಗಳ ನಡುವೆ ಕನಿಷ್ಟ ಮೂರು ಮೀಟರಿನಷ್ಟು ಅಂತರವಿರಬೇಕು.

ii) 'ಬಿ' ವಲಯದಲ್ಲಿ ಜಾಹೀರಾತು ಫಲಕದ ಅಳತೆ 7.0 x 4.0 ಮೀಟರ್‌ಗಳಿಗೆ ಮೀರತಕ್ಕದ್ದಲ್ಲ ಮತ್ತು ಎತ್ತರ ನೆಲದಿಂದ 11.0 ಮೀಟರ್ ಮೀರತಕ್ಕದ್ದಲ್ಲ. ಎರಡು ಜಾಹೀರಾತು ಫಲಕಗಳ ನಡುವಿನ ಅಂತ ಕನಿಷ್ಟ 5.0 ಮೀಟರ್‌ನಷ್ಟಿರಬೇಕು.

iii) 'ಸಿ' ವಲಯದಲ್ಲಿ ಅಳವಡಿಸುವ ಜಾಹೀರಾತು ಫಲಕಗಳ ಅಳತೆ 9.0 x 4.5 ಮೀಟರ್‌ಗಳಿಗೆ ಮೀರಿರಬಾರದು ಹಾಗೂ ನೆಲದಿಂದ 12.0 ಮೀಟರ್ ಎತ್ತರ ಮೀರತಕ್ಕದ್ದಲ್ಲ. ಎರಡು ಫಲಕಗಳ ನಡುವೆ ಕನಿಷ್ಟ 5.0 ಮೀಟರ್ ಅಂತರವಿರಬೇಕು. ಒಂದು ಜಾಹೀರಾತು ಫಲಕದ ಮೇಲೆ ಮತ್ತೊಂದು ಜಾಹೀರಾತು ಫಲಕವನ್ನು ಯಾವುದೇ ಕಟ್ಟಡದ ಮೇಲ್ಚಾವಣಿಯ ಮೇಲೆ ಅಳವಡಿಸಲು ಅನುಮತಿ ನೀಡತಕ್ಕದ್ದಲ್ಲ.

iv) ನಿಯಾನ್ ಚಿಹ್ನೆಯುಳ್ಳ ಫಲಕಗಳನ್ನು ಅವು ಎಷ್ಟು ದೂರ ಗೋಚರಿಸಬೇಕು ಎನ್ನುವ ಆಧಾರದ ಮೇಲೆ ಇದೇ ನಿರ್ಬಂಧಗಳು ಅನ್ವಯಿಸುತ್ತದೆ.

a)

ನೆಲ	ಮೇಲ್ಚಾವಣಿ (1ನೇ ಮಹಡಿ)
A ವಲಯದಲ್ಲಿ ಹೋರ್ಡಿಂಗ್ಸ್‌ಗಳನ್ನು ನಿಷೇಧಿಸಲಾಗಿದೆ.	
B ವಲಯ 7.0 ಮೀಟರ್	12.0 ಮೀಟರ್ (ನೆಲದಿಂದ)
C ವಲಯ 12.0 ಮೀಟರ್	15.0 ಮೀಟರ್ (ನೆಲದಿಂದ)

b) ಏಜೆನ್ಸಿಗಳು ತಾವು ಅಳವಡಿಸುವ ನಿಯಾನ್ ಸೈನ್‌ಗಳ ವಿನ್ಯಾಸ ದೃಢತೆಯ ಬಗ್ಗೆಯೂ ಮೇಲ್ಕಂಡ ನಿರ್ಬಂಧಗಳು ಅನ್ವಯಿಸುತ್ತವೆ. ಹಾಗೂ ದೃಢತೆ ಬಗ್ಗೆ ಪ್ರಮಾಣ ಪತ್ರವನ್ನು ಆಯುಕ್ತರಿಗೆ ಸಲ್ಲಿಸಿದಲ್ಲಿ ಅನುಮತಿ ಬಗ್ಗೆ ಪರಿಗಣಿಸಲಾಗುವುದು.

c) ಕಟ್ಟಡ ರ್‍ಯಾಪ್ (Building wraps) ಗಳಿಗೆ ಸಂಬಂಧಿಸಿದಂತೆ, ಗಾತ್ರ ಮತ್ತು ಎತ್ತರದ ನಿರ್ಬಂಧಗಳನ್ನು ಒಂದೊಂದು ಪ್ರಕರಣದಲ್ಲಿ ನಗರದ ಸೌಂದರ್ಯ ಮತ್ತು ಸಾರ್ವಜನಿಕ ಸುರಕ್ಷತೆಗಳ ಆಧಾರದ ಮೇಲೆ ಪರಿಶೀಲಿಸಲಾಗುವುದು ಹಾಗೂ ಸಂಬಂಧಿಸಿದ ಪ್ರಾಧಿಕಾರಿಯ ಅನುಮತಿ ಪಡೆಯತಕ್ಕದ್ದು.

i) ಅನುಮೋದಿಸಿರುವ ಸ್ಥಳದಲ್ಲಿ ಅಳವಡಿಸುವ ಫಲಕ ಪಾದಚಾರಿಗಳ ಚಾಲನೆಗೆ ಅಡ್ಡಿಯಾಗದಂತೆ ಅದರ ಕೆಳಗಿರುವ ನೆಲದ ಮೇಲ್ಮೈಯಿಂದ ಕನಿಷ್ಟ 2.5 ಮೀ ಎತ್ತರದಲ್ಲಿರಬೇಕು. ಸದರಿ ಫಲಕ ಅದೇ ನಿವೇಶನದಲ್ಲಿ ಈ ಮೊದಲೇ ಅನುಮತಿಸಿ ಅಳವಡಿಸಿರುವ ಫಲಕಗಳ ಸಾಲಿನಲ್ಲೇ ಇರತಕ್ಕದ್ದು.

ii) ಫಲಕಗಳ ಆಧಾರವನ್ನು ಸಾಕಷ್ಟು ದಪ್ಪವಿರುವ ಸ್ಟೀಲ್, ಇತರೇ ಲೋಹ ಅಥವಾ ಕಾಂಕ್ರೀಟಿನಿಂದ ತಯಾರಿಸಿದ್ದು, ಮೈದಾನದಲ್ಲಿ ಅಥವಾ ಮೇಲ್ಚಾವಣಿಯಲ್ಲಿ ಕಾಂಕ್ರೀಟಿನಿಂದ ಭದ್ರವಾಗಿ ಹೂಳಿರಬೇಕು ಮತ್ತು ಪಾಲಿಕೆಯ ಫಲಕಗಳ ಸಂಬಂಧ ನೀಡಿರುವ ವಿವರಗಳನ್ವಯ ಪೇಂಟು ಮಾಡಿರಬೇಕು. ಅನುಮೋದಿಸಿರುವ ಸ್ಥಳದಲ್ಲಿ ಫಲಕ ನಿರ್ಮಿಸುವ ಏಜೆನ್ಸಿಯು, ವಿನ್ಯಾಸದ ದೃಢತೆಯ ಬಗ್ಗೆ ಅವಶ್ಯಕ ತಾಂತ್ರಿಕ ಪ್ರಮಾಣ ಪತ್ರ ಹಾಗೂ ಉದ್ಭವಿಸಬಹುದಾದ ಆಕಸ್ಮಿಕ ಅಪಘಾತಗಳ ಋಣಭಾರದ ಸಂಬಂಧ ಅಗತ್ಯ ವಿಮೆ ಹೊಂದಿರಬೇಕು.

iii) ಸೌರಶಕ್ತಿಯಂತಹ ರೂಡಿಯಲ್ಲಿಲ್ಲದ ಇಂಧನ ಮೂಲಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಸೋಲಾರ್ ಇಂಧನದಿಂದ ಪ್ರಕಾಶಿಸುವಂತಹ ಫಲಕಗಳ ಅನುಮತಿಗೆ ಆದ್ಯತೆ ನೀಡತಕ್ಕದ್ದು.

iv) ರೈಲ್ವೆ ನಿಲ್ದಾಣದ ಆವರಣ ಅಥವಾ ಸಾರ್ವಜನಿಕ ಕಟ್ಟಡಗಳ ಸುತ್ತಲಿನ ರೇಲಿಂಗ್ಸ್‌ಗಳಿಗೆ ಅಳವಡಿಸಲು ಅನುಮೋದಿಸಿರುವ ಫಲಕಗಳು, ಆವರಣ ಅಥವಾ ರೇಲಿಂಗ್ಸ್‌ಗಳಲ್ಲಿ ಒಂದೇ ರೀತಿಯಲ್ಲಿ ಸಾಲಾಗಿ ಅಳವಡಿಸಬೇಕು.

v) ಪಾಲಿಕೆಯ ಪರವಾನಿಗೆ ಹೊಂದಿರುವ ಎಲ್ಲಾ ಫಲಕಗಳನ್ನು ಮತ್ತು ಅವುಗಳ ಅಧಾರಗಳನ್ನು ಅಚ್ಚುಕಟ್ಟಾಗಿ ವ್ಯವಸ್ಥಿತವಾಗಿ ನಿರ್ವಹಿಸಬೇಕು. ನವೀಕರಿಸುವ ದಿನಾಂಕ ಇತ್ಯಾದಿ ಮಾಹಿತಿಯನ್ನು ಸ್ಪಷ್ಟವಾಗಿ ಜಾಹೀರಾತು ಫಲಕದಲ್ಲಿ ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು.

vi) ಒಂದೇ ರೀತಿಯ ದಟ್ಟ ಹಸಿರು ಎನಾಮಲ್ ಬಣ್ಣ/ಪೇಂಟಿನಿಂದ ಕನಿಷ್ಟ ಎರಡು ಪದರವಾದರೂ ಪೇಂಟ್/ಬಣ್ಣ ಮಾಡಬೇಕು. ಈ ನಿರ್ದೇಶನಗಳನ್ನು ಉಲ್ಲಂಘಿಸಿದಲ್ಲಿ ಆಯುಕ್ತರು ಸದರಿ ಏಜೆನ್ಸಿಗೆ ಪೂರ್ಣ ವಿನ್ಯಾಸವನ್ನು ಏಳು ದಿನಗಳೊಳಗಾಗಿ ಪೇಂಟು /ಬಣ್ಣ ಮಾಡಲು ನಿರ್ದೇಶಿಸಿ ನೋಟೀಸು ಜಾರಿ ಮಾಡಬೇಕು. ಒಂದು ವೇಳೆ ಏಜೆನ್ಸಿಯು ಈ ನಿರ್ದೇಶನಗಳನ್ನು ಪಾಲಿಸಲು ವಿಫಲರಾದಲ್ಲಿ ಆಯುಕ್ತರು ಪೂರ್ಣ ವಿನ್ಯಾಸವನ್ನು ಪೇಂಟ್/ಬಣ್ಣ ಮಾಡಿಸಿ ಅದಕ್ಕೆ ತಗುಲುವ ವೆಚ್ಚದ ಜೊತೆಗೆ ರೂ. 2500/– ರಷ್ಟು ದಂಡವನ್ನು ಏಜೆನ್ಸಿಗೆ ವಿಧಿಸತಕ್ಕದ್ದು.

vii) ಎಲ್ಲಾ ಪ್ರಕಾರದ ಫಲಕಗಳ ವಿನೈಲ್/ಫೆಕ್ಸ್ ಮತ್ತು ಪೇಂಟ್/ಬಣ್ಣ ಮಾಡಿದ ಭಾಗದ ಕೆಳಗೆ ಕಪ್ಪು ಬಣ್ಣದ ಲೋಹದ ಪಟ್ಟಿಯನ್ನು ಅಳವಡಿಸಿ, ಸದರಿ ಪಟ್ಟಿಯ ಎಡಭಾಗದಲ್ಲಿ ಪರವಾನಿಗೆ ಸಂಖ್ಯೆಯನ್ನು ಮತ್ತು ಬಲಭಾಗದಲ್ಲಿ ಏಜೆನ್ಸಿಯ ಹೆಸರನ್ನು ರಸ್ತೆಯ ಬದಿಯಿಂದ ಎಲ್ಲಾ ಸಮಯದಲ್ಲೂ ಸುಲಭವಾಗಿ ಓದಬಹುದಾದ ರೀತಿಯಲ್ಲಿ ನಮೂದಿಸಬೇಕು.

viii ರಾಷ್ಟ್ರದ ಹಿತದೃಷ್ಟಿ, ಧಾರ್ಮಿಕ ಅಥವಾ ಭಾವನೆಗಳಿಗೆ ಮಾರಕವಾಗಿರುವ ಅಥವಾ ಅಶ್ಲೀಲ ಅಥವಾ ಅಸಭ್ಯಕರವಾದ ಹಾಗೂ ಸಾರ್ವಜನಿಕ ನೈತಿಕತೆಯ ಮೇಲೆ ಪರಿಣಾಮ ಬೀರುವಂತಹ ಜಾಹೀರಾತುಗಳನ್ನು ಪ್ರದರ್ಶಿಸತಕ್ಕದ್ದಲ್ಲ. ಆದಾಗ್ಯೂ ಒಂದು ವೇಳೆ ಪ್ರದರ್ಶಿಸಿರುವ ಯಾವುದೇ ಜಾಹೀರಾತು ಮೇಲಿನ ನಿಬಂಧನೆಗಳಿಗನುಗುಣವಾಗಿಲ್ಲವೆಂದು ಆಯುಕ್ತರು ಅಭಿಪ್ರಾಯಪಟ್ಟಲ್ಲಿ 24 ಗಂಟೆಗಳೊಳಗೆ ನೋಟೀಸು ನೀಡಿ ಸದರಿ ಜಾಹೀರಾತನ್ನು ತೆಗೆದುಹಾಕಬೇಕು.

ix) ಯಾವುದೇ ವ್ಯಕ್ತಿಯು ಆಯುಕ್ತರು ದಾಖಲಿಸಿರುವ ಯಾವುದೇ ಚಿಹ್ನೆ ಅಥವಾ ಗುರುತು ಅಥವಾ ಅಕ್ಷರ ಅಥವಾ ಶಬ್ದಗಳನ್ನು ಅಥವಾ ಆಯುಕ್ತರಿಂದ ಪರವಾನಿಗೆ ಪಡೆದು ನಿಗಧಿತ ತೆರಿಗೆ ಪಾವತಿ ಮಾಡಿ ಅಳವಡಿಸಿರುವ, ದಾಖಲಿಸಿರುವ ಅಥವಾ ಪ್ರದರ್ಶಿಸಿರುವ ಜಾಹೀರಾತುಗಳನ್ನು ವಿರೂಪಗೊಳಿಸತಕ್ಕದ್ದಲ್ಲ ಅಥವಾ ವಿರೂಪಗೊಳಿಸಲು ಕಾರಣರಾಗತಕ್ಕದ್ದಲ್ಲ.

x) ಆಯುಕ್ತರು ಅವರು ಹೊಂದಿರುವ ಅಧಿಕಾರವನ್ನು ಚಲಾಯಿಸಿ ಯಾವುದೇ ಜಾಹೀರಾತು ಫಲಕಕ್ಕೆ ಅನುಮತಿ ನೀಡಬಹುದಾಗಿದೆ ಅಥವಾ ನಿರಾಕರಿಸಬಹುದಾಗಿದೆ. ಸಾಮಾನ್ಯವಾಗಿ ಇಂತಹ ಅನುಮತಿ ಅಥವಾ ಅನುಮೋದನೆ ನೀಡುವಾಗ ಸುರಕ್ಷೆ ಮತ್ತು ಶಾಂತಿಯನ್ನೊಳಗೊಂಡು ಸದರಿ ಉಪವಿಧಿಗಳಲ್ಲಿರುವ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.

xi) ಪರವಾನಿಗೆ ನಿರಾಕರಿಸಿರುವ ಪ್ರಕರಣಗಳಲ್ಲಿ ಕಾರಣಗಳನ್ನು ಅರ್ಜಿದಾರರಿಗೆ ಲಿಖಿತ ಆದೇಶದ ಮೂಲಕ ಪರವಾನಿಗೆ ಕೋರಿ ನಗರ ಪಾಲಿಕೆಗೆ ಅರ್ಜಿ ಸಲ್ಲಿಸಿದ ಮೂವತ್ತು (30) ದಿನಗಳೊಳಗೆ ತಿಳಿಸತಕ್ಕದ್ದು.

xii) ಆಯುಕ್ತರು ಲಿಖಿತ ಆದೇಶದ ಮೂಲಕ ಜಾಹೀರಾತಿಗೆ ಸಂಬಂಧಿಸಿದ ಸ್ವತ್ತಿನ ಮಾಲೀಕರು ಅಥವಾ ಅಲ್ಲಿ ವಾಸಿರುತ್ತಿರುವ ವ್ಯಕ್ತಿಗಳು, ವರ್ತಕ ಮಂಡಳಿ ಅಥವಾ ಸಂಸ್ಥೆಗಳು ಅಥವಾ ಸದರಿ ಜಾಹೀರಾತನ್ನು ತೆಗೆದುಹಾಕಲು ಅಧಿಕಾರವುಳ್ಳವರಿಗೆ ಯಾವುದೇ ಕಟ್ಟಡ, ಗೋಡೆ ಅಥವಾ ಫಲಕ ಅಥವಾ ವಿನ್ಯಾಸದ ಮೇಲೆ ಅಳವಡಿಸಿರುವ, ದಾಖಲಿಸಿರುವ ಅಥವಾ ನಾಟಿರುವ, ಸ್ಥಿರಪಡಿಸಿರುವ ಅಥವಾ ಸಾರ್ವಜನಿಕ ರಸ್ತೆ ಅಥವಾ ಸ್ಥಳದಿಂದ ಗೋಚರಿಸುತ್ತಿರುವ ಜಾಹೀರಾತನ್ನು ತೆಗೆದುಹಾಕುವಂತೆ ತಿಳಿಸಬಹುದಾಗಿದೆ.

xiii) ಆಯುಕ್ತರು ನೀಡಿರುವ ಆದೇಶದಿಂದ ನೊಂದಿರುವ ಆಸಕ್ತ ವ್ಯಕ್ತಿ ಅಥವಾ ಏಜೆನ್ಸಿಯು ಆದೇಶ ತಲುಪಿದ ಹದಿನೈದು (15) ದಿನಗಳೊಳಗಾಗಿ ಲಿಖಿತ ರೂಪದಲ್ಲಿ ಪುನರ್ ಪರಿಶೀಲನಾ ಅರ್ಜಿಯನ್ನು ನಿಗಧಿತ ನಮೂನೆಯಲ್ಲಿ ಸಲ್ಲಿಸತಕ್ಕದ್ದು. ಪುನರ್ ಪರಿಶೀಲನಾ ಅರ್ಜಿ ನೀಡಿದ ಹತ್ತು (10) ಕಾರ್ಯನಿರ್ವಹಣಾ ದಿನಗಳೊಳಗಾಗಿ ಸದರಿ ಅರ್ಜಿಗೆ ಆಯುಕ್ತರು ಲಿಖಿತ ರೂಪದಲ್ಲಿ ಉತ್ತರಿಸತಕ್ಕದ್ದು.

xiv) ಒಂದು ವೇಳೆ 10 ದಿನಗಳೊಳಗಾಗಿ ಆಯುಕ್ತರು ಪುನರ್ ಪರಿಶೀಲನಾ ಅರ್ಜಿಗೆ ಸಂಬಂಧಿಸಿದಂತೆ ಆದೇಶ ನೀಡದಿದ್ದಲ್ಲಿ, ಅರ್ಜಿಯನ್ನು ನಿಗಧಿತ ನಮೂನೆಯಲ್ಲಿ ಪಾಲಿಕೆಯ ತೆರಿಗೆ ಮತ್ತು ಅಪೀಲು ಸ್ಥಾಯಿ ಸಮಿತಿಗೆ ಸಲ್ಲಿಸತಕ್ಕದ್ದು.

xv) ಯಾವುದೇ ಆಸಕ್ತ ವ್ಯಕ್ತಿ ಅಥವಾ ಏಜೆನ್ಸಿಯು, ಆಯುಕ್ತರು ಅರ್ಜಿಯನ್ನು ತಿರಸ್ಕರಿಸಿ ನೀಡಿದ ಆದೇಶದ ವಿರುದ್ಧ ಸದರಿ ಆದೇಶ ತಲುಪಿದ ಹದಿನೈದು ದಿನಗಳೊಳಗಾಗಿ ತೆರಿಗೆ ಮತ್ತು ಅಪೀಲು ಸ್ಥಾಯಿ ಸಮಿತಿಗೆ ನಿಗಧಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

ಅದರೆ ಇಂತಹ ಅಪೀಲುಗಳನ್ನು ಸಲ್ಲಿಸುವಾಗ ಆದೇಶಗಳನ್ನು ಪಾಲಿಸದ ಪ್ರಕರಣಗಳಲ್ಲಿ ಆಯುಕ್ತರು ತೆಗೆದುಕೊಳ್ಳುವ ಕ್ರಮಕ್ಕೆ ಧಕ್ಕೆಯುಂಟಾಗದಂತೆ ಅಂದರೆ ಜಾಹೀರಾತು ಅಥವಾ ಪೋಸ್ಟರ್‌ಗಳನ್ನು ತೆಗೆದು ಹಾಕಲು ನೀಡಿರುವ ಅವಧಿ ಯಾವ ಕಾರಣಕ್ಕೂ ಮುಂದುವರೆಯದಂತೆ ಕಾಳಜಿ ವಹಿಸಬೇಕು.

3ಎ(14) **ಅಪೀಲು ಸ್ಥಾಯಿ ಸಮಿತಿ ಆದೇಶ ನೀಡುವ ಪೂರ್ವದಲ್ಲಿ ಎರಡೂ ಕಡೆಯ ಅಹವಾಲು ಕೇಳಬೇಕು ಮತ್ತು ದಾಖಲೆಗಳು ಹಾಗೂ ನಿರ್ದಿಷ್ಟ ದಾಖಲೆಗಳನ್ನು ತಪಾಸಣೆ ಮಾಡಬಹುದು. ತದನಂತರ ಕಾನೂನಿನ್ವಯ ಆದೇಶವನ್ನು ನೀಡಬಹುದಾಗಿದೆ.**

ಎ) ಅಪೀಲು ಪುರಸ್ಕೃತವಾದಲ್ಲಿ ಆದೇಶದಲ್ಲಿರುವ ನಿಬಂಧನೆಗಳಿಗನುಸಾರವಾಗಿ ಜಾಹೀರಾತು ಫಲಕವನ್ನು ಅಳವಡಿಸಲು ಏಜೆನ್ಸಿಗೆ ಅನುಮತಿ ನೀಡತಕ್ಕದ್ದು.

ಬಿ) ಒಂದು ವೇಳೆ ಅಪೀಲು ತಿರಸ್ಕೃತವಾದಲ್ಲಿ ಏಜೆನ್ಸಿಯು ಮುಂದಿನ ಅಪೀಲನ್ನು ಸಲ್ಲಿಸಲು ಇಚ್ಚಿಸಿದ್ದಾಗ್ಯೂ ಅಥವಾ ಸಲ್ಲಿಸಿದ್ದರೂ ತಡೆಯಾಜ್ಞೆ ಇಲ್ಲವಾದಲ್ಲಿ ಜಾಹೀರಾತು ಫಲಕವನ್ನು 10 ದಿನಗಳೊಳಗಾಗಿ ತೆಗೆದುಹಾಕತಕ್ಕದ್ದು.

ಸಿ) ಈ ರೀತಿಯ ಲಿಖಿತ ಆದೇಶಗಳನ್ನು ನಿಗಧಿತ ಅವಧಿಯಲ್ಲಿ ಪಾಲಿಸದಿದ್ದ ಪಕ್ಷದಲ್ಲಿ ಆಯುಕ್ತರು ಸದರಿ ಫಲಕವನ್ನು ತೆಗೆದು ಹಾಕಿಸಲು ಕ್ರಮ ತೆಗೆದುಕೊಳ್ಳತಕ್ಕದ್ದು ಮತ್ತು ಇದಕ್ಕೆ ತಗಲುವ ವೆಚ್ಚವನ್ನು ಸಂಬಂಧಪಟ್ಟ ಮಾಲೀಕರಿಂದ ಅಥವಾ ಮೇಲೆ ತಿಳಿಸಿದಂತೆ ಸ್ವಾಧೀನತೆ ಹೊಂದಿದವರಿಂದ ವಸೂಲು ಮಾಡುವುದರ ಜೊತೆಗೆ ಕಾನೂನು ಕ್ರಮಕ್ಕೆ ಒಳಪಡಿಸುವುದು

ಇತ್ಯಾದಿ ಇತರೇ ದಂಡನಾ ಕ್ರಮಗಳನ್ನು ತೆಗೆದುಕೊಳ್ಳಬೇಕು.

3ಎ(15) **ಈ ಉಪವಿಧಿಗಳನ್ನು ಉಲ್ಲಂಘಿಸಿದಂತಹ ಪ್ರಕರಣಗಳಲ್ಲಿ ಪಾಲಿಕೆಯು ಕಾರಣ ಕೇಳಿ ನೋಟೀಸು ಜಾರಿ ಮಾಡತಕ್ಕದ್ದು. ಏಳು ಕಾರ್ಯನಿರ್ವಹಣಾ ದಿನಗಳೊಳಗಾಗಿ ಉತ್ತರ ನೀಡದೆ ಅಥವಾ ಉಲ್ಲಂಘನೆ ದೃಢಪಟ್ಟಂತಹ ಪ್ರಕರಣಗಳು ಕೆಳಕಂಡ ದಂಡನೆಗಳಿಗೆ ಅರ್ಹವಾಗುತ್ತದೆ.**

i) ರೂ. 25,000/– ದರದವರೆಗೆ ದಂಡ ಮತ್ತು ಉಲ್ಲಂಘನೆ ಮುಂದುವರಿದಲ್ಲಿ ನೋಟೀಸು ನೀಡಿದ ದಿನದಿಂದ ಅನ್ವಯವಾಗುವಂತೆ, ಉಲ್ಲಂಘನಾ ಅವಧಿಯಲ್ಲಿ ಪ್ರತಿದಿನ ರೂ. 250/– ರವರೆಗೆ ದಂಡ

ii) ಉಲ್ಲಂಘನೆ ಮುಂದುವರೆಯದಂತೆ ಆಯುಕ್ತರು ನೀಡಿರುವ ನೋಟೀಸು ತಲುಪಿದ ದಿನದಿಂದ ಜಾರಿಗೆ ಬರುವಂತೆ ಉಲ್ಲಂಘನೆ ಮುಂದುವರೆದ ಅವಧಿಗೆ ಪ್ರತಿದಿನ ರೂ. 500/– ರವರೆಗೆ ದಂಡ

iii) ಮೂರು ದಿನಗಳ ನೋಟೀಸು ನೀಡಿ ಆಯುಕ್ತರು ಅನಧಿಕೃತ ಜಾಹೀರಾತುಗಳನ್ನು ವಿರೂಪಗೊಳಿಸಬಹುದು ಅಥವಾ ತೆರವುಗೊಳಿಸತಕ್ಕದ್ದು.

iv) ಇಂತಹ ತಪ್ಪುಗಳು ಪುನರಾವರ್ತನೆ ಆಗದಂತೆ ಆಯುಕ್ತರು ಅವರ ವಿವೇಚನೆಗೊಳಪಟ್ಟಂತೆ ಸದರಿ ಏಜೆನ್ಸಿಗೆ ವಿವರಣೆ ನೀಡಲು ಅವಕಾಶ ನೀಡಿ, ಲಿಖಿತವಾಗಿ ದಾಖಲಿಸಿದ ಕಾರಣಗಳಿಗಾಗಿ ಏಜೆನ್ಸಿಯ ನೋಂದಣಿಯನ್ನು ನವೀಕರಣ ಮಾಡದಿರಬಹುದಾಗಿದೆ. ಈ ಕ್ರಮವನ್ನು ಮತ್ತು ಅದಕ್ಕೆ ಕಾರಣಗಳನ್ನು ಏಜೆನ್ಸಿಗೆ ತಿಳಿಸತಕ್ಕದ್ದು.

3ಎ(16) ಟ್ರೈವಿಶನ್/ಟ್ರೈಆಡ್ ಅಥವಾ ಎಲೆಕ್ಟ್ರಾನಿಕ್ಸ್ ಪ್ರದರ್ಶಿಸಿದ ಫಲಕಗಳು ರಸ್ತೆಯ ಮೇಲ್ಸೇತುವೆ, ರಸ್ತೆಯ ಕೆಳಸೇತುವೆ ಅಥವಾ ಫ್ಲೈಓವರ್‌ಗಳ ಗೋಡೆ ಅಥವಾ ಪೆರಾಪಿಟ್‌ಗಳಿಂದ 10.0 ಮೀಟರ್ ಅಂತರದಲ್ಲಿರತಕ್ಕದ್ದಲ್ಲ. ಈ ದೂರವನ್ನು ಲೆಕ್ಕಹಾಕುವಾಗ ಜಾಹೀರಾತು ಫಲಕದ ಅತಿ ಸಮೀಪದ ಬಿಂದು ಅಥವಾ ವಿನ್ಯಾಸದ ಸಮೀಪದ ರಸ್ತೆಯಲ್ಲಿರುವ ಪಾರ್ಶ್ವ/ಬದಿಗಳನ್ನು ಪರಿಗಣಿಸಬೇಕು.

3ಎ(17) ಪಾಲಿಕೆಯು ಹೊಸ ಫಲಕಗಳಿಗೆ ಅಥವಾ ಈಗಾಗಲೇ ಇರುವ ಫಲಕಗಳನ್ನು ಮುಂದುವರಸಲು ಪರವಾನಿಗೆ ನೀಡುವಾಗ ಫಲಕದ ನಿರ್ದಿಷ್ಟ ಸ್ಥಳ, ಅದರ ಅಳತೆ, ಶುಲ್ಕದ ಪ್ರಮಾಣ ಮತ್ತು ಅನ್ವಯವಾಗುವ ಶುಲ್ಕದ ವಿವರ ನೀಡಿ, ಶುಲ್ಕ ಪಾವತಿಸಲು ಸಂಬಂಧಿಸಿದ ಏಜೆನ್ಸಿಗೆ ಬೇಡಿಕೆ ನೋಟೀಸು(demand notice) ಜಾರಿ ಮಾಡಬೇಕು.

3ಎ(18) ಜಾಹೀರಾತು ಏಜೆನ್ಸಿಯು ಜಾಹೀರಾತು ಶುಲ್ಕದ ಹಿಂಬಾಕಿಯನ್ನು ಪಾವತಿಸದಿದ್ದಲ್ಲಿ ಹಿಂಬಾಕಿಯನ್ನು ತೀರಿಸುವವರೆಗೆ ಹೊಸ ಫಲಕ ಅಥವಾ ಫಲಕದ ನವೀಕರಣದ ಪರವಾನಿಗೆಯನ್ನು ಪಾಲಿಕೆಯು ತಡೆಹಿಡಿಯತಕ್ಕದ್ದು. ವಿಳಂಬ ಮಾಡಿರುವ ಶುಲ್ಕ ಪಾವತಿ ಹಿಂಬಾಕಿಗೆ ಶುಲ್ಕದ ಶೇ 2 ರಷ್ಟು ದಂಡವನ್ನು ಪ್ರತಿ ತಿಂಗಳು ವಿಧಿಸತಕ್ಕದ್ದು. ತಪ್ಪಿದ್ದಲ್ಲಿ ರದ್ದುಪಡಿಸಿ ಮುಟ್ಟುಗೋಲು ಹಾಕಿಕೊಂಡು ನಿಯಮಾನುಸಾರ ಏಜೆನ್ಸಿ/ವ್ಯಕ್ತಿ/ಕಂಪನಿಗೆ ನೀಡುವ ಅಧಿಕಾರ ಪಾಲಿಕೆ ಆಯುಕ್ತರಿಗೆ ಇರುತ್ತದೆ.

3ಎ(19) ಟ್ರೈಆಡ್, ಸ್ಕ್ರೋಲರುಗಳು ಮುಂತಾದ ಬಹುವಿಧದ ಜಾಹೀರಾತುಗಳಿಗೆ ಷೆಡ್ಯೂಲ್ ದರಗಳಲ್ಲಿ ವಿಧಿಸುವ ಮತ್ತು ಕಾಲಕಾಲಕ್ಕೆ ಪರಿಷ್ಕರಿಸಬಹುದಾದ ಜಾಹೀರಾತು ಶುಲ್ಕದ ದರದ 100% ಹೆಚ್ಚಿನ ಪ್ರಮಾಣದಲ್ಲಿ ಜಾಹೀರಾತು ಶುಲ್ಕವನ್ನು ವಿಧಿಸತಕ್ಕದ್ದು.

3ಎ(20) ಚಾಲ್ತಿಯಲ್ಲಿರುವ ಯಾವುದೇ ಫಲಕವನ್ನು ಇನ್ನೊಂದು ಬಗೆಯಲ್ಲಿ (ಉದಾ: ಪ್ರಕಾಶಿತವಲ್ಲದ ಫಲಕಗಳನ್ನು ಪ್ರಕಾಶಿತಗೊಳಿಸುವುದು. ಪ್ರಕಾಶಿತವಿರುವುದನ್ನು ಟ್ರೈವಿಜನ್/ಸ್ಕ್ರೋಲರ್/ನಿಯನ್ ರೀತಿಯಲ್ಲಿ ರೂಪಾಂತರಗೊಳಿಸುವುದು ಇತ್ಯಾದಿ) ಮಾರ್ಪಾಡುಗೊಳಿಸಲು ಆಯುಕ್ತರ ಲಿಖಿತ ಪೂರ್ವಾನುಮತಿ ಪಡೆಯುವ ಮತ್ತು ನಿಗಧಿಗೊಳಿಸುವ ಶುಲ್ಕ ಪಾವತಿ ಮಾಡುವ ಅವಶ್ಯಕತೆಯಿದೆ. ಈ ಉಪವಿಧಿಯನ್ನು ಉಲ್ಲಂಘಿಸಿದ ಪ್ರಕರಣಗಳಲ್ಲಿ ಮೊದಲ ಉಲ್ಲಂಘನೆಗೆ ಪ್ರತಿ ದಿನ ರೂ. 1,000/– ಮತ್ತು ಎರಡನೆಯ ಸಲದ ಉಲ್ಲಂಘನೆಗೆ ಪ್ರತಿದಿನ ರೂ. 2,500/– ರಷ್ಟು ದಂಡ ವಿಧಿಸುವುದರ ಜೊತೆಗೆ ಆಯುಕ್ತರ ವಿವೇಚನೆಗೆ ಒಳಪಟ್ಟಂತೆ ನೋಂದಣಿಯನ್ನು ರದ್ದುಗೊಳಿಸಲಾಗುವುದು. ಶುಲ್ಕವನ್ನು ಅನುಬಂಧ–1 ರಲ್ಲಿ ತಿಳಿಸಿರುವಂತೆ ಪರವಾನಿಗೆ ನೀಡಿದ ದಿನಾಂಕದಿಂದ ವಿಧಿಸತಕ್ಕದ್ದು.

3ಎ(21) ಏಜೆನ್ಸಿಗಳು ಜಾಹೀರಾತು ಶುಲ್ಕವನ್ನು ಒಂದೇ ಕಂತಿನಲ್ಲಿ ಅಂದರೆ ಮಾರ್ಚ್ 31 ರ ಒಳಗೆ ಪಾವತಿ ಮಾಡತಕ್ಕದ್ದು.

3ಎ(22) ನವೀಕರಣಕ್ಕಾಗಿ ಮನವಿಯನ್ನು ನಿಗಧಿತ ನಮೂನೆಯಲ್ಲಿ ಚಾಲ್ತಿಯಲ್ಲಿರುವ ನವೀಕರಣ ಮುಕ್ತಾಯವಾಗುವ ವರ್ಷದ ಮಾರ್ಚ್ 15 ರೊಳಗಾಗಿ ಪಾಲಿಕೆಗೆ ಸಲ್ಲಿಸಬೇಕು ಮತ್ತು ಪಾಲಿಕೆಯು ಈ ಕೆಳಕಂಡ ಷರತ್ತುಗಳನ್ನೊಳಗೊಂಡು ನವೀಕರಣ ಸಮ್ಮತಿಸಬಹುದಾಗಿದೆ.

i) ಚಾಲ್ತಿಯಲ್ಲಿರುವ ಪರವಾನಿಗೆಯಲ್ಲಿದ್ದ ಫಲಕದ ವಿನ್ಯಾಸದಲ್ಲಿ ಬದಲಾವಣೆ ಇರಬಾರದು.

ii) ಎಲ್ಲಾ ಜಾಹೀರಾತುಗಳಿಗೆ ಆ ದಿನಾಂಕದವರೆಗಿನ ಶುಲ್ಕವನ್ನು ಪಾವತಿ ಮಾಡಿರಬೇಕು.

iii) ಫಲಕ ಅಳವಡಿಸಿರುವ ವಿನ್ಯಾಸದ ಹಾಗೂ ಫಲಕವನ್ನು ಯಾವುದೇ ಕಟ್ಟಡ ಮೇಲ್ಛಾವಣಿಯಲ್ಲಿ ಅಳವಡಿಸಿದಲ್ಲಿ ಕಟ್ಟಡದ ದೃಢತೆ ಬಗ್ಗೆ ನಗರ ಪಾಲಿಕೆ ಕಾರ್ಯಪಾಲಕ ಇಂಜಿನಿಯರ್‌ರವರಿಂದ ದೃಢೀಕೃತ ಪತ್ರ ಪಡೆದು ಸಲ್ಲಿಸತಕ್ಕದ್ದು.

iv) ಭೂಮಾಲೀಕರು ನೀಡಿರುವ ನಿರಾಕ್ಷೇಪಣಾ ಪ್ರಮಾಣಪತ್ರ ಚಾಲ್ತಿಯಲ್ಲಿರಬೇಕು.

v) ನವೀಕರಣ ಪುನರ್ ಪರಿಶೀಲನೆಯ ಉಪವಿಧಿಗಳ/ಕಾಯಿದೆ ಉಲ್ಲಂಘನೆಗೆ ಕಾರಣವಾಗಿರಬಾರದು.

vi) ಈ ಜಾಹೀರಾತು ಉಪವಿಧಿಗಳು ಜಾರಿಗೆ ಬರುವುದಕ್ಕೆ ಮುನ್ನ ಪಾಲಿಕೆಯಿಂದ ಅನುಮತಿಯನ್ನು ಪಡೆದು ಅಳವಡಿಸಲಾದ ಜಾಹೀರಾತು ಪ್ರಕರಣಗಳಿಗೆ ನವೀಕರಣ ನೀಡುವಾಗ ಈ ಉಪವಿಧಿಗಳನ್ವಯ ನಿಯಮಾನುಸಾರ ಇದ್ದಲ್ಲಿ ಮಾತ್ರ ನವೀಕರಣ ನೀಡತಕ್ಕದ್ದು.

vii) ಈ ಹಿಂದೆ ಪಾಲಿಕೆಯಿಂದ ನೀಡಲಾದ ಜಾಹೀರಾತು ಅನುಮತಿ ಈ ಉಪವಿಧಿಗಳಲ್ಲಿನ ನಿಯಮಾನುಸಾರ ಇಲ್ಲದಿದ್ದಲ್ಲಿ ನವೀಕರಣ ಪ್ರಸ್ತಾವನೆಯನ್ನು ತಿರಸ್ಕರಿಸತಕ್ಕದ್ದು.

viii ಅವಧಿ ಮುಗಿದು ಜಾಹೀರಾತು ನವೀಕರಿಸಲಾಗದ ಪ್ರಕರಣಗಳಲ್ಲಿ ಅಂತಹ ಜಾಹೀರಾತುಗಳನ್ನು ಅವಧಿ ಮುಗಿದ 15 ದಿನಗಳೊಳಗಾಗಿ ತೆರವುಗೊಳಿಸಲು ಜಾಹೀರಾತು ಏಜೆನ್ಸಿ ಅಥವಾ ಜಾಹೀರಾತುದಾರರಿಗೆ ಲಿಖಿತವಾಗಿ ಸೂಚಿಸತಕ್ಕದ್ದು.

ನಿಗಧಿತ ಸಮಯದಲ್ಲಿ ಏಜೆನ್ಸಿ ಅಥವಾ ಜಾಹೀರಾತುದಾರರು ತೆರವುಗೊಳಿಸಲು ತಪ್ಪಿದ್ದಲ್ಲಿ ಈ ಉಪವಿಧಿಗಳಲ್ಲಿ ಪ್ರತಿ ತಿಂಗಳಿಗೆ ನಿಗಧಿಪಡಿಸಲಾಗಿರುವ ಜಾಹೀರಾತು ಶುಲ್ಕದ ಮೊತ್ತವನ್ನು ಪ್ರತಿದಿನ ಒಂದಕ್ಕೆ ಆ ಮೊತ್ತವನ್ನು ದಂಡದ ರೂಪದಲ್ಲಿ ಒಂದು ತಿಂಗಳವರೆಗೆ ವಿಧಿಸತಕ್ಕದ್ದು. ತದನಂತರ ಪಾಲಿಕೆಯಿಂದ ತೆರವುಗೊಳಿಸಿ, ಸಾಮಾಗ್ರಿಗಳನ್ನು ಮುಟ್ಟುಗೋಲು ಹಾಕಿಕೊಂಡು ತೆರವುಗೊಳಿಸಲು ತಗಲುವ ವೆಚ್ಚವನ್ನು ಜಾಹೀರಾತು ಏಜೆನ್ಸಿ ಅಥವಾ ಜಾಹೀರಾತುದಾರರಿಂದ ವಸೂಲಿ ಮಾಡತಕ್ಕದ್ದು.

3ಎ (23) ಜಾಹೀರಾತುದಾರರಿಗೆ ಒಂದು ನಿರ್ದಿಷ್ಟ ಸ್ಥಳದಲ್ಲಿ ಜಾಹೀರಾತು ಪ್ರದರ್ಶಿಸಲು ಅನುಮತಿ ನೀಡಿರುವಾಗ ಅದನ್ನು ಸ್ಥಳಾಂತರಗೊಳಿಸಲು ಅಥವಾ ಅನುಮತಿಯನ್ನು ಬೇರೆ ಏಜೆನ್ಸಿಗೆ ವರ್ಗಾಯಿಸಲು ಅವಕಾಶವಿರುವುದಿಲ್ಲ. ಉದ್ದೇಶ ಯಾವುದೇ ಇದ್ದರೂ, ಫಲಕಗಳನ್ನು ಇತರೇ ಏಜೆನ್ಸಿಗೆ ಒಳಗೇಣಿಗೆಯಾಗಿ ಕೊಡುವುದಕ್ಕೆ ಅನುಮತಿ ನೀಡತಕ್ಕದ್ದಲ್ಲ. ಆದಾಗ್ಯೂ ವಿನೈಲ್, ಫ್ಲೆಕ್ಸ್ ಮುಂತಾದ ಜಾಹೀರಾತುಗಳನ್ನು ಅಳವಡಿಸಲು ಸೃಜನಾತ್ಮಕ ಏಜೆನ್ಸಿಯ ಸೇವೆಯನ್ನು ಉಪಯೋಗಿಸಿಕೊಳ್ಳಬಹುದಾಗಿದೆ. ಒಳಗೇಣಿಗಾಗಿ ನೀಡಿರುವುದು ಕಂಡು ಬಂದಲ್ಲಿ ಪರವಾನಿಗೆ ರದ್ದುಗೊಳಿಸತಕ್ಕದ್ದು.

3ಎ (24) ಪಾಲಿಕೆಯು ನೂತನ ಪರವಾನಿಗೆ ನೀಡುವ ಸಂದರ್ಭದಲ್ಲಿ ಈಗಾಗಲೇ ಚಾಲ್ತಿಯಲ್ಲಿರುವ ಫಲಕವು ಗೋಚರಿಸಬೇಕಾಗಿರುವ ಅಂಚುಗಳು ಹೊಸದಾಗಿ ಅಳವಡಿಸಲು ಪ್ರಸ್ತಾಪಿಸಿರುವ ಫಲಕದಿಂದಾಗಿ ಮರೆಯಾಗದಂತೆ ಖಚಿತಪಡಿಸಿಕೊಳ್ಳ ತಕ್ಕದ್ದು.

ಒಂದು ವೇಳೆ ಪರವಾನಿಗೆ ನೀಡಲಾಗಿರುವ ಹೊಸ ಫಲಕ, ಈಗಾಗಲೇ ಇರುವ ಫಲಕವನ್ನು ಮರೆ ಮಾಡುತ್ತಿದ್ದಲ್ಲಿ ಅಂತಹ ಅರ್ಜಿದಾರರಿಗೆ ಪಾಲಿಕೆಯು, ಇದಕ್ಕೆ 3 ದಿನಗಳೊಗಾಗಿ ಕಾರಣ ತಿಳಿಸುವಂತೆ ಅರ್ಜಿದಾರರಿಗೆ ತಿಳುವಳಿಕೆ ಪತ್ರ ನೀಡತಕ್ಕದ್ದು ಮತ್ತು ಸದರಿ ಪತ್ರಕ್ಕೆ ಅರ್ಜಿದಾರರು ನೀಡುವ ಉತ್ತರ ತೃಪ್ತಿಕರವಿಲ್ಲವೆಂದು ಕಂಡು ಬಂದಲ್ಲಿ ಹೊಸ ಫಲಕವನ್ನು ತೆಗೆದುಹಾಕಲು ಕ್ರಮ ತೆಗೆದುಕೊಳ್ಳತಕ್ಕದ್ದು.

3ಎ (25) ಸಾರ್ವಜನಿಕ ಪ್ರಾಧಿಕಾರಗಳು ಸರ್ಕಾರಿ ಅಥವಾ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾ ರೈಲ್ವೆ ರಕ್ಷಣಾ ಮಂತ್ರಾಲಯ, ಸಾರ್ವಜನಿಕ ಉದ್ದಿಮೆಗಳು ಮುಂತಾದ ಅರೆ ಸರ್ಕಾರಿ ಸಂಸ್ಥೆಗಳು ಇವುಗಳಿಗೆ ಸಂಬಂಧಿಸಿರುವ ಸ್ವತ್ತು ಅಥವಾ ಆವರಣಗಳಲ್ಲಿ ಫಲಕಗಳನ್ನು ಅಳವಡಿಸಲು ಹಾಗೂ ಪ್ರದರ್ಶಿಸಲು ಇಚ್ಚಿಸುವ ಏಜೆನ್ಸಿಗಳು ಅಂತಹ ಫಲಕಗಳ ಅಳವಡಿಸುವ ಮೊದಲು ದಾವಣಗೆರೆ ಮಹಾನಗರ ಪಾಲಿಕೆಯಿಂದ ನಿರಾಕ್ಷೇಪಣಾ ಪತ್ರವನ್ನು (ಎನ್‌ಒಸಿ) ಪಡೆದು ನಂತರವೇ ಅಂತಹ ಸಂಸ್ಥೆಗಳು ಫಲಕಗಳಿಗೆ ಅನುಮತಿಸತಕ್ಕದ್ದು. ಈ ನಿಯಮದಂತೆ ದಾವಣಗೆರೆ ಮಹಾನಗರ ಪಾಲಿಕೆಯಿಂದ ಅನುಮತಿ ಪಡೆಯದೇ ಸಾರ್ವಜನಿಕ ಪ್ರಾಧಿಕಾರಗಳ ಆವರಣಗಳಲ್ಲಿ ಆಳವಡಿಸಿರುವ ಫಲಕಗಳನ್ನು ಅನಧಿಕೃತವೆಂದು ಪರಿಗಣಿಸತಕ್ಕದ್ದು. ಶುಲ್ಕ ವಿಧಿಸಲು ಅನುಕೂಲವಾಗುವಂತೆ ಅಳವಡಿಸಲು ಇಚ್ಚಿಸುವ ಫಲಕದ ಸ್ಥಳ, ಗಾತ್ರ ಮತ್ತು ಅಳವಡಿಸುವ ದಿನಾಂಕದ ಕುರಿತು ಅಳವಡಿಸಲು ಪ್ರಸ್ತಾಪಿಸಿರುವ ದಿನಾಂಕದಿಂದ ಪೂರ್ವದಲ್ಲಿ 15 ದಿನಗಳಿಗೆ ಮೀರದಂತೆ ಪಾಲಿಕೆಗೆ ತಿಳಿಸತಕ್ಕದ್ದು. ಇಂತಹ ಫಲಕಗಳ ಸ್ಥಳ, ಗಾತ್ರ, ಎತ್ತರ ಮತ್ತು ಈ ಉಪ ವಿಧಿಗಳ ಇತರೇ ಷರತ್ತುಗಳು ಸದರಿ ಫಲಕಗಳಿಗೆ ಅನ್ವಯವಾಗುತ್ತದೆ ಮತ್ತು ಇದರಲ್ಲಿ ಯಾವುದೇ ವಿನಾಯಿತಿ ನೀಡತಕ್ಕದ್ದಲ್ಲ ಇದನ್ನು ಪಾಲಿಸುವುದು ಅಥವಾ ಜಾರಿ ಮಾಡುವುದು ಫಲಕ ಅಳವಡಿಕೆಗೆ ಪರವಾನಿಗೆ ನೀಡುವ ಸಂಸ್ಥೆಯ ಹೊಣೆಯಾಗಿರುತ್ತದೆ.

3ಎ (26) ಎಲ್ಲಾ ಸರ್ಕಾರಿ ಮತ್ತು ಅರೆ ಸರ್ಕಾರಿ ಸಂಸ್ಥೆಗಳು ತಮ್ಮ ಆವರಣದಲ್ಲಿ ಅಳವಡಿಸಿರುವ ಫಲಕಗಳೊಂದಿಗೆ ಅವುಗಳ ಏಜೆನ್ಸಿಗಳು, ಫಲಕಗಳ ಸ್ಥಳ ಗಾತ್ರ ಮತ್ತು ಅವುಗಳ ಸಂಖ್ಯೆಯನ್ನೊಳಗೊಂಡ ಪಟ್ಟಿಯನ್ನು ಪ್ರತಿವರ್ಷ ಒಂದು ಸಲ ಪಾಲಿಕೆಗೆ ಸಲ್ಲಿಸತಕ್ಕದ್ದು.

ಅದರಂತೆಯೇ ಖಾಸಗಿ ಸ್ವತ್ತುಗಳಲ್ಲಿ ಫಲಕಗಳನ್ನು ಅಳವಡಿಸುವ ಕುರಿತು ಏಜೆನ್ಸಿಯು ಈ ಉಪವಿಧಿಗಳಲ್ಲಿ ನಿಗಧಿಪಡಿಸಿದ ರೀತಿಯಲ್ಲಿ ಸ್ವತ: ಅರ್ಜಿ ಸಲ್ಲಿಸಿ, ಲಿಖಿತ ಪರವಾನಿಗೆಯನ್ನು ಪಡೆದುಕೊಳ್ಳಬೇಕು. ಖಾಸಗಿ ಸ್ವತ್ತುಗಳಲ್ಲಿ ಮತ್ತು ಸರ್ಕಾರಿ ಮತ್ತು ಅರೆಸರ್ಕಾರಿ ಸ್ವತ್ತುಗಳಲ್ಲಿ ಅಳವಡಿಸುವ ಫಲಕಗಳಿಗೆ ನೀಡುವ ಪರವಾನಿಗೆಗಳಲ್ಲಿ ತಾರತಮ್ಯ ಮಾಡತಕ್ಕದ್ದಲ್ಲ.

ಈ ಉಪ ಪರಿಚ್ಛೇದದ ಉಲ್ಲಂಘನೆಯಾದಲ್ಲಿ ಜಾಹೀರಾತುದಾರರು ಮತ್ತು ಫಲಕ ಹೊಂದಿರುವ ಸ್ವತ್ತಿನ ಮಾಲೀಕತ್ವ ಹೊಂದಿರುವ ಏಜೆನ್ಸಿ ಇವರುಗಳನ್ನು ವಜಾ ಮಾಡಲಾಗುವುದು.

3ಎ (27) ಪಾಲಿಕೆಯು, ಜಾಹೀರಾತು ಶುಲ್ಕ ಪಾವತಿ ಮಾಡದೇ ಇರುವ ಕರ್ನಾಟಕ ಗ್ರಾಮಾಂತರ ಸಾರಿಗೆ ಸಂಸ್ಥೆ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆ, ಎಲ್.ಐ.ಸಿ., ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾ, ರೈಲ್ವೆ ಇತ್ಯಾದಿ ಇವುಗಳ ಸ್ವತ್ತಿನಲ್ಲಿ ಅಳವಡಿಸಿರುವ ಜಾಹೀರಾತನ್ನು ತೆಗೆದು ಹಾಕುವ ಹಕ್ಕು /ಅಧಿಕಾರ ಹೊಂದಿರುತ್ತದೆ.

3ಎ (28) ಅನುಬಂಧ–2 ರಲ್ಲಿ ತಿಳಿಸಿರುವಂತೆ ಫಲಕಗಳಿಗೆ ಅನುಮತಿ ನೀಡಲಾಗುವುದು. ಸಮಕ್ಷೇತ್ರವಿರುವ ಆದರೆ ಲಂಬಾಕಾರ ಅಥವಾ ಚೌಕಾಕಾರದಲ್ಲಿರುವ ಫಲಕಗಳನ್ನು ಆಯುಕ್ತರು ಅವುಗಳು ಈ ಉಪವಿಧಿಗಳಲ್ಲಿ ಪರವಾನಿಗೆಗಾಗಿ ನಿಗಧಿಪಡಿಸಿರುವ ಷರತ್ತುಗಳನ್ನು ಅತಿಕ್ರಮಿಸುವುದಿಲ್ಲವೆಂದು ಮನವರಿಕೆಯಾದಲ್ಲಿ ಪ್ರತ್ಯೇಕ ಪ್ರಕರಣಗಳನ್ನು ಪರಿಶೀಲಿಸಿ ಅನುಮತಿ ನೀಡಬಹುದಾಗಿದೆ.

3ಎ (29) ಯಾವುದೇ ಗಾತ್ರದ ನಮೂನೆಯ ಅಥವಾ ದಾವಣಗೆರೆ ನಗರದ ಯಾವುದೇ ಸ್ಥಳದಲ್ಲಿ ಯಾವುದೇ ಜಾಹೀರಾತುದಾರರು ಚಾಲ್ತಿಯಲ್ಲಿರುವ ಫಲಕದ ಮೇಲೆ ಲಂಬಾಕಾರದಲ್ಲಿ ಮತ್ತೊಂದು (ಡಬಲ್ ಡೆಕ್ಕರ್) ಅಥವಾ ಹೆಚ್ಚಿನ ಸಂಖ್ಯೆಯಲ್ಲಿ (ತ್ರಿಬಲ್ ಡೆಕ್ಕರ್) ಫಲಕಗಳನ್ನು ಆಯುಕ್ತರ ಪೂರ್ವಾನುಮತಿ ಇಲ್ಲದೆಯೇ ಅಳವಡಿಸತಕ್ಕದ್ದಲ್ಲ. ಒಂದು ವೇಳೆ ಇಂತಹ ಫಲಕಗಳನ್ನು ಕಟ್ಟಡದ ಒಂದು ಗೋಡೆಯ ಮೇಲ್ಛೈ ಮೇಲೆ ಅವುಗಳ ಯಾವುದೇ ಭಾಗ ಕಟ್ಟಡದ ಅಂಚುಗಳ ಜೊತೆಗೆ ಆಕಾಶದತ್ತ ಚಾಚದಿದ್ದಲ್ಲಿ ಈ ಉಪವಿಧಿಗಳ ಪರಿಚ್ಛೇಧ 3ಎ(13) ರಲ್ಲಿರುವ ಎತ್ತರದ ಸಂಬಂಧದ ಅವಕಾಶಗಳಿಗೆ ವಿನಾಯಿತಿ ನೀಡಬಹುದು. ಆದಾಗ್ಯೂ ಒಂದರ ಮೇಲೊಂದು ಇರುವಂತೆ ಗೋಚರವಾಗುವ ಎರಡು ಫಲಕಗಳಿಗೆ ಎರಡು ಫಲಕಗಳ ನಡುವಿನ ಅಂತರ ಕನಿಷ್ಟ ಒಂದು ಮೀಟರ್ ಇರತಕ್ಕದ್ದು ಎನ್ನುವ ನಿಬಂಧನೆ ಅನ್ವಯಿಸುತ್ತದೆ.

i) ಫಲಕ ಅಳವಡಿಸಿದ ನಂತರ ಅಳವಡಿಕೆ ಪೂರ್ಣಗೊಂಡ 24 ಘಂಟೆಗಳೊಳಗಾಗಿ ಏಜೆನ್ಸಿಯು ಪಾಲಿಕೆಯ ಜಾಹೀರಾತು ಶಾಖೆಗೆ ಮಾಹಿತಿ ನೀಡಬೇಕು.

ii) ತದನಂತರ, ಜಾಹೀರಾತು ವಿಭಾಗವು ಮೂರು ದಿನಗಳೊಳಗಾಗಿ ಫಲಕದ ಸ್ಥಳದ ಸಮೀಕ್ಷೆ ನಡೆಸಿ, ಅರ್ಜಿಯು ಉಪವಿಧಿಗಳಿಗನುಗುಣವಾಗಿರುವ ಬಗ್ಗೆ ಪರವಾನಿಗೆ ಷರತ್ತುಗಳು ಮತ್ತು ಏಜೆನ್ಸಿಯು ಸಲ್ಲಿಸಿರುವ ಅಥವಾ ಅನುಮತಿ ನೀಡಿರುವ ರೀತಿಯಲ್ಲಿ ಮಾರ್ಪಡಿಸಿರುವ ರೂಪುರೇಶೆಗಳನ್ನು ಪರಿಶೀಲಿಸಿದ ನಂತರ ಸಂಬಂಧಿಸಿದ ಏಜೆನ್ಸಿಗೆ ಜಾಹೀರಾತು ಪ್ರದರ್ಶಿಸಲು ಪರವಾನಿಗೆ ನೀಡಿರುವ ಬಗ್ಗೆ ತಿಳಿಸಬೇಕು.

iii ಆಯುಕ್ತರಿಂದ ಅಥವಾ ಆಯುಕ್ತರಿಂದ ನಿಯುಕ್ತಿಗೊಂಡವರಿಂದ ಅನುಮತಿ ಪಡೆಯದ ಹೊರತು ಯಾವುದೇ ಏಜೆನ್ಸಿಯು ಯಾವುದೇ ಜಾಹೀರಾತನ್ನು ಜಾಹೀರಾತು ಫಲಕದ ಮೇಲೆ ಪ್ರದರ್ಶಿಸತಕ್ಕದ್ದಲ್ಲ.

iv) ಈ ಉಪವಿಧಿಗಳನ್ನು ಪಾಲಿಸಲು ವಿಫಲವಾದ ಏಜೆನ್ಸಿಯು ಉಲ್ಲಂಘನಾ ಅವಧಿಯಲ್ಲಿ ಪ್ರತಿದಿನ ರೂ. 2,500/– ರಂತೆ ದಂಡ ನೀಡಬೇಕಾಗುತ್ತದೆ ಅಥವಾ ಹೊರಾಂಗಣ ಜಾಹೀರಾತು ಏಜೆನ್ಸಿಯ ನೋಂದಣಿ ರದ್ದುಗೊಳಿಸಲು ಕಾರಣವಾಗುತ್ತದೆ.

v) ಪ್ರತಿಯೊಂದು ಜಾಹೀರಾತು/ಪೋಲ್ಯಾಡ್ಸ್ ಫಲಕಗಳ ಕೆಳಗೆ ನೋಡಲು ಕಾಣಿಸುವಂತೆ ಪಾಲಿಕೆಯು ನೀಡಿರುವ ಅನುಮತಿ ಪತ್ರದ ಆದೇಶ ಸಂಖ್ಯೆ, ದಿನಾಂಕ ಹಾಗೂ ಕಾಲಾವಧಿಯನ್ನು ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು.

vi) ಜಾಹೀರಾತು ಫಲಕ ವಿದ್ಯುತ್ ಸಂಪರ್ಕ/ ಇತ್ಯಾದಿಗಳಿಂದ ಜೀವಹಾನಿ /ಇತರೆ ಅಪಘಾತ /ಇತರೆ ಅವಘಡಗಳು ಸಂಭವಿಸಿದ್ದಲ್ಲಿ ಅದಕ್ಕೆ ಜಾಹೀರಾತು ಪಡೆದುಕೊಂಡ

ಏಜೆನ್ಸಿ/ಕಂಪನಿ/ವ್ಯಕ್ತಿ ಜವಾಬ್ದಾರಾಗಿರುತ್ತಾರೆ. ಅದಕ್ಕೆ ಅಗತ್ಯವಿರುವ ವಿಮಾ ಪಾಲಿಸಿಯನ್ನು ಏಜೆನ್ಸಿಯು ಕಡ್ಡಾಯವಾಗಿ ಪಡೆಯತಕ್ಕದ್ದು ಹಾಗೂ ಆಗಿಂದ್ದಾಗ್ಗೆ ನವೀಕರಿಸಿಕೊಳ್ಳತಕ್ಕದ್ದು ಹಾಗೂ ವಿದ್ಯುತ್ ಸುರಕ್ಷತಾ ಕ್ರಮಗಳನ್ನು ಅಳವಡಿಸತಕ್ಕದ್ದು.

3 ಬಿ. ಸ್ವಜಾಹೀರಾತುಗಳ ಅಳವಡಿಕೆ ಮತ್ತು ಪ್ರದರ್ಶನದ ಕುರಿತು ಪ್ರಮಾಣಗಳು:

i) ತಮ್ಮದೇ ಆದ ಉತ್ಪನ್ನ ಮತ್ತು ಸೇವೆಯ ಕುರಿತು ಟ್ರಾನ್ಸ್‌ಲೈಟ್‌ಗಳನ್ನೊಳಗೊಂಡು ಸಂಕೇತ ಫಲಕಗಳನ್ನು ಪ್ರದರ್ಶಿಸಲಿಚ್ಛಿಸುವ ವಾಣಿಜ್ಯ ಸಂಸ್ಥೆಗಳು, ಬಹುರಾಷ್ಟ್ರೀಯ ಕಂಪನಿಗಳೂ, ಕಾರ್ಖಾನೆಯವರುಗಳು, ವ್ಯಾಪಾರಸ್ಥರುಗಳು, ವಾಸ್ತುಶಿಲ್ಪಿಗಳು, ಅಭಿವೃದ್ದಿಪಡಿಸುವವರು, ಆಸ್ಪತ್ರೆಗಳು, ರಾಜ್ಯ ಸರ್ಕಾರದ ಅಂಗಸಂಸ್ಥೆಗಳು, ಕೇಂದ್ರ ಸರ್ಕಾರದ ಅಂಗಸಂಸ್ಥೆಗಳು ವಾಣಿಜ್ಯ ಜಾಹೀರಾತುಗಳಿಗೆ ನಿಗಧಿಪಡಿಸಿರುವ ರೀತಿಯಲ್ಲಿಯೇ ಆಯುಕ್ತರಿಂದ ಲಿಖಿತ ಪರವಾನಿಗೆ ಪಡೆಯತಕ್ಕದ್ದು. ಆದರೆ ಇವುಗಳ ವಾಣಿಜ್ಯ ಜಾಹೀರಾತುದಾರರೆಂದು ನೋಂದಣಿಯಾಗುವ ಅವಶ್ಯಕತೆ ಇರುವುದಿಲ್ಲ. ಮತ್ತು ಇಂತಹ ಜಾಹೀರಾತುಗಳನ್ನು ವಾಣಿಜ್ಯ ಜಾಹೀರಾತುಗಳಾಗಿ ಬದಲಾವಣೆ ಮಾಡತಕ್ಕದ್ದಲ್ಲ. ಒಂದು ವೇಳೆ ಇಂತಹ ಸಂಸ್ಥೆಗಳು ಇತರೆ ತಯಾರಿಕೆದಾರರ ಉತ್ಪನ್ನಗಳು ಅಥವಾ ಸೇವೆ ಕುರಿತು ಜಾಹೀರಾತು ಪ್ರದರ್ಶಿಸಲು ಇಚ್ಛಿಪಟ್ಟಲ್ಲಿ ಅವುಗಳು ವಾಣಿಜ್ಯ ಜಾಹೀರಾತುದಾರರೆಂದು ಪಾಲಿಕೆಯಲ್ಲಿ ನೋಂದಾಯಿಸಿಕೊಳ್ಳಬೇಕಾಗುತ್ತದೆ. ತಪ್ಪಿದಲ್ಲಿ ಇತರೆ ತಯಾರಿಕೆದಾರರ ಉತ್ಪನ್ನ ಜಾಹೀರಾತು ಪ್ರದರ್ಶಿಸುವ ಹಕ್ಕನ್ನು ಕಳೆದುಕೊಳ್ಳುತ್ತದೆ. ಸ್ವಜಾಹೀರಾತನ್ನು ವಾಣಿಜ್ಯ ಫಲಕಗಳನ್ನಾಗಿ ಬದಲಾವಣೆ ಮಾಡಲು ಆಯುಕ್ತರ ವಿವೇಚನೆಗೆ ಒಳಪಟ್ಟಿದ್ದು ಅದರ ಅರ್ಹತೆ ಅನುಸಾರ ಪರಿಶೀಲಿಸತಕ್ಕದ್ದು.

ii) ಈ ಉಪವಿಧಿಯಲ್ಲಿನ ಸದರಿ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಸಂಬಂಧಿಸಿದ ಸಂಸ್ಥೆ ಈ ಕೆಳಗಿನಂತೆ ದಂಡವನ್ನು ಭರಿಸಬೇಕಾಗುತ್ತದೆ.

ಮೊದಲನೆಯ ಸಲದ ಉಲ್ಲಂಘನೆ	ರೂ. 10,000/– ದಂಡ
ಎರಡನೆಯ ಸಲದ ಉಲ್ಲಂಘನೆ	ರೂ. 15,000/– ದಂಡ
ಮೂರನೆಯ ಸಲದ ಉಲ್ಲಂಘನೆ	ರೂ. 25,000/– ದಂಡ

ಮತ್ತು ನಂತರವು ಉಲ್ಲಂಘಿಸಿದಲ್ಲಿ ಉದ್ದಿಮೆಯ ಅನುಮತಿ ಪತ್ರ ಅಥವಾ ಪಾಲಿಕೆ ನೀಡಿರುವ ಇತರೇ ಅನುಮತಿ ಪತ್ರ ರದ್ದುಗೊಳಿಸಲು ಅರ್ಹವಾಗುತ್ತವೆ.

3.ಸಿ. ಕಿಟಕಿ (Window) ಜಾಹೀರಾತುಗಳ ಪ್ರಮಾಣಗಳು :

i) ಕಿಟಕಿ ಜಾಹೀರಾತುಗಳು ಯಾವುದೇ ನಮೂನೆಯಲ್ಲಿದ್ದರೂ ಇವುಗಳನ್ನು ವಾಣಿಜ್ಯ ಜಾಹೀರಾತುಗಳ ರೀತಿಯಲ್ಲಿಯೆ ಪರಿಗಣಿಸಲಾಗುತ್ತದೆ. ಅಂಗಡಿಯ ಆವರಣದಲ್ಲಿಯೇ ಕಟ್‌ಔಟ್‌ಗಳ ಮೂಲಕ ಪ್ರದರ್ಶಿಸುವ ಕ್ಯಾಮರಾಗಳು, ಫಿಲಂಗಳು ಇವುಗಳ ಜಾಹೀರಾತುಗಳಲ್ಲಿ ಸೇರುತ್ತವೆ. ಸಾಧಾರಣ ಜಾಹೀರಾತುಗಳು ಅಂದರೆ ಕಿಟಕಿಯಲ್ಲಿ ಇಡುವ ಅಥವಾ ಕಿಟಕಿಗನ್ನಡಿಗಳ ಮೇಲೆ ಅಂಟಿಸುವ ಸ್ಟಿಕ್ಕರುಗಳು (Stickers) ಅಥವಾ ಸಣ್ಣ ಚಿತ್ರಗಳು ಇದರಲ್ಲಿ ಸೇರುವುದಿಲ್ಲ.

ಅಂಗಡಿಯ ಆವರಣದಲ್ಲಿಯೇ ಇಡಲಾದ ಕಟ್‌ಔಟ್‌ಗಳು (cutout) ತೆರಿಗೆಯಿಂದ ವಿನಾಯಿತಿ ಹೊಂದಿರುತ್ತದೆ.

ಆದರೆ ಯಾವುದೇ ಕಟ್‌ಔಟ್‌ಗಳನ್ನು (cutout) ಅಂಗಡಿಯ ಹೊರಗಾಗಲೀ ಅಥವಾ ನಡೆದಾಡಲು ಇರುವ ಪಾರ್ಶ್ವದಾರಿಯಲ್ಲಾಗಲೀ ಅನುಮತಿಸತಕ್ಕದ್ದಲ್ಲ.

ii) ಕಿಟಕಿ ಫಲಕಗಳಿಗೂ ಸ್ವ–ಫಲಕಗಳಿಗೆ ಅನ್ವಯಿಸುವ ಜಾಹೀರಾತು ದರ ಅನ್ವಯಿಸುತ್ತದೆ.

3.ಡಿ. ಪೆಟ್ರೋಲ್ ಬಂಕ್‌ಗಳ ಮೇಲಿನ ಜಾಹೀರಾತು ಪ್ರಮಾಣಗಳು :

i) ಪಾಲಿಕೆಯ ಅಧಿಕಾರ ವ್ಯಾಪ್ತಿಯಲ್ಲಿ ಸೇರುವ ಪೆಟ್ರೋಲ್ ಬಂಕ್‌ಗಳಲ್ಲಿ ಅವರುಗಳ ಹೊರಾಂಗಣದಲ್ಲಿ ಲಭ್ಯವಾಗುವ ಉತ್ಪನ್ನಗಳ ಕುರಿತು ಪ್ರದರ್ಶಿಸುವ ಜಾಹೀರಾತು ಫಲಕಗಳನ್ನು ಜಾಹೀರಾತುಗಳೆಂದೇ ಪರಿಗಣಿಸಲಾಗುತ್ತದೆ.

ii) ಒಂದು ವೇಳೆ ಪೆಟ್ರೋಲ್ ಬಂಕ್‌ಗಳಲ್ಲಿ ನೇರವಾಗಿ ಅವುಗಳಿಗೆ ಸಂಬಂಧಿಸದೇ ಇರುವ ಅಥವಾ ಅವುಗಳ ಮುಖ್ಯ ಮಾಲೀಕರು (ಉದಾ: ಹಿಂದೂಸ್ಥಾನ ಪೆಟ್ರೋಲಿಯಂ) ಒದಗಿಸದೇ ಇರುವ ಇತರೆ ಉತ್ಪನ್ನ ಅಥವಾ ಸೇವೆಯ ಕುರಿತು ಜಾಹೀರಾತುಗಳನ್ನು ಪ್ರದರ್ಶಿಸಿದಲ್ಲಿ ಇಂತಹ ಜಾಹೀರಾತುಗಳನ್ನು ವಾಣಿಜ್ಯ ಜಾಹೀರಾತುಗಳೆಂದು ಪರಿಗಣಿಸಲಾಗುವುದು. ಇಂತಹ ಯಾವುದೇ ಜಾಹೀರಾತನ್ನು ಮುಖ್ಯ ಮಾಲೀಕರು ಪಾಲಿಕೆಯಲ್ಲಿ ನಿಗಧಿತ ವಿಧದಲ್ಲಿ ಜಾಹೀರಾತು ಏಜೆನ್ಸಿಯೆಂದು ನೋಂದಣಿ ಹೊಂದಿದಲ್ಲಿ ಮಾತ್ರ ಅನುಮತಿಸಲಾಗುವುದು

iii) ಈ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿರುವ ಷರತ್ತುಗಳನ್ನು ಉಲ್ಲಂಘಿಸಿದಂತಹ ವ್ಯಾಪಾರದ ಮಳಿಗೆಯು ಈ ಕೆಳಕಂಡಂತೆ ದಂಡಗಳನ್ನು ಭರಿಸಬೇಕಾಗುತ್ತದೆ. ಈ ದಂಡ ಮಾಪನೆಯನ್ನು 3 ವರ್ಷಗಳಿಗೊಮ್ಮೆ ಪುನರ್ ಪರಿಶೀಲಿಸಿ ನಿಗಧಿಗೊಳಿಸುವುದು.

ಮೊದಲನೆ ಸಲದ ಉಲ್ಲಂಘನೆ – ರೂ. 10,000/– ದಂಡ
ಎರಡನೆ ಸಲದ ಉಲ್ಲಂಘನೆ – ರೂ. 15,000/– ದಂಡ
ಮೂರನೆಯ ಉಲ್ಲಂಘನೆ – ಜಾಹೀರಾತು ಪರವಾನಿಗೆಯನ್ನು ರದ್ದುಪಡಿಸತಕ್ಕದ್ದು.

3.ಇ. ಹೊರಾಂಗಣ ಚಲನಚಿತ್ರ ಜಾಹೀರಾತುಗಳು ಮತ್ತು ಸಿನಿಮಾ ಗೃಹಗಳಲ್ಲಿ ಪ್ರದರ್ಶಿಸುವ ಸ್ಲೈಡುಗಳ ಕುರಿತಾದ ಪ್ರಮಾಣಗಳು :

i) ಹೊರಾಂಗಣ ಚಲನಚಿತ್ರ ಜಾಹೀರಾತುಗಳು ಮತ್ತು ಚಲನಚಿತ್ರದ ಸ್ಲೈಡುಗಳನ್ನು ಸಹ ವಾಣಿಜ್ಯ ಜಾಹೀರಾತುಗಳ ರೀತಿಯಲ್ಲಿಯೇ ವಾಣಿಜ್ಯ ಜಾಹೀರಾತು ಎಂದು ಪರಿಗಣಿಸಬೇಕಾಗುತ್ತದೆ.

ii) ಸಿನಿಮಾ ಗೃಹಗಳ ಮಾಲೀಕರು ಸಹ ಪಾಲಿಕೆಯಲ್ಲಿ ವಾಣಿಜ್ಯ ಜಾಹೀರಾತುದಾರರೆಂದು ನೋಂದಣಿ ಮಾಡಿಸಿಕೊಳ್ಳತಕ್ಕದ್ದು.

iii) ಚಲನಚಿತ್ರಗಳ ಜಾಹೀರಾತುಗಳು ಮತ್ತು ಸ್ಲೈಡುಗಳ ಪ್ರದರ್ಶನ ಮತ್ತು ಉತ್ಪನ್ನ ವ್ಯಾಪಾರಸ್ಥರುಗಳು ಮತ್ತು ಅಂಗಡಿ/ಮಳಿಗೆದಾರರ ಮಾಹಿತಿಯುಳ್ಳ ಜಾಹೀರಾತುಗಳನ್ನು ಪ್ರದರ್ಶಿಸುವ ಮೊದಲು ಸಿನಿಮಾ ಗೃಹದ ಮಾಲೀಕರು ಆಯುಕ್ತರಿಂದ ಲಿಖಿತ ಪರವಾನಿಗೆ ಪಡೆಯತಕ್ಕದ್ದು.

iv) ಈ ಉಪವಿಧಿಗಳಲ್ಲಿ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಸಂಬಂಧಪಟ್ಟ ಮಾಲೀಕರು ಈ ಕೆಳಕಂಡಂತೆ ದಂಡವನ್ನು ಭರಿಸಬೇಕಾಗುತ್ತದೆ.

ಮೊದಲನೆ ಸಲದ ಉಲ್ಲಂಘನೆ ರೂ. 10,000/– ದಂಡ
ಎರಡನೆ ಸಲದ ಉಲ್ಲಂಘನೆ ರೂ. 15000/– ದಂಡ
ಮೂರನೆಯ ಉಲ್ಲಂಘನೆ ರೂ. 25,000/– ದಂಡ ವಿಧಿಸುವುದರ ಜೊತೆಗೆ ಅಂತಹವರಿಗೆ ನೀಡಿರುವ ಇತರೆ ವಾಣಿಜ್ಯ ಪರವಾನಿಗೆ ಮತ್ತು ಜಾಹೀರಾತು ಪರವಾನಿಗೆಯನ್ನು ಪಾಲಿಕೆ ನೀಡಿದ್ದ ಪಕ್ಷದಲ್ಲಿ ಅಂತಹ ಪರವಾನಿಗೆಯನ್ನು ರದ್ದುಪಡಿಸತಕ್ಕದ್ದು.

v) ಜಾಹೀರಾತು ಪರವಾನಿಗೆಯನ್ನು ಎರಡು ಸಲ ರದ್ದುಗೊಳಿಸಿರುವ ಪ್ರಕರಣದಲ್ಲಿ ಸದರಿ ಏಜೆನ್ಸಿಯು ಮುಂದಿನ ನೋಂದಣಿಗೆ ಅನರ್ಹವೆಂದು ಪರಿಗಣಿಸತಕ್ಕದ್ದು.

vi) ಫಲಕಗಳಿಗೆ ಫ್ಲೈಟ್ ಸೇಫ್ಟೀ ರೆಗ್ಯೂಲೇಷನ್ ಅನುಗುಣವಾಗಿ ವಾರ್ನಿಂಗ್ ಲೈಟ್ ಅಳವಡಿಸುವುದು.

3.ಎಫ್. ಚಾಲನೆಯಲ್ಲಿನ ಪ್ರದರ್ಶನಗಳ ಜಾಹೀರಾತುಗಳ ಪ್ರಮಾಣಗಳು :

i) ಮೊಬೈಲ್ ಪ್ರದರ್ಶನಗಳಿಗೆಂದೇ ನಿರ್ದಿಷ್ಟ ಪಡಿಸಿರುವ ಮತ್ತು ಪಾಲಿಕೆಯ ಜಾಹೀರಾತು ವಿಭಾಗದಲ್ಲಿ ಲಭ್ಯವಿರುವ ಅರ್ಜಿ ನಮೂನೆಯಲ್ಲಿ ಅರ್ಜಿ ಸಲ್ಲಿಸಿ ಆಯುಕ್ತರಿಂದ ಲಿಖಿತ ಪರವಾನಿಗೆ ಪಡೆಯದ ಹೊರತು ಯಾವುದೇ ಜಾಹೀರಾತನ್ನು ಪ್ರದರ್ಶಿಸತಕ್ಕದ್ದಲ್ಲ.

ii) ಜಾಹೀರಾತು ಹೊಂದಿರುವ ಯಾವುದೇ ವಾಹನವು ಆಯುಕ್ತರು ಅನುಮೋದಿಸಿರುವ ನಮೂನೆ ವಿಧಾನ ಹೊರತುಪಡಿಸಿ ಇತರೇ ರೀತಿಯಲ್ಲಿ ಜಾಹೀರಾತುಗಳನ್ನು ಪ್ರದರ್ಶಿಸತಕ್ಕದ್ದಲ್ಲ.

iii) ಈ ರೀತಿಯಲ್ಲಿ ಸಾಗಿಸುತ್ತಿರುವ ಜಾಹೀರಾತು ಫಲಕಗಳು ವಾಹನದ ಉದ್ದ ಅಥವಾ ಅಗಲಕ್ಕಿಂತ ಮುಂದಕ್ಕೆ ಚಾಚುವುದಾಗಲಿ ಹಾಗೂ ಅವುಗಳು ವಾಹನದ ನೋಂದಣಿ ಗುರುತುಗಳು ಅಥವಾ ಅವಶ್ಯಕ ದೀಪಗಳು ಗೋಚರಿಸಿದಂತಾಗಲಿ ಅಥವಾ ವಾಹನ ಚಾಲನೆ ಮಾಡುತ್ತಿರುವವರಿಗೆ ಅಥವಾ ವಾಹನದ ಚಾಲಕರಿಗೆ ತಡೆಯನ್ನುಂಟು ಮಾಡುವಂತಾಗಲಿ ಅಳವಡಿಸತಕ್ಕದ್ದಲ್ಲ.

iv) ಮೇಲ್ಸೇತುವೆ ರಸ್ತೆ, ಕೆಳಸೇತುವೆ ರಸ್ತೆಗಳು ಅಥವಾ ಫ್ಲೈ ಓವರ್‌ಗಳು ಅಥವಾ ಸಂಚಾ ಸಂಧಿಗಳು, ಇವುಗಳಿಂದ 10 ಮೀ ಅಂತರದವರೆಗೆ ಯಾವುದೇ ಮೊಬೈಲ್ ಪ್ರದರ್ಶನಕ್ಕೆ ಅನುಮತಿ ನೀಡತಕ್ಕದ್ದಲ್ಲ.

v) ಇತರೇ ಮೊಬೈಲ್ ಮಾಧ್ಯಮ ಅಂದರೆ ದಾವಣಗೆರೆ ನಗರ ಸಾರಿಗೆ ವಾಹನಗಳು ಅಥವಾ ಸರ್ಕಾರ ಅಥವಾ ಅರೆಸರ್ಕಾರಿ ಸಂಸ್ಥೆಗಳಿಗೆ ಸೇರಿರುವ ವಾಹನಗಳು ಇವುಗಳ ಮೇಲೆ ಜಾಹೀರಾತು ಪ್ರದರ್ಶನ ಮಾಡಲಿಚ್ಚಿಸುವ ಏಜೆನ್ಸಿಗಳು ಅಂತಹ ವಾಹನಗಳ ನೊಂದಣಿ ಸಂಖ್ಯೆಗಳೊಂದಿಗೆ ವಾಹನಗಳ ಪಟ್ಟಿಯನ್ನು ಮತ್ತು ಜಾಹೀರಾತು ಪ್ರದರ್ಶಿಸಲು ಇಚ್ಚಿಸಿರುವ ಅವಧಿಯನ್ನು ದಾಖಲಿಸಿ ಪಾಲಿಕೆಯ ಜಾಹೀರಾತು ವಿಭಾಗದಲ್ಲಿ ಲಭ್ಯವಿರುವ ನಿಗಧಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಬೇಕು. ಅರ್ಜಿಯ ಜೊತೆಯಲ್ಲಿ ಸದರಿ ವಾಹನಗಳ ಮಾಲೀಕರಿಂದ ವಾಹನದ ಸಂಖ್ಯೆ ಮತ್ತು ಜಾಹೀರಾತು ಪ್ರದರ್ಶಿಸಲು ಇಚ್ಚಿಸುವ ಅವಧಿ ಈ ವಿವರಗಳನ್ನೊಳಗೊಂಡ ನಿರಾಕ್ಷೇಪಣಾ ಪತ್ರವನ್ನು ಸಲ್ಲಿಸತಕ್ಕದ್ದು. ತದನಂತರ ಪಾಲಿಕೆಯು ಅನ್ವಯಿಸುವ ಶುಲ್ಕವನ್ನು ಲೆಕ್ಕ ಹಾಕಿ ಏಜೆನ್ಸಿಗೆ ಲಿಖಿತ ಮೂಲಕ ತಿಳಿಸತಕ್ಕದ್ದು.

vi) ಬೇಡಿಕೆ, ಹಕ್ಕುಪತ್ರ ಹೊರಡಿಸಿದ ಏಳು ದಿನಗಳೊಳಗಾಗಿ ಜಾಹೀರಾತು ಶುಲ್ಕವನ್ನು ಠೇವಣಿ ಇಡಬೇಕು. ಇದನ್ನು ಪಾಲಿಸದಿದ್ದಲ್ಲಿ ಪಾಲಿಕೆಯು ದಿನ ಒಂದಕ್ಕೆ ಪ್ರತಿ ವಾಹನಕ್ಕೆ ರೂ. 500/– ರಂತೆ ದಂಡ ವಿಧಿಸತಕ್ಕದ್ದು.

vii) ಈ ಉಪವಿಧಿ ಅಡಿಯಲ್ಲಿ ಜಾಹೀರಾತು ಪ್ರದರ್ಶನಕ್ಕೆ ಪರವಾನಿಗೆ ಹೊಂದಿರುವ ವಾಹನಗಳಲ್ಲಿ ಪರವಾನಿಗೆ ಸಂಖ್ಯೆ ಮತ್ತು ಏಜೆನ್ಸಿಯ ಹೆಸರು ಈ ವಿವರಗಳನ್ನು ಫಲಕದ /ಟ್ರಾನ್ಸ್‌ಲೈಟಿನ ಮೇಲ್ಬಾಗದಲ್ಲಿ ಪ್ರದರ್ಶಿಸತಕ್ಕದ್ದು.

viii ಮೊಬೈಲ್ ಜಾಹೀರಾತುಗಳೂ, ತಯಾರಿಕೆದಾರರ ಉತ್ಪನ್ನಗಳನ್ನು ಸಾಗಣೆ ಮಾಡುವ ವಾಹನಗಳನ್ನು ಒಳಗೊಂಡಿರುತ್ತದೆ. ಆದಾಗ್ಯೂ ಇಂತಹ ಪ್ರಕರಣಗಳಲ್ಲಿ ಜಾಹೀರಾತುಗಳನ್ನು ಸ್ವ ಫಲಕಗಳ ರೀತಿಯಲ್ಲಿ ಪರಿಗಣಿಸಲಾಗುತ್ತದೆ.

ಆದರೆ ಇಂತಹ ಫಲಕಗಳ ಪ್ರದರ್ಶನಕ್ಕೆ ಆಯುಕ್ತರ ಪೂರ್ವಾನುಮತಿಯ ಅವಶ್ಯಕತೆ ಇರುತ್ತದೆ ಮತ್ತು ಮೊಬೈಲ್ ಜಾಹೀರಾತುಗಳಿಗೆ ವಿಧಿಸುವ ಜಾಹೀರಾತು ತೆರಿಗೆ ಪ್ರಮಾಣ ಅನ್ವಯಿಸುತ್ತದೆ.

ix) ಯಾವುದೇ ಮೊಬೈಲ್ ಜಾಹೀರಾತು ಪ್ರದರ್ಶನಗಳು ಸಂಚಾರ ದಟ್ಟಣೆಗೆ ಕಾರಣವಾಗುತ್ತದೆ ಅಥವಾ ಅರ್ಜಿಯಲ್ಲಿ ಕೋರಿರುವ ಸ್ಥಳಗಳು ವಿವಿಧ ವಾಣಿಜ್ಯ ಸ್ಥಳಗಳು ಎಂದು ಆಯುಕ್ತರು ಅಭಿಪ್ರಾಯ ಹೊಂದಿದ್ದಲ್ಲಿ ಆಯುಕ್ತರ ವಿವೇಚನೆಗೆ ಒಳಪಟ್ಟಂತೆ ಇಂತಹ ಜಾಹೀರಾತುಗಳನ್ನು ತಿರಸ್ಕರಿಸಬಹುದಾಗಿದೆ.

3.ಜಿ. ಬ್ಯಾನರ್ಸ್ ತಾತ್ಕಾಲಿಕ ಕಮಾನುಗಳು ಮತ್ತು ಫಲಕಗಳು, ಕಟ್ಟಡಕ್ಕೆ ಸುತ್ತಿರುವ (Building Wraps) ಮೂಲಕ ಪ್ರದರ್ಶಿಸುವ ಜಾಹೀರಾತು ಪ್ರಮಾಣಗಳು :

i) ಯಾವುದೇ ವ್ಯಕ್ತಿಯು ಬ್ಯಾನರ್‌ಗಳು, ತಾತ್ಕಾಲಿಕ ಕಮಾನುಗಳು, ತಾತ್ಕಾಲಿಕ ಫಲಕಗಳು, ಕಟ್ಟಡಗಳು ಇವುಗಳ ಮೇಲೆ ಯಾವುದೇ ದಾಖಲೆಯನ್ನು ಅಳವಡಿಸಲು, ದಾಖಲಿಸಲು, ನಾಟಲು, ಇಡಲು ಅಥವಾ ಜಾಹೀರಾತುಗಳನ್ನು ಪ್ರದರ್ಶಿಸಲು ಇಚ್ಛೆಪಟ್ಟಲ್ಲಿ, ಜಾಹೀರಾತು ಅಳವಡಿಸುವ ಅಥವಾ ಜಾಹೀರಾತಿನ ಪತ್ರಗಳನ್ನು ಮುದ್ರಿಸುವ ಅಥವಾ ಜಾಹೀರಾತುಗಳನ್ನು ಪೇಂಟು ಮಾಡುವ ಅಥವಾ ಯಾವುದೇ ರೀತಿಯಲ್ಲಿ ಪ್ರದರ್ಶಿಸುವ ಕನಿಷ್ಟ ಏಳು ಕಾರ್ಯನಿರ್ವಹಣಾ ದಿನಗಳ ಪೂರ್ವದಲ್ಲಿ ಪಾಲಿಕೆಯ ಜಾಹೀರಾತು ಇಲಾಖೆಯಲ್ಲಿ ಲಭ್ಯವಿರುವ ಅರ್ಜಿಯನ್ನು (ಅನುಬಂಧ–4 ರಲ್ಲಿ ನಿಗಧಿಪಡಿಸಿರುವ ರೀತಿಯಲ್ಲಿ) ಆಯುಕ್ತರವರಿಗೆ ಸಲ್ಲಿಸಿ ಪಾಲಿಕೆಯಲ್ಲಿ ಏಜೆನ್ಸಿಯೆಂದು ನೋಂದಣಿ ಮಾಡಿಸಿ ಕೊಳ್ಳಬೇಕು.
ಇಂತಹ ಪರವಾನಿಗೆ, ಯಾವುದೇ ಯೋಜನೆ ಅಥವಾ ಉತ್ಪನ್ನಗಳ ಅಭಿವೃದ್ದಿಗೆ ಸೀಮಿತ ಅಥವಾ ಸೀಮಿತವಲ್ಲದ ಅವಧಿಗೆ ಯಾವುದೇ ವಸ್ತು ಅಥವಾ ಸೇವೆ ಲಭ್ಯವಿರುವ ಅಂಗಡಿಯ ಆವರಣದಲ್ಲಿ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸುವ ಎಲ್ಲಾ ವಿಧದ ಜಾಹೀರಾತುಗಳಿಗೆ ಅನ್ವಯಿಸುತ್ತದೆ. ಇಂತಹ ಜಾಹೀರಾತುಗಳನ್ನು ಕಾರ್ಯಕ್ರಮ ಮುಗಿದ ತಕ್ಷಣ(ಅದೇ ದಿನ) ಜಾಹೀರಾತುದಾರರು ತೆಗೆದುಹಾಕಬೇಕು.

ii) ಆಯುಕ್ತರು ಸಕಾರಣಗಳಿಗಾಗಿ, ಕೆಲವು ವಿಶೇಷ ಪ್ರಕರಣಗಳಲ್ಲಿ ನಿಗಧಿತ ಅವಧಿಯನ್ನು ಕಡಿಮೆ ಮಾಡಬಹುದು ಅಥವಾ ಕೆಲವು ನಿರ್ಧಿಷ್ಟ ಸ್ಥಳಗಳಲ್ಲಿ ಜಾಹೀರಾತು ಪ್ರದರ್ಶನವನ್ನು ನಿಷೇಧಿಸಬಹುದಾಗಿದೆ.

iii) ಮೇಲೆ ತಿಳಿಸಿರುವ ಯಾವುದೇ ಜಾಹೀರಾತಿನ ಅಳವಡಿಕೆ ಮತ್ತು ಪ್ರದರ್ಶನದಿಂದಾಗಿ ಪರವಾನಿಗೆ ಹೊಂದಿದ್ದು, ಚಾಲ್ತಿಯಲ್ಲಿರುವ ಯಾವುದೇ ಫಲಕವನ್ನು ಮರೆ ಉಂಟು ಮಾಡತಕ್ಕದ್ದಲ್ಲ ಅಥವಾ ಜಾಹೀರಾತಿನ ಪ್ರದರ್ಶನಕ್ಕೆ ಅಡ್ಡಿ ಮಾಡತಕ್ಕದ್ದಲ್ಲ.

iv) ಒಂದು ವೇಳೆ ಪ್ರಸ್ತಾಪಿಸಿರುವ ಜಾಹೀರಾತು ಬ್ಯಾನರ್‌ಗಳನ್ನು ಅನುಮೋದಿಸಿದಲ್ಲಿ ಆಯುಕ್ತರು ಅರ್ಜಿ ಅಥವಾ ಮನವಿ ಪತ್ರ ತಲುಪಿದ ನಾಲ್ಕು ದಿನಗಳೊಳಗಾಗಿ ಅರ್ಜಿ ಅನುಮೋದಿತವಾದಂತಹ ಪ್ರಕರಣಗಳಲ್ಲಿ ಪ್ರದರ್ಶಿಸಲು ಇಚ್ಛಿಸಿರುವ ಜಾಹೀರಾತಿಗೆ ನೀಡಬೇಕಾಗುವ ಶುಲ್ಕದ ಬಗ್ಗೆ ಅರ್ಜಿದಾರರಿಗೆ ತಿಳಿಸತಕ್ಕದ್ದು.

v) ಆಯುಕ್ತರು ನಿರ್ಧರಿಸಿದಂತೆ ಜಾಹೀರಾತು ಶುಲ್ಕ ಸ್ವೀಕರಿಸಿದ ನಂತರ, ಅರ್ಜಿದಾರರಿಗೆ ಜಾಹೀರಾತು ಪ್ರಾರಂಭಿಸುವ ದಿನಾಂಕ ಮತ್ತು ಅಂತ್ಯಗೊಳಿಸುವ ದಿನಾಂಕ ಈ ವಿವರಗಳನ್ನೊಳಗೊಂಡ ಲಿಖಿತ ಪರವಾನಿಗೆಯನ್ನು ನೀಡತಕ್ಕದ್ದು. ಜಾಹೀರಾತುದಾರರು, ಪ್ರದರ್ಶನಕ್ಕಾಗಿ ಮುದ್ರಿಸುವ ಜಾಹೀರಾತು ಪ್ರತಿಗಳಲ್ಲಿ ಅಥವಾ ಮಾಡುವ ಪೇಂಟುಗಳ ಮೇಲೆ ಪರವಾನಿಗೆಯ ನೋಂದಣಿ ಸಂಖ್ಯೆ ಮತ್ತು ದಿನಾಂಕಗಳನ್ನು ಸೇರಿಸಬೇಕು ಅಥವಾ ಜಾಹೀರಾತು ಪ್ರತಿಗಳ ಮೇಲೆ ಶುಲ್ಕ ಪಾವತಿ ಮಾಡಿರುವ ಬಗ್ಗೆ ಪಾಲಿಕೆಯ ಸ್ಟ್ಯಾಂಪ್ ಲಗತ್ತಿಸಿಕೊಳ್ಳಬೇಕು ಹಾಗೂ ಜಾಹೀರಾತುದಾರರು ಎಲ್ಲಾ ನಿರ್ದೇಶನಗಳನ್ನು ಪಾಲಿಸಬೇಕು.

vi) ಮೊದಲು ನೋಟೀಸ್ ಕೊಡಲು ಸಾಧ್ಯವಾಗದಂತಹ ಪ್ರಕರಣಗಳಲ್ಲಿ ಅಳವಡಿಸಲು ದಾಖಲಿಸಲು, ಸ್ಥಿರಪಡಿಸಲು ಅಥವಾ ಪ್ರದರ್ಶಿಸಲು ಪ್ರಸ್ತಾಪಿಸಿದ ಜಾಹೀರಾತು ಪ್ರತಿಗಳನ್ನು ನಿಗಧಿತ ಅರ್ಜಿಯೊಂದಿಗೆ

ಸದರಿ ಉಪ ಪರಿಚ್ಛೇದದಲ್ಲಿ ತಿಳಿಸಿರುವ ಮೇರೆಗೆ ಅನುಮೋದನೆಗಾಗಿ ಸಲ್ಲಿಸಬೇಕು. ಆಯುಕ್ತರು ಅನುಮೋದಿಸಿದ ನಂತರದಲ್ಲಿ ಮತ್ತು ಸದರಿ ಜಾಹೀರಾತಿನ ಸಂಬಂಧ ಶುಲ್ಕವನ್ನು ಪಾವತಿಸಿದ ನಂತರ ಎಲ್ಲಾ ಜಾಹೀರಾತು ಪ್ರತಿಗಳಲ್ಲಿ ಶುಲ್ಕವನ್ನು ಪಾವತಿಸಿಕೊಂಡ ಬಗ್ಗೆ ಮೊಹರು ಹಾಕಬೇಕು ಹಾಗೂ ಲೆಕ್ಕಶಾಖೆಯಿಂದ ಪಾಲಿಕೆಯ ಖಾತೆಗೆ ಜಮೆ ಆಗಿರುವ ಬಗ್ಗೆ ದೃಢಪಡಿಸಿಕೊಳ್ಳತಕ್ಕದ್ದು.

vii) ದಾವಣಗೆರೆ ನಗರದಲ್ಲಿ ಕಟ್ಟಡಗಳ/ಪ್ರತಿಮೆಗಳ ಆವರಣದಲ್ಲಿ, ಸಾರ್ವಜನಿಕ ರಸ್ತೆಗಳಲ್ಲಿ ಸರ್ಕಾರಿ ಕಛೇರಿಗಳ ಆವರಣ, ಪಾಲಿಕೆ ಕಛೇರಿ ಆವರಣಗಳಲ್ಲಿ ಬ್ಯಾನರ್‌ಗಳ ಪ್ರದರ್ಶನವನ್ನು ಸಂಪೂರ್ಣವಾಗಿ ನಿಷೇಧಿಸತಕ್ಕದ್ದು.

3.ಹೆಚ್. ಗಾಳಿ ತುಂಬಿರುವ ಮಾಧ್ಯಮದಲ್ಲಿ (ಬಲೂನುಗಳ ಮೇಲೆ)ಪ್ರದರ್ಶಿಸುವ ಜಾಹೀರಾತುಗಳ ಬಗ್ಗೆ ಪ್ರಮಾಣಗಳು :

i) ಏಜೆನ್ಸಿಯು ಪ್ರದರ್ಶಿಸುವ ಗಾಳಿ ತುಂಬಿರುವ ಮಾಧ್ಯಮಗಳನ್ನು (ಬಲೂನುಗಳನ್ನು) ಇತರೇ ಜಾಹೀರಾತುಗಳ ಪ್ರದರ್ಶನಕ್ಕೆ ಅನ್ವಯವಾಗದಂತೆ ಅಡೆತಡೆಯಾಗದಂತೆ ಅಥವಾ ಹಾನಿಯಾಗದಂತೆ ಪ್ರದರ್ಶಿಸತಕ್ಕದ್ದು ಮತ್ತು ಒಂದೇ ಸಮಯದಲ್ಲಿ ಒಂದೇ ಸ್ಥಳದಲ್ಲಿ 4ಕ್ಕಿಂತ ಹೆಚ್ಚು ಬಲೂನು ಜಾಹೀರಾತುಗಳು ಇರತಕ್ಕದ್ದಲ್ಲ.

ii) ಏಜೆನ್ಸಿಯು, ಬಲೂನುಗಳ ಮುಖಾಂತರ ಜಾಹೀರಾತುಗಳನ್ನು ಪ್ರದರ್ಶಿಸಿದಂತಹ ಪ್ರಕರಣಗಳಲ್ಲಿ ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು ಅನುಕೂಲವಾಗುವಂತೆ ಬಲೂನನ್ನು ವೀಕ್ಷಿಸಲು, ಸುರಕ್ಷಿತವಾಗಿ ಎಳೆಯಲು ಮತ್ತು ಯಾವುದೇ ವಿದ್ಯುತ್ ಹರಿಯುತ್ತಿರುವ ತಂತಿಗೆ ಅಥವಾ ಫಲಕಗಳಿಗೆ ತಾಗದಂತಿರಲು ಅವಶ್ಯಕ ವ್ಯವಸ್ಥೆಗಳನ್ನು ಮಾಡಿರಬೇಕು.

iii) ಏಜೆನ್ಸಿಯು, ಸರ್ಕಾರದ ಸಿವಿಲ್ ಏವಿಯೇಷನ್ (ನಾಗರೀಕ ವಿಮಾನಯಾನ) ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆದು ಸಲ್ಲಿಸಬೇಕು ಮತ್ತು ಸಂಬಂಧಪಟ್ಟ ಎಲ್ಲಾ ನಿಯಮಗಳು ಹಾಗೂ ಕಾನೂನುಗಳನ್ನು ಪಾಲಿಸಬೇಕು.

iv) ಬಲೂನಿನಿಂದಾಗಿ ಅಥವಾ ಬಲೂನಿಗೆ ಉಪಯೋಗಿಸಿರುವ ಪದಾರ್ಥ, ಅನಿಲ ಅಥವಾ ಸಲಕರಣೆಯಿಂದಾಗಲಿ ಅಥವಾ ಬಿರುಗಾಳಿ ದೋಷಪೂರಿತ ರಚನೆ, ನಿಷ್ಕಾಳಜಿ, ಅಪಘಾತ ಅಥವಾ ಇತರೇ ಕಾರಣಗಳಿಂದಾಗಿ ಯಾವುದೇ ಸ್ವತ್ತು ಅಥವಾ ವ್ಯಕ್ತಿಗೆ ಹಾನಿ ಆದಲ್ಲಿ ಏಜೆನ್ಸಿಯು ಸದರಿ ಹಾನಿಯನ್ನು ಭರಿಸಬೇಕಾಗುತ್ತದೆ. ಹಾಗೂ ವಿಮೆಯನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು ಮತ್ತು ನಿಯಮಾನುಸಾರ ಆಗಿಂದ್ದಾಗ್ಗೆ ನವೀಕರಿಸಿಕೊಳ್ಳತಕ್ಕದ್ದು.

3.ಐ. ದಿಕ್ಸೂಚಿ ಫಲಕಗಳನ್ನು ಅಳವಡಿಸುವ ಮತ್ತು ಪ್ರದರ್ಶಿಸುವ ಕುರಿತಾದ ಪ್ರಮಾಣಗಳು :

i) ತುರ್ತು ಪರಿಸ್ಥಿತಿಗೆ ಅವಶ್ಯಕವಾಗಿರುವ ಆರೋಗ್ಯ, ಸಾರ್ವಜನಿಕ ಸುರಕ್ಷೆ ಮತ್ತು ಸಾರ್ವಜನಿಕರ ಅನುಕೂಲಕ್ಕಾಗಿರುವ ಸಂಸ್ಥೆಗಳು, ಅಂದರೆ ಆಸ್ಪತ್ರೆ, ರಕ್ತದಾನ ಕೇಂದ್ರಗಳು, ಆರಕ್ಷಕ ಠಾಣೆಗಳು, ಶೌಚಾಲಯಗಳು ಇತ್ಯಾದಿಗಳಿಗೆ ಹೋಗಲು ಅನುಸರಿಸಬೇಕಾದ ದಾರಿ ಸೂಚಿಸುವ ಉದ್ದೇಶದಿಂದ ದಿಕ್ಸೂಚಿ ಫಲಕಗಳಿಗೆ ಪರವಾನಿಗೆ ನೀಡಲಾಗುತ್ತದೆ. ಇದಕ್ಕೆ ಯಾವುದೇ ಶುಲ್ಕ ವಿಧಿಸತಕ್ಕದ್ದಲ್ಲ ಆದರೆ ವಾಣಿಜ್ಯ ಉದ್ದೇಶ ಹೊಂದಿದಲ್ಲಿ ಇದಕ್ಕೆ ಜಾಹೀರಾತು ಶುಲ್ಕ ವಿಧಿಸತಕ್ಕದ್ದು.

ii) ಆಯುಕ್ತರ ಲಿಖಿತ ಪರವಾನಿಗೆ ಇಲ್ಲದ ಹೊರತು ಯಾವುದೇ ದಿಕ್ಸೂಚಿ ಫಲಕಗಳನ್ನು ಪ್ರದರ್ಶಿಸತಕ್ಕದ್ದಲ್ಲ.

iii) ಇಂತಹ ಫಲಕಗಳಿಗೆ, ವಾಣಿಜ್ಯ ಫಲಕಗಳಿಗೆ ವಿಧಿಸುವ ಶುಲ್ಕದ ದರದಲ್ಲಿಯೇ ಶುಲ್ಕವನ್ನು ವಿಧಿಸಲಾಗುತ್ತದೆ.

iv) ವಾರ್ಷಿಕ ಶುಲ್ಕವನ್ನು ಮುಂಗಡವಾಗಿ ಪ್ರತಿ ವರ್ಷದ ಮಾರ್ಚ್ ತಿಂಗಳ 31ನೇಯ ತಾರೀಖಿನೊಳಗಾಗಿ ಪಾವತಿಸಬೇಕಾಗುತ್ತದೆ.

v) ಪ್ರತಿ ಆರ್ಥಿಕ ಸಾಲಿನ ಏಪ್ರಿಲ್ ಒಂದರಿಂದ ಮಾರ್ಚ್ 31 ರ ಅವಧಿಗೆ ಪರವಾನಿಗೆ ನೀಡಲಾಗುವುದು ಮತ್ತು ಜಾಹೀರಾತು ಶುಲ್ಕವನ್ನು ಗೊತ್ತುಪಡಿಸಲಾಗುವುದು.

vi) ದಿಕ್ಸೂಚಿ ಫಲಕಗಳು ಯಾವ ಉತ್ಪನ್ನ ಮತ್ತು ಸೇವೆ ಲಭ್ಯವಿಲ್ಲದ ಮತ್ತು ಲಭ್ಯವಿರುವ ಆವರಣದ ನಿರ್ದಿಷ್ಟ ಸ್ಥಳ ಇವುಗಳ ವಿವರಗಳನ್ನು ಮಾತ್ರ ಪ್ರದರ್ಶಿಸಬೇಕು.

vii) ಯಾವುದೇ ದಿಕ್ಸೂಚಿ ಫಲಕಕ್ಕೆ ಸಂಬಂಧಿಸಿದಂತೆ ಜಾಹೀರಾತು ಶುಲ್ಕ ಪಾವತಿ ಮಾಡದೇ ಇರುವುದು ಕಂಡು ಬಂದಲ್ಲಿ ತಿಂಗಳಿಗೆ ರೂ. 500/– ದಂಡ ಭರಿಸುವುದರೊಂದಿಗೆ ಶುಲ್ಕ ಲೆಕ್ಕಾಚಾರದ ವರ್ಷದ ಸಂಪೂರ್ಣ ಶುಲ್ಕವನ್ನು ಏಳು ಕೆಲಸದ ದಿನಗಳೊಳಗಾಗಿ ಪಾವತಿ ಮಾಡಬೇಕಾಗುತ್ತದೆ. ತಪ್ಪಿದಲ್ಲಿ ವಾಣಿಜ್ಯ ಫಲಕಗಳಿಗೆ ನಿಗಧಿಪಡಿಸಿರುವ ದಂಡನೆಗಳು ಅನ್ವಯವಾಗುತ್ತದೆ.

viii) 1.0 ಮೀ X 1.0 ಮೀ ಗಾತ್ರಕ್ಕಿಂತ ಹೆಚ್ಚಿನ ಅಳತೆಯ ದಿಕ್ಸೂಚಿ ಫಲಕಗಳಿಗೆ ಅನುಮತಿಸತಕ್ಕದ್ದಲ್ಲ.

ix) ದಿಕ್ಸೂಚಿ ಫಲಕಗಳನ್ನು ಸಾರ್ವಜನಿಕ ಕಾಲುದಾರಿಗಳ ಮೇಲೆ ಅನುಮತಿಸತಕ್ಕದ್ದಲ್ಲ. ವ್ಯಕ್ತಿಗಳ ಪ್ರಾಣಿಗಳ ಮತ್ತು ನಗರ ಪಾಲಿಕೆ ಎಲ್ಲೆಯೊಳಗೆ ಬೆಳೆದಿರುವ /ನಿಂತಿರುವ ಮರಗಿಡ ಸಸ್ಯಗಳ ಮೇಲೆ ಜಾಹೀರಾತುಗಳನ್ನು ಪ್ರದರ್ಶಿಸುವುದನ್ನು ಸಂಪೂರ್ಣ ನಿಷೇಧಿಸತಕ್ಕದ್ದು.

3.ಜೆ. ಪಾಲಿಕೆಯ ಸ್ವತ್ತುಗಳ ಮೇಲಿರುವ ವಿನ್ಯಾಸಗಳಲ್ಲಿ ಪ್ರದರ್ಶಿಸುವ ಜಾಹೀರಾತುಗಳ ಕುರಿತಾದ ಪ್ರಮಾಣಗಳು.

i) ಪರವಾನಿಗೆಯ ನಿಬಂಧನೆಗನುಗುಣವಾಗಿರುವ ಜಾಹೀರಾತುಗಳನ್ನು ಹೊರತುಪಡಿಸಿ, ಇತರೆ ಯಾವುದೇ ಜಾಹೀರಾತು ಫಲಕವನ್ನು ಜಾಹೀರಾತು ಪ್ರದರ್ಶಿಸುವ ಉದ್ದೇಶದಿಂದ ಯಾವುದೇ ವ್ಯಕ್ತಿಯಾಗಲಿ, ವಾಹನವಾಗಲಿ ಅಥವಾ ಇತರೇ ತಂತ್ರದಿಂದಾಗಲಿ ಇವುಗಳ ಮೂಲಕ ಯಾವುದೇ ಬೀದಿ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ಸಾಗಿಸತಕ್ಕದ್ದಲ್ಲ.

ii) ಪಾಲಿಕೆಯ ಸ್ವತ್ತುಗಳಲ್ಲಿ ಅಂದರೆ ಬಸ್ ತಂಗುದಾಣಗಳಲ್ಲಿ ಪಾದಚಾರಿ ಮೇಲ್ಸೇತುವೆಗಳು, ಗ್ಯಾಂಟ್ರಿಗಳು, ಪೋಲೀಸ್ ಕಿಯೋಸ್ಕ್‌ಗಳು, ದೂರವಾಣಿ ಕಿಯೋಸ್ಕ್‌ಗಳು, ಸಾರ್ವಜನಿಕ ಸೌಕರ್ಯಗಳು, ಬೀದಿ ಪೀಠೋಪಕರಣಗಳು, ಇತ್ಯಾದಿಗಳ ಮೇಲಿರುವ ವಿನ್ಯಾಸಗಳ ಮೇಲೆ ಜಾಹೀರಾತುಗಳ ಪ್ರದರ್ಶನವನ್ನು ನಿಷೇಧಿಸಲಾಗಿದೆ. ಆದಾಗ್ಯೂ ವಿಶೇಷ ಸಂದರ್ಭಗಳಲ್ಲಿ ಪಾಲಿಕೆಯ ಹಿತದೃಷ್ಟಿಯಿಂದ (ಉದಾ: ಮೂಲ ಸೌಕರ್ಯಗಳ ನಿರ್ಮಾಣದಲ್ಲಿ ಸಾರ್ವಜನಿಕ–ಖಾಸಗಿ ಸಹಭಾಗಿತ್ವ) ಆಯುಕ್ತರು ಪರಿಶೀಲಿಸಿ, ಅನುಮತಿಸಿದಲ್ಲಿ ಅಂತಹ ಜಾಹೀರಾತುಗಳಿಗೆ ಪರವಾನಿಗೆ ನೀಡಬಹುದಾಗಿದೆ. ಆಯುಕ್ತರು ಕಾಲಕಾಲಕ್ಕೆ ನೀಡುವ ಮಾರ್ಗದರ್ಶನಗಳ ಆಧಾರದ ಮೇಲೆ ಇಂತಹ ಪ್ರಕರಣಗಳನ್ನು ಪರಿಗಣಿಸಬೇಕಾಗುತ್ತದೆ.

3.ಕೆ. ಅಂಗಡಿ ಮುಂಗಟ್ಟುಗಳು, ರೆಸ್ಟೋರಂಟ್‌ಗಳು, ಹೋಟೆಲ್‌ಗಳು ಹಾಗೂ ಇತರೇ ವ್ಯವಹಾರ ಮತ್ತು ವಾಣಿಜ್ಯ ಸಂಸ್ಥೆಗಳು, ಇತ್ಯಾದಿಗಳಲ್ಲಿ ಪ್ರದರ್ಶಿಸುವ ಭಾರಿ ಸ್ವ ಜಾಹೀರಾತುಗಳಿಗೆ ಮಾತ್ರ ಅನ್ವಯಿಸುವ ಪ್ರಮಾಣಗಳು :

i) ಭಾರಿ ಸ್ವಜಾಹೀರಾತುಗಳು ಕಟ್ಟಡದ ಅಂಚಿನಿಂದ ಅಥವಾ ಸ್ವತ್ತಿನ ಅಂಚಿನಿಂದ ಹೊರಗೆ ಚಾಚತಕ್ಕದ್ದಲ್ಲ. ಭಾರಿ ಸ್ವಜಾಹೀರಾತುಗಳಿಗೆ ಜಾಹೀರಾತು ಶುಲ್ಕ ಅನ್ವಯವಾಗುತ್ತದೆ. ಆದರೆ ಯಾವುದೇ ಭಾರಿ ಸ್ವಜಾಹೀರಾತುಗಳ ಗಾತ್ರ 3.0 X 3.0 ಮೀಟರ್‌ಗಳಿಗೆ ಮೀರುವಂತಿಲ್ಲ.

ii) ಭಾರಿ ಜಾಹೀರಾತುಗಳ ಜಾಹೀರಾತುದಾರರು, ಜಾಹೀರಾತು ಫಲಕಗಳ ಪಟ್ಟಿಯನ್ನು ಸಲ್ಲಿಸಲು ವಿಫಲವಾದಲ್ಲಿ ಪ್ರತಿ ತಿಂಗಳು ರೂ. 10,000/– ದಂಡ ಪಾವತಿ ಮಾಡಬೇಕಾಗುತ್ತದೆ. ಈ ದಂಡಮಾಪನೆಯನ್ನೇ ಮೂರು ವರ್ಷಗಳಿಗೊಮ್ಮೆ ಪುನರ್ ಪರಿಶೀಲಿಸಿ ನಿಗಧಿಗೊಳಿಸುವುದು.

iii) ಯಾವುದೇ ಭಾರಿ ಸ್ವಜಾಹೀರಾತುಗಳಿಗಾಗಿ ಜಾಹೀರಾತು ಶುಲ್ಕ ಪಾವತಿ ಮಾಡದಿರುವುದು ಕಂಡು ಬಂದಲ್ಲಿ ಅಂತಹ ಜಾಹೀರಾತುದಾರರು ಶುಲ್ಕ ಲೆಕ್ಕ ಹಾಕುವ ವರ್ಷದ ಸಂಪೂರ್ಣ ಶುಲ್ಕವನ್ನು ಪಾವತಿ ಮಾಡಬೇಕಾಗುತ್ತದೆ. ಅಲ್ಲದೆ ಆಯುಕ್ತರ ವಿವೇಚನೆಗೆ ಒಳಪಟ್ಟಂತೆ ಅವಶ್ಯವಿದ್ದಲ್ಲಿ ಅಂತಹ ಜಾಹೀರಾತು ಫಲಕಗಳನ್ನು ತೆಗೆಯಲಾಗುವುದು.

iv) ಜಾಹೀರಾತು ವಿಭಾಗದ ಪಾಲಿಕೆ ಸಿಬ್ಬಂದಿವರ್ಗದವರು ತಪಾಸಣೆ ಮಾಡುವ ಸಮಯದಲ್ಲಿ ತಪ್ಪು ಮಾಹಿತಿ ನೀಡಿರುವುದು ಕಂಡು ಬಂದಲ್ಲಿ ಸದರಿ ಸ್ಥಳದಲ್ಲಿ ಅನ್ವಯವಾಗುವ ಜಾಹೀರಾತು ಶುಲ್ಕದ ಎರಡು ಪಟ್ಟು ಶುಲ್ಕವನ್ನು ಪಾವತಿ ಮಾಡಬೇಕಾಗುತ್ತದೆ.

3.ಎಲ್. ಕ್ರೀಡಾಂಗಣದಲ್ಲಿ ಹೊರಾಂಗಣ ಜಾಹೀರಾತು

ಕ್ರೀಡಾಂಗಣ ಮುಂತಾದವುಗಳಲ್ಲಿ ಯಾವುದೇ ಜಾಹೀರಾತನ್ನು ಆಯುಕ್ತರ ಪರವಾನಿಗೆ ಇಲ್ಲದೆ ಪ್ರದರ್ಶಿಸತಕ್ಕದ್ದಲ್ಲ.

ಭಾಗ –III

4.ಹೊರಾಂಗಣ ಜಾಹೀರಾತುಗಳ ಬಗ್ಗೆ ಕಾರ್ಯ ವಿಧಾನ

4.ಎ. ಹೊರಾಂಗಣ ಜಾಹೀರಾತುಗಳ ಅಳವಡಿಕೆ ಮತ್ತು ಪ್ರದರ್ಶನಗಳಿಗೆ ಕಾರ್ಯವಿಧಾನ

i) ಫಲಕಗಳನ್ನು ರಸ್ತೆಗಳ ಕೂಡಿಕೆ ಅಥವಾ ವೃತ್ತದ ಅಂಚಿನಿಂದ ಕನಿಷ್ಟ 9.0 ಮೀ ದೂರದಲ್ಲಿ ಅಳವಡಿಸಬೇಕಾಗುತ್ತದೆ ಮತ್ತು ಜಾಹೀರಾತು ಫಲಕಗಳನ್ನು ರಸ್ತೆಗೆ ಹೊಂದಿಕೊಂಡು ಅಳವಡಿಬೇಕಾಗುತ್ತದೆ. ವೃತ್ತಗಳ ಅಥವಾ ರಸ್ತೆಗಳ ಕೂಡಿಕೆಗಳ ಸುತ್ತಲೂ ಜಾಹೀರಾತು ಫಲಕಗಳ ಅಳವಡಿಕೆಗೆ ಅನುಮತಿ ನೀಡತಕ್ಕದ್ದಲ್ಲ.

ii) ಇತರೆ ವಾಣಿಜ್ಯ ಪ್ರಚಾರಕ್ಕಾಗಿ ವಾಣಿಜ್ಯಾತ್ಮಕ ಉದ್ದೇಶದಿಂದ ವಾಣಿಜ್ಯ ಜಾಹೀರಾತು ಫಲಕಗಳನ್ನು ಅಳವಡಿಸಿ ಹೊರಾಂಗಣ ವಾಣಿಜ್ಯ ಜಾಹೀರಾತುಗಳನ್ನು ಪ್ರದರ್ಶಿಸುವ ಕಾರ್ಯ ನಿರ್ವಹಿಸುತ್ತಿರುವ ಯಾವುದೇ ವ್ಯಕ್ತಿ / ಸಂಸ್ಥೆ ಅಥವಾ ಕಂಪನಿಯು ಆಯುಕ್ತರು ಈ ಉಪವಿಧಿಗಳನ್ನು ಗಮನದಲ್ಲಿರಿಸಿ ನಿರ್ಧರಿಸಿದಂತೆ ರೂ. 5,000/–ಕ್ಕಿಂತ ಕಡಿಮೆಯಲ್ಲದಷ್ಟು ನೋಂದಣಿ ಶುಲ್ಕವನ್ನು ಪಾವತಿಸಿ ಏಜೆನ್ಸಿಯೆಂದು ನೋಂದಣಿ ಮಾಡಿಸಿ ಕೊಳ್ಳಬೇಕಾಗುತ್ತದೆ. ಈ ದಂಡಮಾಪವನ್ನು ಮೂರುವರ್ಷಗಳಿಗೊಮ್ಮೆ ಪುನರ್ ಪರಿಶೀಲಿಸಿ ನಿಗಧಿಗೊಳಿಸುವ ಅಧಿಕಾರ ಮಹಾನಗರ ಪಾಲಿಕೆಗೆ ಇದೆ.

ಮುಂದುವರೆದಂತೆ, ಪ್ರತಿ ವರ್ಷಕ್ಕೊಮ್ಮೆ ಜಾಹೀರಾತುದಾರರು ಅವರುಗಳ ಜಾಹೀರಾತು ಏಜೆನ್ಸಿಯನ್ನು ನಿರ್ದಿಷ್ಟ ನಿಯಮಗಳಿಗನುಸಾರವಾಗಿ ನವೀಕರಿಸಿಕೊಳ್ಳತಕ್ಕದ್ದು. ನೋಂದಣಿ ಅವಧಿಯು ಮೀರಿದಲ್ಲಿ ಉಪವಿಧಿಗಳ ಉಲ್ಲಂಘನೆ ಎಂದು ಪರಿಗಣಿಸಿ ಉಲ್ಲಂಘನೆ ಮುಂದುವರೆಯುವ ಪ್ರತಿ ತಿಂಗಳಿಗೆ ರೂ. 1,000/–ರಷ್ಟು ವಿಳಂಬ ಶುಲ್ಕವನ್ನು ವಿಧಿಸಲಾಗುತ್ತದೆ.

ಏಜೆನ್ಸಿಗಳನ್ನು ಹೊರಾಂಗಣ ಜಾಹೀರಾತು ಪ್ರದರ್ಶನಗಳಿಗೆ ನೋಂದಾಯಿಸುವ ವಿಷಯದಲ್ಲಿ ಆಯುಕ್ತರ ನಿರ್ಧಾರವೇ ಅಂತಿಮವಾಗಿರುತ್ತದೆ. ಅದಾಗ್ಯೂ ಯಾವುದೇ ಅರ್ಜಿಯನ್ನು ತಿರಸ್ಕರಿಸಿದಲ್ಲಿ ಕಾರಣಗಳನ್ನು ಲಿಖಿತ ಮುಖೇನ ಸಂಬಂಧಪಟ್ಟವರಿಗೆ ತಿಳಿಸುವುದು. ತದನಂತರ ಏಳು ದಿನದೊಳಗಾಗಿ ಏಜೆನ್ಸಿಯು ಆಯುಕ್ತರಿಗೆ ಅವರ ನಿರ್ಣಯದ ಮರು ಪರಿಶೀಲನೆ ಕೋರಿ ಅರ್ಜಿ ಸಲ್ಲಿಸಬಹುದಾಗಿದೆ.

iii) ಏಜೆನ್ಸಿಗಳು ವಾಣಿಜ್ಯ ಜಾಹೀರಾತುಗಳನ್ನು ಪ್ರದರ್ಶಿಸುವ ಅಥವಾ ಪ್ರದರ್ಶಿಸಲು ತಿಳಿಸುವ ಪೂರ್ವದಲ್ಲಿ ನಿರ್ದಿಷ್ಟ ಶುಲ್ಕ ಪಾವತಿ ಮಾಡಿರುವ ಬಗ್ಗೆ ಆಯುಕ್ತರಿಂದ ಅನುಮೋದನೆ ಪಡೆದ ಬಗ್ಗೆ ಹಾಗೂ ಈ ಉಪವಿಧಿಗಳಲ್ಲಿಯ ಅವಕಾಶದಂತೆ ಫಲಕದ ತಪಾಸಣೆ ಆಗಿರುವ ಬಗ್ಗೆ ಖಚಿತ ಪಡಿಸಿಕೊಳ್ಳತಕ್ಕದ್ದು.

iv) ಏಜೆನ್ಸಿಗಳು ಅನುಮತಿಸಿರುವ ಫಲಕಗಳ ಬಗ್ಗೆ ಸರಿಯಾದ ಲೆಕ್ಕಾಚಾರವಿಡಬೇಕು ಮತ್ತು ಅಗತ್ಯ ಸಮಯದಲ್ಲಿ ಆಯುಕ್ತರ ತಪಾಸಣೆಗಾಗಿ ಹಾಜರುಪಡಿಸಬೇಕು. ಅನುಮತಿಸಿರುವ ಫಲಕಕ್ಕಿಂತ ಹೆಚ್ಚಿಗೆ ಅಳವಡಿಸಿದ್ದರೆ ಅಂತಹ ಏಜೆನ್ಸಿಯನ್ನು ರದ್ದುಪಡಿಸಲಾಗುವುದು ಹಾಗೂ ಕಪ್ಪು ಪಟ್ಟಿಗೆ ಸೇರಿಸಲಾಗುವುದು.

v) ಪಾಲಿಕೆಯಲ್ಲಿ ನೋಂದಣಿ ಮಾಡಿಕೊಂಡಿರುವ /ಸದಸ್ಯತ್ವ ಹೊಂದಿರುವ ಏಜೆನ್ಸಿಗಳಿಗೆ ಮಾತ್ರ ವಾಣಿಜ್ಯ ಫಲಕಗಳ ಅಳವಡಿಕೆ/ಪ್ರದರ್ಶನಕ್ಕೆ ಪರವಾನಿಗೆ ನೀಡಲಾಗುತ್ತದೆ.

vi) ಏಜೆನ್ಸಿ ನೋಂದಣಿಯನ್ನು ಪ್ರತಿ ವರ್ಷಕ್ಕೊಮ್ಮೆ ನವೀಕರಿಸತಕ್ಕದ್ದು.
ಮುಂದುವರೆದಂತೆ, ಏಜೆನ್ಸಿಯು ನೋಂದಣಿಯ ನವೀಕರಣಕ್ಕಾಗಿ ಅರ್ಜಿ ಸಲ್ಲಿಸುವ ಮೊದಲು ಈ ಕೆಳಕಂಡ ಷರತ್ತುಗಳನ್ನು ಪೂರೈಸಬೇಕಾಗುತ್ತದೆ.

vii) ಯಾವುದೇ ಉಪವಿಧಿಗಳನ್ನು ಉಲ್ಲಂಘಿಸಿರಬಾರದು ಮತ್ತು ನ್ಯಾಯಾಲಯದಲ್ಲಿ ಏಜೆನ್ಸಿಯು ಯಾವುದೇ ದಾವೆ ಹೂಡಿದಲ್ಲಿ ಸದರಿ ಪ್ರಕರಣಗಳು ಇತ್ಯರ್ಥವಾಗಿರಬೇಕು. ನ್ಯಾಯಾಲಯದಲ್ಲಿ ದಾವೇ ಹೂಡುವ ಮುನ್ನ ಮೇಲ್ಮನವಿ ಪ್ರಾಧಿಕಾರದಲ್ಲಿ ಅಪೀಲು ಇತ್ಯರ್ಥವಾಗಿರತಕ್ಕದ್ದು.

viii) ಏಜೆನ್ಸಿಯು ದಾವಣಗೆರೆ ಮಹಾನಗರ ಪಾಲಿಕೆಗೆ ಪಾವತಿಸಬೇಕಾಗಿರುವ ಯಾವುದೇ ಶುಲ್ಕ ಬಾಕಿ ಇರಕೂಡದು, ಪಾಲಿಸದಿದ್ದ ಪಕ್ಷದಲ್ಲಿ ಏಜೆನ್ಸಿಯು ನೋಂದಣಿಗಾಗಿ ಸಲ್ಲಿಸಿದ ಅರ್ಜಿ ತಿರಸ್ಕೃತವಾಗುವುದು ಮತ್ತು ಪಾಲಿಕೆಯು ನೀಡಿರುವ ಎಲ್ಲಾ ಪರವಾನಿಗೆಗಳನ್ನು ಹಿಂದಕ್ಕೆ ಪಡೆಯಲು ಕಾರಣವಾಗುವುದು.

ix) ವಾಣಿಜ್ಯ ಜಾಹೀರಾತು ಫಲಕಗಳ ಅಳವಡಿಕೆ ಹಾಗೂ ಪ್ರದರ್ಶನಕ್ಕಾಗಿ ಸಲ್ಲಿಸುವ ಎಲ್ಲಾ ಹೊಸ ಅರ್ಜಿಗಳನ್ನು ಆಯುಕ್ತರು ನಿಗಧಿಪಡಿಸಿರುವ ಅರ್ಜಿ ನಮೂನೆಯಲ್ಲಿ ಈ ಕೆಳಕಂಡ ಸಮರ್ಥಿಸುವ ದಾಖಲೆಗಳೊಂದಿಗೆ ಸಲ್ಲಿಸಬೇಕು.

a) ಸ್ವತ್ತಿನ ಮಾಲೀಕರಿಂದ ನಿರಾಕ್ಷೇಪಣಾ ಪ್ರಮಾಣ ಪತ್ರ (ಅನುಬಂಧ–8 ರಲ್ಲಿರುವ ನಮೂನೆಯಲ್ಲಿ)

b) ಫಲಕವನ್ನು ಅಳವಡಿಸಲು ಪ್ರಸ್ತಾಪಿಸಿರುವ ಸ್ಥಳದ ನಕ್ಷೆ (Site Plan) ಅಂದರೆ ರಸ್ತೆ /ಕೂಡಿಕೆಗಳಿಂದ ಇರುವ ಅಂತರ ಮತ್ತು ಮೈದಾನ ಅಥವಾ ಕಟ್ಟಡದ ನಿರ್ಧಿಷ್ಟ ಸ್ಥಳ ಇತ್ಯಾದಿಗಳನ್ನೊಳಗೊಂಡಿರ ತಕ್ಕದ್ದು.

c) ಒಂದು ವೇಳೆ ಕಟ್ಟಡದ ಮೇಲ್ಚಾವಣಿಯ ಸ್ಥಳದಲ್ಲಿ ಅಳವಡಿಸಲು ಪ್ರಸ್ತಾವನೆ ಸಲ್ಲಿಸಿದಲ್ಲಿ ಫಲಕದ ಅಡಿಪಾಯ ಮತ್ತು ಜಾಹೀರಾತು ಫಲಕದ ವಿನ್ಯಾಸದ ಯೋಜನೆಯ ವಿವರಗಳನ್ನೊಳಗೊಂಡ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಪಾಲಿಕೆಯ ಕಾರ್ಯಪಾಲಕ ಅಭಿಯಂತರರಿಂದ ದೃಢೀಕರಿಸಿ ಸಲ್ಲಿಸಬೇಕು. (ಅನುಬಂಧ–10)

d) ಫಲಕದ ಮೇಲೆ ಎಲೆಕ್ಟ್ರಿಕಲ್ಸ್ ತಂತಿಗಳು (ಪ್ರಕಾಶಿತವಲ್ಲದ) ಅರ್ಥಿಂಗ್ (earthing) ಕುರಿತು ಮಾಹಿತಿಯನ್ನೊಳಗೊಂಡ ದೃಢೀಕೃತ ಪ್ರಮಾಣ ಪತ್ರವನ್ನು ನಗರ ಪಾಲಿಕೆ ವಿದ್ಯುತ್ ಕಾರ್ಯಪಾಲಕ ಅಭಿಯಂತರರಿಂದ ಪಡೆಯಬೇಕು.

e) ಕೆಲಸ ಮಾಡುತ್ತಿರುವವರಿಗೆ ಅಪಾಯವಾದಲ್ಲಿ ಹಾನಿ ಭರಿಸಲು ಮಾಡಬೇಕಾಗುವ ವಿಮೆ ಕಡ್ಡಾಯ. ಇದನ್ನು ಫಲಕಕ್ಕೆ ಮಂಜೂರು ನೀಡಿದ ಮತ್ತು ಇದನ್ನು ಅಳವಡಿಸಿದ 15 ದಿನಗಳೊಳಗಾಗಿ ಜಾಹೀರಾತು ಶುಲ್ಕ ಪಾವತಿಯೊಂದಿಗೆ ಸಲ್ಲಿಸಬೇಕು.

f) ವಾಸಸ್ಥಳ ಅಥವಾ ವಾಣಿಜ್ಯ ಸ್ವತ್ತಿಗೆ ಶುಲ್ಕ ಪಾವತಿಸಿರುವ ಕಂದಾಯದ ರಶೀತಿಯ ನವೀಕರಣಕ್ಕಾಗಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಸ್ವತ್ತಿನ ಮಾಲೀಕರು ನೀಡಿರುವ ನಿರಾಕ್ಷೇಪಣಾ ಪ್ರಮಾಣಪತ್ರದ ಜೊತೆಯಲ್ಲಿ ಲಗತ್ತಿಸತಕ್ಕದ್ದು.

x) ಅನುಮೋದಿತ ಸ್ಥಳದಲ್ಲಿ ಅಳವಡಿಸಿರುವ ಜಾಹೀರಾತು ಫಲಕಗಳಿಗೆ ಸಂಬಂಧಿಸಿದಂತೆ ಏಜೆನ್ಸಿಯು ದೃಢೀಕೃತ ಕಾಮಗಾರಿ ಅಭಿಯಂತರರಿಂದ, ವಿನ್ಯಾಸದ ದೃಢತೆಯ ಕುರಿತು ಅಂದರೆ ಅವರಿಂದ ಸದರಿ ವಿನ್ಯಾಸಕ್ಕೆ ಉಪಯೋಗಿಸಿರುವ ವಸ್ತುಗಳು, ಫಲಕದ ಗಾತ್ರ ಮತ್ತು ಅಳತೆ ಇತ್ಯಾದಿ, ಅದರ ಆಧಾರಗಳು ಇವುಗಳ ಬಗ್ಗೆ ನೀಡಿರುವ ಪ್ರಮಾಣ ಪತ್ರವನ್ನು ಆಯುಕ್ತರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಯಾವುದೇ ನ್ಯೂನತೆ ಅಥವಾ ಕೊರತೆ ಕಂಡು ಬಂದಲ್ಲಿ ಅಥವಾ ಯಾವುದೇ ಸಮಯದಲ್ಲಿ ಗಮನಕ್ಕೆ ತಂದಲ್ಲಿ ಪಾಲಿಕೆಯು ಏಜೆನ್ಸಿಗೆ ನ್ಯೂನತೆಯನ್ನು ಏಳು ದಿನಗಳೊಳಗಾಗಿ ಸರಿಪಡಿಸುವಂತೆ ನಿರ್ದೇಶನ ನೀಡತಕ್ಕದ್ದು. ಒಂದು ವೇಳೆ ನ್ಯೂನತೆಯನ್ನು ಸದರಿ ಅವಧಿಯಲ್ಲಿ ಸರಿಪಡಿಸದಿದ್ದಲ್ಲಿ ಪಾಲಿಕೆಯು ಫಲಕವನ್ನು ತೆಗೆದು ಹಾಕಲು ಮತ್ತು ಇದಕ್ಕೆ ತಗಲುವ ವೆಚ್ಚವನ್ನು ತೆರಿಗೆಯೊಂದಿಗೆ ಏಜೆನ್ಸಿಯಿಂದ ವಸೂಲಿ ಮಾಡಲು ಅಗತ್ಯ ಕ್ರಮ ತೆಗೆದುಕೊಳ್ಳಲು ಅಧಿಕಾರವಿರುತ್ತದೆ.

xi) ಜಾಹೀರಾತು ಫಲಕವು ಒಂದು ವೇಳೆ ಪ್ರಕಾಶಿತವಿದ್ದಲ್ಲಿ, ದೃಢೀಕರಣ ಪತ್ರವನ್ನು ಪಾಲಿಕೆ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಅಥವಾ ಬೆಸ್ಕಾಂ (BESCOM) ನಿಂದ ವಿದ್ಯುತ್ ಅಳವಡಿಸಿರುವುದರಿಂದ (ಸ್ಥಾಪನೆ) ಯಾವುದೇ ವಿದ್ಯುತ್ ಅಪಘಾತವಾಗದಿರುವ ಬಗ್ಗೆ ಪ್ರಮಾಣ ಪತ್ರವನ್ನು ಸಹ ಸಲ್ಲಿಸಬೇಕಾಗುತ್ತದೆ.

xii) ರಸ್ತೆ ಸೇತುವೆಗಳ ಬದಿಯಲ್ಲಿ ಅಳವಡಿಸುವ ಫಲಕಗಳ ಅಧಾರಗಳ ಎತ್ತರವನ್ನು ರಸ್ತೆ ಸೇತುವೆಯ ಕಟ್ಟೆಯ ಗೋಡೆ (ಹಳಿ)ಗೆ ಸಮಾನಾಂತರವಾಗಿ ಏಕರೂಪವಾಗಿ ಒಂದೇ ರೇಖೆಯಲ್ಲಿ ಇರುವಂತೆ ಸೀಮಿತಗೊಳಿಸಬೇಕು.

xiii) ಮೇಲ್ಚಾವಣಿಯ ಮೇಲೆ ಅಳವಡಿಸುವ ಫಲಕಗಳಿಗೆ ಸಂಬಂಧಿಸಿದಂತೆ, ಜಾಹೀರಾತುದಾರರು ಕಟ್ಟಡದ ಮತ್ತು ವಿನ್ಯಾಸದ ದೃಢತೆಯ ಬಗ್ಗೆ ಪ್ರಮಾಣ ಪತ್ರವನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು. ಇದನ್ನು ಒಬ್ಬ ದೃಢೀಕೃತ ನಗರ ಪಾಲಿಕೆ ಕಾರ್ಯಪಾಲಕ ಅಭಿಯಂತರರಿಂದಲೇ ದೃಢೀಕರಿಸತಕ್ಕದ್ದು. ಪಾಲಿಕೆಯು ನಿಯಮಿತವಾಗಿ ತಪಾಸಣೆ ಮಾಡತಕ್ಕದ್ದು ಮತ್ತು ಜಾಹೀರಾತು ಏಜೆನ್ಸಿಗೆ ಫಲಕವನ್ನು ಸಮಂಜಸವಾಗಿ ಮತ್ತು ಸುರಕ್ಷಿತವಾದ ಸ್ಥಿತಿಯಲ್ಲಿರುವಂತೆ ನಿರ್ವಹಿಸಲು ನಿರ್ದೇಶಿಸ ತಕ್ಕದ್ದು.

xiv) ಜಾಹೀರಾತು ಫಲಕಗಳ ಅನುಮತಿಯನ್ನು ಕ್ಯಾಲೆಂಡರ್ ವರ್ಷದ ಮಾರ್ಚ್–31 ಕ್ಕೆ ಮುಗಿಯುವಂತೆ ಮಂಜೂರು ಮಾಡತಕ್ಕದ್ದು.

xv) ಎಲ್ಲಾ ಏಜೆನ್ಸಿಗಳು ಪರವಾನಿಗೆ ಅಂತ್ಯಗೊಳ್ಳುವ ಸಾಲಿನ ಮಾರ್ಚ್ 31 ರಂದು ಅಥವಾ ಅದಕ್ಕೂ ಪೂರ್ವದಲ್ಲಿ ನವೀಕರಣಕ್ಕಾಗಿ ನಿರ್ದಿಷ್ಟ ಅರ್ಜಿ ನಮೂನೆಯಲ್ಲಿ (ಅನುಬಂಧ–4) ಅರ್ಜಿ ಸಲ್ಲಿಸತಕ್ಕದ್ದು. ತದನಂತರ ಸಲ್ಲಿಸಿದ ಅರ್ಜಿಗಳಿಗೆ ಸಂಬಂಧಿಸಿದಂತೆ, ಪ್ರತಿ ತಿಂಗಳು ರೂ. 5,000/– ದಂತೆ '' ವಿಳಂಬಿತ ನವೀಕರಣ ಶುಲ್ಕ '' ಪಾವತಿ ಮಾಡಬೇಕಾಗುತ್ತದೆ.

4.ಬಿ. ಚಾಲಿತ ಪ್ರದರ್ಶನಗಳ ಕಾರ್ಯವಿಧಾನ :

ನಿಗಧಿತ ಅರ್ಜಿ ನಮೂನೆಗೆ ಈ ಕೆಳಕಂಡ ದಾಖಲಾತಿಗಳನ್ನು ಲಗತ್ತಿಸಬೇಕು.

i) ಸಂಚಾರಿ ಅರಕ್ಷಕ ಇಲಾಖೆಯಿಂದ '' ನಿರಾಕ್ಷೇಪಣಾ ಪ್ರಮಾಣ ಪತ್ರ ''

ii) ಜಾಹೀರಾತು ಪ್ರದರ್ಶಿಸಲಿಚ್ಚಿಸುವ ವಾಹನದ ನಿರ್ದಿಷ್ಟ ಅಳತೆ ಮತ್ತು ಅಕಾರದ ನಕ್ಷೆ

iii) ಮಾರ್ಗ ನಿರೂಪಣಾ ಪಟ (ನಕ್ಷೆ) ಮತ್ತು ಮೊಬೈಲ್ ಪ್ರದರ್ಶನಕ್ಕಾಗಿ ವಾಹನ ನಿಲ್ಲಿಸುವ ಸ್ಥಳಗಳ ಮತ್ತು ಅವಧಿಯ ಕುರಿತಾದ ಪಟ್ಟಿ

iv) ವಾಹನಕ್ಕೆ ಸಂಬಂಧಿಸಿದ ಈ ಕೆಳಕಂಡ ದಾಖಲೆಗಳ ಪ್ರತಿಗಳು

ಎ) ವಾಹನ ನೋಂದಣಿ ಪ್ರಮಾಣ ಪತ್ರ

ಬಿ) ವಾಯು ಮಾಲಿನ್ಯ ನಿಯಂತ್ರಣ ಪ್ರಮಾಣ ಪತ್ರ.

ಸಿ) ವಾಹನ ವಿಮಾ ಪ್ರಮಾಣ ಪತ್ರ

ಡಿ) ಚಾಲಕರ ಲೈಸೆನ್ಸ್

ಇ) ಆರ್.ಟಿ.ಓ. ಯಿಂದ ದೃಢೀಕರಣ.

4.ಸಿ. ಬ್ಯಾನರ್ಸ್‌ಗಳು, ತಾತ್ಕಾಲಿಕ ಕಮಾನುಗಳು, ಫಲಕಗಳು ಮತ್ತು ಕಟ್ಟಡದ ರ್‍ಯಾಪ್‌ಗಳು (Wraps) ಇವುಗಳಲ್ಲಿ ಪ್ರದರ್ಶಿಸುವ ಜಾಹೀರಾತುಗಳಿಗೆ ಸಂಬಂಧಿಸಿದ ಕಾರ್ಯವಿಧಾನ:

i) ಅರ್ಜಿಯೊಂದಿಗೆ ಈ ಕೆಳಕಂಡ ದಾಖಲಾತಿಗಳನ್ನು ಲಗತ್ತಿಸಬೇಕು.

ಎ) ಪ್ರದರ್ಶಿಸುವ ಜಾಹೀರಾತಿನ ಪ್ರತಿಗಳು

ಬಿ) ಜಾಹೀರಾತು ಪ್ರದರ್ಶಿಸುವ ನಿರ್ದಿಷ್ಟ ಸ್ಥಳದ ನಕ್ಷೆಗಳ ವಿವರಗಳು

ಸಿ) ಪ್ರದರ್ಶನದ ಅವಧಿ

ಡಿ) ಪ್ರದರ್ಶಿಸುವ ಜಾಹೀರಾತಿನ ಅಳತೆ ಮತ್ತು ಗ್ರಾತ

ಇ) ತಾತ್ಕಾಲಿಕ ಕಮಾನು ಮತ್ತು ಫಲಕಗಳಾದಲ್ಲಿ ವಿನ್ಯಾಸ ಮತ್ತು ಅದಕ್ಕೆ ಉಪಯೋಗಿಸಿರುವ ವಸ್ತುಗಳ ಕುರಿತಾದ ವಾಸ್ತು ಶಿಲ್ಪ ನಕ್ಷೆ

ii) ಪರವಾನಿಗೆ ಅವಧಿ ಅಂತ್ಯವಾದೊಡನೆ ಇಂತಹ ಎಲ್ಲಾ ಜಾಹೀರಾತುಗಳನ್ನು ತೆಗೆದುಹಾಕತಕ್ಕದ್ದು. ಇಲ್ಲವೆ ಭಗ್ನಗೊಳಿಸಬೇಕು. ತಪ್ಪಿದಲ್ಲಿ ಜಾಹೀರಾತು ಅಳವಡಿಸಿರುವ ಏಜೆನ್ಸಿ ಮತ್ತು ಜಾಹೀರಾತಿನಲ್ಲಿ ಉಲ್ಲೇಖಿಸಿರುವ ವಾಣಿಜ್ಯ ಸಂಸ್ಥೆ. ಇತರೇ ಸಂಸ್ಥೆ ಅಥವಾ ವ್ಯಕ್ತಿ ಇವರುಗಳು ಪ್ರತ್ಯೇಕವಾಗಿ ಅಥವಾ ಜಂಟಿಯಾಗಿ ಕೊನೆಯ ದಿನಾಂಕದ ನಂತರದ ಅವಧಿಗೆ ಜಾಹೀರಾತು ಶುಲ್ಕದೊಂದಿಗೆ ಪ್ರತಿ ದಿನ ರೂ. 1,000/– ದವರೆಗೆ ದಂಡವನ್ನು ಭರಿಸಬೇಕಾಗುತ್ತದೆ.

iii) ಪರವಾನಿಗೆ ಅಂತ್ಯಗೊಂಡ ದಿನಾಂಕದಿಂದ ಮೂರು ದಿನಗಳ ಅವಧಿಯಲ್ಲಿ ಜಾಹೀರಾತನ್ನು ತೆಗೆಯದಿದ್ದಲ್ಲಿ ಪಾಲಿಕೆಯಿಂದಲೇ ಅಂತಹ ಜಾಹೀರಾತುಗಳನ್ನು ತೆಗೆದುಹಾಕಬೇಕು ಮತ್ತು ಇದಕ್ಕೆ ತಗಲುವ ವೆಚ್ಚವನ್ನು ಮೇಲೆ ತಿಳಿಸಿರುವ ದಂಡದೊಂದಿಗೆ ಏಜೆನ್ಸಿಯಿಂದ ವಸೂಲು ಮಾಡಿಕೊಳ್ಳತಕ್ಕದ್ದು. ಪರವಾನಿಗೆ ಅಂತ್ಯಗೊಳ್ಳುವ ದಿನದಂದು ಬ್ಯಾನರ್‌ಗಳನ್ನು ತೆಗೆದುಹಾಕುವುದನ್ನು ಕಡ್ಡಾಯವಾಗಿ ಪಾಲಿಸಲು ಸಹಕಾರವಾಗುವ ದೃಷ್ಟಿಯಿಂದ ಆಯುಕ್ತರು ಭದ್ರತಾ ಠೇವಣಿಯನ್ನು ಇಡುವಂತೆ ನಿಗಧಿಪಡಿಸತಕ್ಕದ್ದು.

iv) ಬ್ಯಾನರುಗಳನ್ನು ಯಾವುದೇ ಮರಗಳಿಗೆ, ವಿದ್ಯುತ್ ಕಂಬಗಳಿಗೆ, ದೀಪಸ್ತಂಭಗಳಿಗೆ ದೂರವಾಣಿ ಕಂಬಗಳಿಗೆ ಸಂಚಾರ ಸಂಕೇತಗಳಿರುವ ಕಂಬಗಳಿಗೆ ಕಟ್ಟಿಸತಕ್ಕದ್ದಲ್ಲ ಅಥವಾ ಇವುಗಳ ಮೇಲೆ ಪ್ರದರ್ಶಿಸತಕ್ಕದ್ದಲ್ಲ.

4. ಡಿ. ಗಾಳಿ ತುಂಬಿದ ಮಾಧ್ಯಮದ ಮೂಲಕ ಅಥವಾ ಬಲೂನುಗಳ ಮೇಲೆ ಪ್ರದರ್ಶಿಸುವ ಜಾಹೀರಾತುಗಳಿಗೆ ಕ್ರಮ ವಿಧಾನ:

i) ಪ್ರಕಾಶಿತ ಅಥವಾ ಪ್ರಕಾಶಿತವಲ್ಲದ ಜಾಹೀರಾತುಗಳನ್ನು ತೇಲುವ ಬಲೂನುಗಳು ಅಥವಾ ಇತರೇ ಗಾಳಿ ತುಂಬಿರುವ ಮಾಧ್ಯಮದ ಮೂಲಕ ಪ್ರದರ್ಶಿಸಲು ಪರವಾನಿಗೆಯನ್ನು ಈ ಉಪ ವಿಧಿಯ 3 (ಹೆಚ್)ನ ಷರತ್ತುಗಳ ಪಾಲನೆಗೊಳಪಟ್ಟು ಮಂಜೂರು ಮಾಡಬಹುದಾಗಿದೆ.

ii) ಏಜೆನ್ಸಿಯು ಪಾಲಿಕೆಯ ಜಾಹೀರಾತು ಇಲಾಖೆಯಲ್ಲಿ ಲಭ್ಯವಿರುವ ನಿಗಧಿತ ಅರ್ಜಿ ನಮೂನೆಯಲ್ಲಿ ಅರ್ಜಿ ಸಲ್ಲಿಸತಕ್ಕದ್ದು.

4. ಇ. ದಿಕ್ಸೂಚಿ ಫಲಕಗಳನ್ನು ಅಳವಡಿಸುವ ಕುರಿತು ಕ್ರಮ ವಿಧಾನ:

i) ಮಾರ್ಗಸೂಚಿ ಫಲಕಗಳನ್ನು ಅಳವಡಿಸಲು, ಪಾಲಿಕೆಯ ಜಾಹೀರಾತು ವಿಭಾಗದಲ್ಲಿ ಲಭ್ಯವಿರುವ ನಿಗಧಿತ ಅರ್ಜಿ ನಮೂನೆಯಲ್ಲಿ (ಅನುಬಂಧ–5) ಅರ್ಜಿ ಸಲ್ಲಿಸಬೇಕು. ಈ ಕೆಳಕಂಡ ದಾಖಲೆಗಳನ್ನು ಅರ್ಜಿಗೆ ಲಗತ್ತಿಸಿರಬೇಕು.

ಎ) ದಿಕ್ಸೂಚಿ ಫಲಕಗಳನ್ನು ಅಳವಡಿಸಲು ಪ್ರಸ್ತಾಪಿಸಿರುವ ನಿರ್ದಿಷ್ಟ ಜಾಗದ ಸ್ಥಳ ನಕ್ಷೆ (site plan)
ಬಿ) ದಿಕ್ಸೂಚಿ ಫಲಕದ ಗಾತ್ರ , ಮಾದರಿ ಮತ್ತು ಉಪಯೋಗಿಸುವ ವಸ್ತುಗಳ ಕುರಿತಾದ ನಕ್ಷೆ
ಸಿ) ಫಲಕದ ನಮೂನೆ (ಪ್ರಕಾಶಿತ ಅಥವಾ ಪ್ರಕಾಶಿತವಲ್ಲದ) ಮತ್ತು ಸ್ಥಾಪಿಸುವ ರೀತಿ.

4. ಎಫ್. ಅಂಗಡಿ ಮುಂಗಟ್ಟುಗಳು, ಉಪಹಾರ ಗೃಹಗಳು, ಹೋಟೆಲ್‌ಗಳು ಮತ್ತು ಇತರೇ ವ್ಯಾಪಾರ ಮತ್ತು ವಾಣಿಜ್ಯ ಸಂಸ್ಥೆ ಇತ್ಯಾದಿಗಳಲ್ಲಿ ತಯಾರಿಕೆದಾರರಿಂದ ಬಹುರಾಷ್ಟ್ರೀಯ ಕಂಪನಿಗಳನ್ನೊಳಗೊಂಡು ಇತರೇ ಉತ್ಪಾದಕರುಗಳಿಂದ ನೇರವಾಗಿ ಪ್ರದರ್ಶಿಸುವ ಜಾಹೀರಾತುಗಳಿಗೆ ಸಂಬಂಧಿಸಿದಂತೆ ಕ್ರಮ ವಿಧಾನ :

i. ವ್ಯಾಪಾರಿ ಸಂಸ್ಥೆಗಳು/ಕಂಪನಿ/ತಯಾರಿಕೆದಾರರು ಇತ್ಯಾದಿ ಇವರುಗಳು ಜಾಹೀರಾತುಗಳಿಗೆ ಸಂಬಂಧಿಸಿರುವ ಎಲ್ಲಾ ವಿವರಗಳನ್ನು ನೇರವಾಗಿ ಪಾಲಿಕೆಯ ಜಾಹೀರಾತು ವಿಭಾಗಕ್ಕೆ ಆರ್ಥಿಕ ವರ್ಷದ ಫೆಬ್ರವರಿ 15 ನೆಯ ದಿನಾಂಕದೊಳಗಾಗಿ ಸಲ್ಲಿಸತಕ್ಕದ್ದು. ಒಂದು ವೇಳೆ ಕಂಪನಿ ಉತ್ಪಾದಕರು, ತಯಾರಿಕೆದಾರರು ಭಾರಿ ಸ್ವಜಾಹೀರಾತುಗಳ ಪಟ್ಟಿಯನ್ನು ಸಲ್ಲಿಸದಿದ್ದಲ್ಲಿ ಫಲಕವನ್ನು ಪ್ರದರ್ಶಿಸಿರುವ ಅಂಗಡಿಯ ಮಾಲೀಕರು ಜಾಹೀರಾತು ಶುಲ್ಕವನ್ನು ಪಾವತಿಸಬೇಕಾಗುತ್ತದೆ ಪರಂತು, ಇಂತಹ ಜಾಹೀರಾತನ್ನು ಪ್ರದರ್ಶಿಸುವ ಅಂಗಡಿ ಮಾಲೀಕರು ದಂಡ ಪಾವತಿಗೆ ಒಳಗಾಗುತ್ತಾರೆ ಮತ್ತು ವ್ಯಾಪಾರ ಪರವಾನಿಗೆ ರದ್ದುಪಡಿಲಾಗುವುದು.

ii. ಜಾಹೀರಾತು ತೆರಿಗೆಯನ್ನು ಮುಂದಿನ (ನಂತರದ) ಸಾಲಿನ ಏಪ್ರಿಲ್ 1 ರಿಂದ ಮಾರ್ಚ್ 31ರ ವರೆಗಿನ ಅವಧಿಗೆ ಲೆಕ್ಕ ಹಾಕಲಾಗುತ್ತದೆ.

iii. ವಾಣಿಜ್ಯ ಜಾಹೀರಾತುಗಳಿಗೆ ವಿಧಿಸುವ ಜಾಹೀರಾತು ಶುಲ್ಕ ಅನ್ವಯವಾಗುತ್ತದೆ ಮತ್ತು ಶುಲ್ಕವನ್ನು ಮುಂಗಡವಾಗಿ ಪ್ರತಿ ವರ್ಷದ ಮಾರ್ಚ್ 31ರ ಒಳಗೆ ಒಂದೇ ಕಂತಿನಲ್ಲಿ ಪಾವತಿ ಮಾಡತಕ್ಕದ್ದು.

iv. ಭಾರಿ ಸ್ವಜಾಹೀರಾತುಗಳ ಪ್ರದರ್ಶನಕ್ಕಾಗಿ ನಿಗಧಿಪಡಿಸಿರುವ ಅರ್ಜಿ ನಮೂನೆಗಳು, ಪಾಲಿಕೆಯ ಜಾಹೀರಾತು ವಿಭಾಗದಲ್ಲಿ ಲಭ್ಯವಿರುತ್ತದೆ. ಅರ್ಜಿಯೊಂದಿಗೆ ಈ ಕೆಳಕಂಡ ದಾಖಲಾತಿಗಳನ್ನು ಲಗತ್ತಿಸುವುದು.

ಎ) ಜಾಹೀರಾತು ಪ್ರದರ್ಶನದ ಸ್ಥಳ : ವಿಳಾಸ ಮತ್ತು ಸ್ವರೂಪ
ಬಿ) ಫಲಕದ ಗಾತ್ರ
ಸಿ) ಫಲಕದ ಮಾದರಿ

4. ಜಿ. ಹೊರಾಂಗಣ ಕ್ರೀಡಾಂಗಣಗಳಲ್ಲಿ ಪ್ರದರ್ಶಿಸುವ ಜಾಹೀರಾತು ಸಂಬಂಧದ ಕ್ರಮ ವಿಧಾನ:

1. ಅರ್ಜಿಯನ್ನು ಈ ಕೆಳಕಂಡ ಲಗತ್ತುಗಳೊಂದಿಗೆ ಸಲ್ಲಿಸಬೇಕು.

i) ಸಂಬಂಧಿಸಿದ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪ್ರಮಾಣ ಪತ್ರ

ii) ಕ್ರೀಡಾಂಗಣದಲ್ಲಿ ಪ್ರದರ್ಶಿಸಲು ಇಚ್ಚಿಸುವ ಸ್ಥಳದ ಅಳತೆ ಮತ್ತು ಮಾದರಿ

ಇಂತಹ ಜಾಹೀರಾತುಗಳನ್ನು ವಾಣಿಜ್ಯ ಜಾಹೀರಾತುಗಳೆಂದೇ ಪರಿಗಣಿಸಲಾಗುವುದು.

ಭಾಗ –IV

5. ಅಂಗಡಿ ಜಾಹೀರಾತುಗಳ ಪ್ರಮಾಣಗಳು:

1. ಒಂದೇ ವಾಣಿಜ್ಯ ಕಟ್ಟಡದ ಆವರಣದಲ್ಲಿ ವ್ಯವಹಾರ ನಡೆಸುತ್ತಿರುವ ಎಲ್ಲಾ ಸಂಸ್ಥೆಗಳು/ಸ್ಥಾಪನೆಗಳು, ಅವುಗಳ ಹೆಸರು ಮತ್ತು ವಿಳಾಸ ಒಳಗೊಂಡಿರುವ ಒಂದೇ ಸಮ್ಮಿಶ್ರ ಫಲಕವನ್ನು ಪ್ರದರ್ಶಿಸತಕ್ಕದ್ದು. ಇಂತಹ ಪ್ರದರ್ಶನಗಳು ಅಲ್ಲಿರುವ ಸಂಸ್ಥೆ/ಮಳಿಗೆಗಳ 'ಲೋಗೋ' (Logo) ಅಥವಾ ವಾಣಿಜ್ಯ ಗುರುತುಗಳನ್ನು ಒಳಗೊಳ್ಳಬಹುದಾಗಿದ್ದು, ಇದಕ್ಕೆ ಜಾಹೀರಾತು ಶುಲ್ಕ ಅನ್ವಯವಾಗುವುದಿಲ್ಲ. ಈ ವಿನಾಯಿತಿ ಹತ್ತಕ್ಕಿಂತ ಹೆಚ್ಚಿನ ಸಂಖ್ಯೆ/ಮಳಿಗೆಗಳಿಗೆ ಒಂದೇ ಸಮ್ಮಿಶ್ರ ಫಲಕವಿದ್ದಾಗ ಮಾತ್ರ ಅನ್ವಯವಾಗುತ್ತದೆ. ಇಂತಹ ಇತರೇ ಫಲಕಗಳನ್ನು ಪ್ರದರ್ಶಿಸಿದಲ್ಲಿ ಅವುಗಳನ್ನು ತೆಗೆದುಹಾಕಲು ಪಾಲಿಕೆಯು ಅಧಿಕಾರ ಹೊಂದಿರುತ್ತದೆ.
2. ಅಂಗಡಿಗಳ ಗೋಡೆಗಳ ಹೊರಭಾಗಗಳಲ್ಲಿ ಸಮಾನಾಂತರವಾಗಿ ಅಥವಾ ಲಂಬಾಕಾರದಲ್ಲಿ ಪ್ರದರ್ಶಿಸಿದ ಜಾಹೀರಾತು ಸಂಕೇತ ಫಲಕಗಳನ್ನೊಳಗೊಂಡ ಎಲ್ಲಾ ಜಾಹೀರಾತು ಸಂಕೇತ ಫಲಕಗಳಿಗೆ ಸ್ವ ವಾಣಿಜ್ಯ ಜಾಹೀರಾತು ಫಲಕಗಳಿಗೆ ಅನ್ವಯಿಸುವ ಜಾಹೀರಾತು ಶುಲ್ಕ ಪ್ರಮಾಣದಲ್ಲಿ ಶುಲ್ಕ ಅನ್ವಯಿಸುತ್ತದೆ. ಆದರೆ ಇಂತಹ ಯಾವುದೇ ಜಾಹೀರಾತು ಸಂಕೇತ ಫಲಕ 3.0 X 3.0 ಮೀ ಅಳತೆಯನ್ನು ಮೀರಿರಬಾರದು ಮತ್ತು ಪ್ಯಾರಾಪಿಟ್‌ಗಿಂತ ಅಥವಾ ಕಟ್ಟಡದ ಆಧಾರ ಸ್ಥಂಬಕ್ಕಿಂತ ಹೊರಗೆ ವಿಸ್ತರಿಸತಕ್ಕದ್ದಲ್ಲ. ಇದು ಪ್ರಕಾಶಿತ, ಪ್ರಕಾಶಿತವಲ್ಲದ ಫಲಕಗಳಿಗೆ ಮತ್ತು ಟ್ರಾನ್ಸ್‌ಲೈಟ್/ ಹಿಂದಿನಿಂದ ಪ್ರಕಾಶಿತವಾಗುವ ಜಾಹೀರಾತುಗಳಿಗೂ ಅನ್ವಯವಾಗುತ್ತದೆ. ಅಂಗಡಿಗಳ ಗಾತ್ರಕ್ಕನುಗುಣವಾಗಿ ಅಂಗಡಿಯ ಹೆಸರು, ವಿಳಾಸ ಮತ್ತು ಉತ್ಪಾದನೆ/ ಮಾರಾಟದ ಸರಕು ವಿವರಗಳನ್ನೊಳಗೊಂಡ ಜಾಹೀರಾತು ಫಲಕಗಳನ್ನು ಅಳವಡಿಸತಕ್ಕದ್ದು.
3. ಅಂಗಡಿ ಮುಂಗಟ್ಟು ಜಾಹೀರಾತುಗಳು ಕಟ್ಟಡ ಅಥವಾ ಸ್ವತ್ತಿನ ಅಂಚಿನಿಂದ ಬೀದಿಯಲ್ಲಿ ಹೊರಗಡೆ ಚಾಚತಕ್ಕದ್ದಲ್ಲ. ಕೆಳಭಾಗದಲ್ಲಿ ಪ್ರವೇಶದ್ವಾರ ಅಥವಾ ಕಿಟಕಿಯನ್ನು ಮುಚ್ಚುವಂತೆ ಅಳವಡಿಸತಕ್ಕದ್ದಲ್ಲ.
4. ಇಂತಹ ಜಾಹೀರಾತು ವಾಣಿಜ್ಯ ಸಂಸ್ಥೆಯ ಪ್ರವೇಶದ್ವಾರದ ಮೇಲಿನ ಮೇಲ್ಚಾವಣಿಯ ಪೈರಾಪೆಟ್‌ನ ಮೇಲೆ ಅಥವಾ ಕೆಳಭಾಗದಲ್ಲಿ ಪ್ರವೇಶದ್ವಾರ ಅಥವಾ ಕಿಟಕಿ ಮುಚ್ಚುವಂತೆ ಅಳವಡಿಸತಕ್ಕದ್ದಲ್ಲ.
5. ವಾಣಿಜ್ಯ ಸಂಸ್ಥೆಯಲ್ಲಿ ಪ್ರದರ್ಶಿಸಿದ ಸ್ವಜಾಹೀರಾತು, ಸದರಿ ವಾಣಿಜ್ಯ ಸಂಸ್ಥೆಯ ಹೆಸರನ್ನು ಹೊಂದಿರಬಹುದಾಗಿದೆ.

   ಆದರೆ ಇಂತಹ ಜಾಹೀರಾತು ವಾಣಿಜ್ಯದ ಚಿಹ್ನೆಗಳನ್ನು ಮತ್ತು ಗುರುತಿನ ಹೆಸರುಗಳನ್ನು (brandname) ಪ್ರದರ್ಶಿಸುವುದರಿಂದ, ಅವುಗಳ ಹೆಸರು ಫಲಕಗಳಿಗೆ ನೀಡುವಂತೆ, ತೆರಿಗೆ ವಿನಾಯಿತಿ ನೀಡಲಾಗುವುದಿಲ್ಲ.
6. ಸ್ವ ಜಾಹೀರಾತು ಫಲಕಗಳ ಕಟ್ಟಡ ಅಥವಾ ಸ್ವತ್ತಿನ ಅಂಚಿನಿಂದ ಹೊರಗೆ ಬೀದಿಯಲ್ಲಿ ಚಾಚತಕ್ಕದ್ದಲ್ಲ. ಅಂಗಡಿ ಅಥವಾ ವಾಣಿಜ್ಯ ಸಂಸ್ಥೆಗಳು ಅವುಗಳ ಹೆಸರು ಮತ್ತು ನಿರ್ವಹಿಸುತ್ತಿರುವ ವ್ಯವಹಾರಗಳನ್ನೊಳಗೊಂಡ ನಾಮಫಲಕಗಳನ್ನು ಹೊರತುಪಡಿಸಿ ಇತರೇ ಸ್ವಜಾಹೀರಾತುಗಳಿಗೆ ಜಾಹೀರಾತು ಶುಲ್ಕ ಅನ್ವಯವಾಗುತ್ತದೆ. ಆದಾಗ್ಯೂ ಈ ಜಾಹೀರಾತು ಫಲಕಗಳು, ಪ್ರಕಾಶಿತವಿರಲಿ, ಪ್ರಕಾಶಿತವಿಲ್ಲದಿರಲಿ, ಹಿಂದಿನಿಂದ ಪ್ರಕಾಶಿತವಿರುವಂತಹ ಅಥವಾ ಟ್ರಾನ್ಸ್‌ಲೈಟ್‌ಗಳಿಂದ ಅವುಗಳ ಅಗಲ ಕಟ್ಟಡದ ಅಗಲಕ್ಕಿಂತ ಹೆಚ್ಚಿಗೆ ಇರತಕ್ಕದ್ದಲ್ಲ ಹಾಗೂ ಅಂಗಡಿ ಇರುವ ಕಟ್ಟಡದ ಪ್ಯಾರಪೆಟ್‌ಗಿಂತ ಮೇಲಕ್ಕೆ ವಿಸ್ತರಿಸತಕ್ಕದ್ದಲ್ಲ.

7. ಎಲ್ಲಾ ರೀತಿಯ ಸ್ವಜಾಹೀರಾತುಗಳನ್ನು ಪ್ರದರ್ಶಿಸುವ ಎಲ್ಲ ವ್ಯಕ್ತಿಗಳು, ಅಂಗಡಿಕಾರರು, ವಾಣಿಜ್ಯ ಗೃಹ ಅಥವಾ ಕಛೇರಿಗಳು, ವ್ಯಾಪಾರ ಸಂಸ್ಥೆಗಳು, ಅಂತಹ ಜಾಹೀರಾತುಗಳ ಗಾತ್ರ ಮತ್ತು ಪ್ರದರ್ಶಿಸುವ ಸ್ಥಳವನ್ನು ಘೋಷಿಸಬೇಕು ಮತ್ತು ನಿಗಧಿತ ಮತ್ತು ಪಾಲಿಕೆಯಲ್ಲಿ ಲಭ್ಯವಿರುವ ಸ್ವಯಂ ಘೋಷಣಾ ಜಾಹೀರಾತು ಶುಲ್ಕ ನಮೂನೆಯ ಮೂಲಕ ಅನ್ವಯಿಸುವ ಜಾಹೀರಾತು ಶುಲ್ಕವನ್ನು ಪಾವತಿಸಬೇಕು. ಸದರಿ ಶುಲ್ಕವನ್ನು ಉದ್ದಿಮೆ ಪರವಾನಗಿ/ನವೀಕರಣ ಸಮಯದಲ್ಲಿ ಕಡ್ಡಾಯವಾಗಿ ಪಾವತಿಸತಕ್ಕದ್ದು.
8. ಪ್ರತಿಯೊಂದು ವಾಣಿಜ್ಯ ಸಂಸ್ಥೆ, ಸದರಿ ಸಂಸ್ಥೆ ಇರುವ ಕಟ್ಟಡದ ಕಾಂಪೌಂಡಿನೊಳಗೆ ಪ್ರದರ್ಶಿಸುವ ಸ್ವಜಾಹೀರಾತನ್ನೊಳಗೊಂಡಂತೆ ಕೇವಲ ಒಂದು ಸ್ವಜಾಹೀರಾತು ಫಲಕವನ್ನು ಮಾತ್ರ ಅಳವಡಿಸಬಹುದಾಗಿರುತ್ತದೆ. ದಿಕ್ಸೂಚಿ ಫಲಕಗಳು ಸ್ವಜಾಹೀರಾತುಗಳ ವ್ಯಾಪ್ತಿಯಲ್ಲಿ ಸೇರುವುದಿಲ್ಲ. ಸ್ವಜಾಹೀರಾತು 01 x 02 ಮೀ. ಅಳತೆ ಮೀರಿದಲ್ಲಿ ವಾಣಿಜ್ಯದ ಭಾರಿ ಜಾಹೀರಾತುಗಳೆಂದು ಪರಿಗಣಿಸತಕ್ಕದ್ದು.
9. ಒಂದು ವೇಳೆ ಸ್ವಜಾಹೀರಾತು ಉತ್ಪನ್ನ ಅಥವಾ ಸೇವೆಯ ಕುರಿತಾದ ವಾಣಿಜ್ಯ ಜಾಹೀರಾತನ್ನು ಪ್ರದರ್ಶಿಸಿದಲ್ಲಿ ಈ ಕೆಳಕಂಡ ಷರತ್ತುಗಳನ್ನು ಪಾಲಿಸಬೇಕಾಗುತ್ತದೆ.
   i) ಸದರಿ ವಾಣಿಜ್ಯ ಸಂಸ್ಥೆಯ ಹೆಸರು ಅಥವಾ ಆಕಾರ/ಚಿತ್ರ (ಇದ್ದಲ್ಲಿ) ಇವುಗಳನ್ನೊಳಗೊಂಡ ಫಲಕದ ಕ್ಷೇತ್ರ ಜಾಹೀರಾತಿನ ಉದ್ದ/ಅಗಲಗಳಿಗಿಂತ 2/3 ಕ್ಕಿಂತ ಕಡಿಮೆ ಇರತಕ್ಕದ್ದಲ್ಲ. ಇನ್ನುಳಿದ 1/3 ರಷ್ಟು ಕ್ಷೇತ್ರದ ಜಾಗವನ್ನು ವಾಣಿಜ್ಯ ಜಾಹೀರಾತಿಗಾಗಿ ಮೀಸಲಿಡಬಹುದು.
   ii) ಸದರಿ ವಾಣಿಜ್ಯ ಸಂಸ್ಥೆಯ ಮಾಲೀಕರು, ವಾಣಿಜ್ಯ ಜಾಹೀರಾತಿನ ಸ್ವರೂಪಕ್ಕನುಗುಣವಾಗಿ ಅಂದರೆ ಪ್ರಕಾಶಿತ, ಪ್ರಕಾಶಿತವಲ್ಲದ, ಟ್ರಾನ್ಸ್‌ಲೈಟ್ ಇತ್ಯಾದಿಗಳಿಗನುಗುಣವಾಗಿ ಜಾಹೀರಾತು ಶುಲ್ಕ ಪಾವತಿ ಮಾಡುವ ಜವಾಬ್ದಾರಿ ವಹಿಸಿಕೊಳ್ಳಬೇಕು.
   iii) ಸ್ವಜಾಹೀರಾತಿನ ಗಾತ್ರ, ಜಾಹೀರಾತು ಅಳವಡಿಸಿರುವ ಸದರಿ ಕಟ್ಟಡದ ಪ್ಯಾರಾಪೆಟ್ ಇದರ ಎತ್ತರಕ್ಕಿಂತ ಮೇಲ್ಭಾಗದಲ್ಲಿ ಅಥವಾ ಪೆರಾಪೆಟ್‌ಗಿಂತ ಕೆಳಗೆ ಜಾಹೀರಾತನ್ನು ಪ್ರದರ್ಶಿಸಿರುವ ಜಾಗದ ಕೆಳಭಾಗಕ್ಕೆ ವಿಸ್ತರಿಸತಕ್ಕದ್ದಲ್ಲ.

ಭಾಗ– (v)

6. ಅಂಗಡಿ ಜಾಹೀರಾತುಗಳ ಕುರಿತಾದ ಕ್ರಮ ವಿಧಾನ :

1) ಶುಲ್ಕವನ್ನು ಪ್ರತಿವರ್ಷದ ಏಪ್ರಿಲ್ 1 ರಿಂದ 31ನೆಯ ಮಾರ್ಚ್ ತಿಂಗಳವರೆಗಿನ ಅವಧಿಗೆ ಲೆಕ್ಕ ಹಾಕಲಾಗುವುದು.
2) ಅನ್ವಯಿಸುವ ವಾರ್ಷಿಕ ಶುಲ್ಕವನ್ನು ಪ್ರತಿವರ್ಷ ಮುಂಗಡವಾಗಿ ಮಾರ್ಚ್ 31ರೊಳಗಾಗಿ ಒಂದೇ ಕಂತಿನಲ್ಲಿ ಪಾವತಿಸಬೇಕು.
3) ಸ್ವಫಲಕಗಳಿಗಾಗಿ ' ಸ್ವಯಂ ಘೋಷಿತ ಶುಲ್ಕ ' ಯೋಜನೆ ಯಡಿಯಲ್ಲಿ ಶುಲ್ಕವನ್ನು ಪಾವತಿಸಲು ವಿಫಲರಾದ ವ್ಯಕ್ತಿಯು ಜಾಹೀರಾತು ಶುಲ್ಕದೊಂದಿಗೆ ಪ್ರತಿ ತಿಂಗಳು ರೂ. 1,000/– ರಂತೆ ದಂಡ ನೀಡಬೇಕಾಗುತ್ತದೆ. ಈ ದಂಡಮಾಪನೆಯನ್ನೆ ಮೂರು ವರ್ಷಗಳಿಗೊಮ್ಮೆ ಪುನರ್ ಪರಿಶೀಲಿಸಿ ನಿಗಧಿಗೊಳಿಸುವುದು.
4) ಯಾವುದೇ ಸ್ವಜಾಹೀರಾತಿನ ಸಂಬಂಧ ಜಾಹೀರಾತು ಶುಲ್ಕ ನೀಡದಿರುವುದು ಕಂಡು ಬಂದಲ್ಲಿ ಚಾಲ್ತಿಯಲ್ಲಿರುವ ವರ್ಷದ ಪೂರ್ಣ ಶುಲ್ಕವನ್ನು ಪಾವತಿ ಮಾಡಬೇಕಾಗುತ್ತದೆ.

5) **ಜಾಹೀರಾತು ಇಲಾಖೆಯ ಸಿಬ್ಬಂದಿ ಯಾವುದೇ ಸಮಯದಲ್ಲಿ ನಡೆಸಬಹುದಾದ ತಪಾಸಣೆಯ ಸಮಯದಲ್ಲಿ ಸ್ವಯಂ ಘೋಷಿತ ಆಸ್ತಿ ತೆರಿಗೆ ಯೋಜನೆಯಡಿಯಲ್ಲಿ ಜಾಹೀರಾತು ಶುಲ್ಕದ ವಿಷಯದಲ್ಲಿ ಯಾವುದೇ ಸುಳ್ಳು ಘೋಷಣೆ ಮಾಡಿರುವುದು ಕಂಡು ಬಂದಲ್ಲಿ ಸದರಿ ಯೋಜನೆಯಡಿಯಲ್ಲಿ ಘೋಷಿಸದೇ ಇರುವ ಸ್ಥಳಕ್ಕೆ ಅನ್ವಯವಾಗುವ ಜಾಹೀರಾತು ಶುಲ್ಕದ ಎರಡು ಪಟ್ಟು ಶುಲ್ಕವನ್ನು ಪಾವತಿ ಮಾಡಬೇಕಾಗುತ್ತದೆ.**

6) ಇಂತಹ ಜಾಹೀರಾತು ಪ್ರದರ್ಶನಗಳಿಗಾಗಿ ನಿಗಧಿಪಡಿಸಿರುವ ಅರ್ಜಿ ನಮೂನೆಗಳು ಪಾಲಿಕೆಯ ಜಾಹೀರಾತು ವಿಭಾಗದಲ್ಲಿ ಲಭ್ಯವಿರುತ್ತದೆ. ಎಲ್ಲಾ ಸ್ವಜಾಹೀರಾತುಗಳಿಗಾಗಿ ನಿಗಧಿತ ಅರ್ಜಿ ನಮೂನೆಯಲ್ಲಿ ಈ ಕೆಳಕಂಡ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸುವುದು.

iii) ಸ್ಥಳ ವಿಳಾಸ ಮತ್ತು ಜಾಹೀರಾತಿನ ಸ್ವರೂಪ

iv) ಜಾಹೀರಾತು ಪ್ರದರ್ಶನದ ಗಾತ್ರ

v) ಪ್ರದರ್ಶನದ ನಮೂನೆ

ಭಾಗ– (vi)

7. ಇತರೆ ಕ್ರಮ ವಿಧಾನಗಳು :

1) ಯಾವುದೇ ವ್ಯಕ್ತಿ/ಸಂಸ್ಥೆ/ಸಂಘಗಳು ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪೋಸ್ಟರ್/ಬಂಟಿಂಗ್ಸ್/ ಭಿತ್ತಿಪತ್ರಗಳನ್ನು ಅನಧಿಕೃತವಾಗಿ ಪ್ರದರ್ಶಿಸುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.

2) ಯಾವುದೇ ವ್ಯಕ್ತಿ/ಸಂಸ್ಥೆ/ ಸಂಘಗಳು ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಮರದ ಮೇಲೆ ಕಟ್ಟಡ ಕಾಂಪೌಂಡು ವ್ಯಕ್ತಿ ,ಪ್ರಾಣಿ ಇನ್ನಾವುದೇ ತರಹದ ವಸ್ತುವಿನ ಮೇಲೆ ಯಾವುದೇ ಜಾಹೀರಾತನ್ನು ಅಂಟಿಸುವುದು, ಮೊಳೆ ಹೊಡೆದು ಅಳವಡಿಸುವುದು, ಕಟ್ಟುವುದು, ಹಚ್ಚುವುದು, ಸ್ಥಿರಗೊಳಿಸುವುದು ಇತ್ಯಾದಿ ಯಾವುದೇ ರೀತಿಯಲ್ಲಿ ಅನಧಿಕೃತವಾಗಿ ಜಾಹೀರಾತನ್ನು ಪ್ರದರ್ಶಿಸತಕ್ಕದ್ದಲ್ಲ.

3) ಯಾವುದೇ ವ್ಯಕ್ತಿ/ಸಂಸ್ಥೆ/ಸಂಘಗಳು ಪಾಲಿಕೆಯ ನಿರ್ಧಿಷ್ಟ ಷರತ್ತುಗಳಿಗನುಸಾರವಾಗಿ ಪ್ರದರ್ಶಿಸಿರುವ ಗೋಡೆ ಪೇಂಟಿಂಗ್‌ಗಳನ್ನು ಹೊರತುಪಡಿಸಿ, ದಾವಣಗೆರೆ ನಗರದಲ್ಲಿ ದಾವಣಗೆರೆ ಮಹಾನಗರ ಪಾಲಿಕೆಯ ಆಯುಕ್ತರ ಪರವಾನಿಗೆಯಿಲ್ಲದೆ ಗೋಡೆ ಪೇಟಿಂಗ್‌ಗಳನ್ನು ಬಾಹ್ಯ ಮಾಧ್ಯಮವಾಗಿ ಉಪಯೋಗಿಸತಕ್ಕದ್ದಲ್ಲ.

4) ಯಾವುದೇ ವ್ಯಕ್ತಿಯು ದಾವಣಗೆರೆ ಮಹಾನಗರ ಪಾಲಿಕೆಯ ಆಯುಕ್ತರ ಚಾಲ್ತಿಯಲ್ಲಿರುವ ಪರವಾನಿಗೆ ಇಲ್ಲದೆಯೇ ಯಾವುದೇ ರೀತಿಯ ಜಾಹೀರಾತನ್ನು ದಾವಣಗೆರೆ ನಗರದಲ್ಲಿ ಯಾವುದೇ ವಿದ್ಯುತ್ ಕಂಬ ಅಥವಾ ದೂರವಾಣಿ ಕಂಬಕ್ಕೆ ಲಗತ್ತಿಸತಕ್ಕದ್ದಲ್ಲ.

5) ದಾವಣಗೆರೆ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಯಾವುದೇ ಪ್ರಾಣಿಗಳ ಮೇಲೆ, ಪ್ರಾಣಿಗಳಿಂದ ಎಳೆಯಲ್ಪಡುವ ವಾಹನಗಳಲ್ಲಿ/ ಬಾಡಿಗೆ ಗಾಡಿಗಳಲ್ಲಿ ಅಥವಾ ಜೀವಂತ ಪ್ರಾಣಿಗಳನ್ನು ಉಪಯೋಗಿಸಿ ಜಾಹೀರಾತುಗಳನ್ನು ಸಾಗಿಸತಕ್ಕದ್ದಲ್ಲ.

6) ಯಾವುದೇ ಸಂಸ್ಥೆಯು ತಂಬಾಕು ಸಂಬಂಧಿತ ಮತ್ತು ಮದ್ಯ ಸಂಬಂಧಿತ ಜಾಹೀರಾತುಗಳನ್ನು ಪ್ರದರ್ಶಿಸತಕ್ಕದ್ದಲ್ಲ ಮತ್ತು ಅಶ್ಲೀಲ ಜಾಹೀರಾತನ್ನು ಪ್ರದರ್ಶಿಸಲು ಅನುಮತಿ ನೀಡತಕ್ಕದ್ದಲ್ಲ.

7) ಯಾವುದೇ ವ್ಯಕ್ತಿ ಅಥವಾ ಜಾಹೀರಾತು ಏಜೆನ್ಸಿಯು ಜಾಹೀರಾತು ಪ್ರದರ್ಶನದ ಬರವಣಿಗೆಯಲ್ಲಿ ಕನ್ನಡ ಭಾಷೆಯ ಬಳಕೆಗೆ ಮೊದಲ ಅದ್ಯತೆ ನೀಡತಕ್ಕದ್ದು ಮತ್ತು ವ್ಯಾಕರಣ ಸಂಬಂಧಿತ ತಪ್ಪುಗಳಿಗೆ ಅವಕಾಶ ನೀಡಬಾರದು. ಜಾಹೀರಾತು ಶೇಕಡ 60 ರಷ್ಟು ಕನ್ನಡ ಭಾಷೆಯನ್ನು ಬಳಸತಕ್ಕದ್ದು.

8) ಮೇಲಿನ ಉಪವಿಧಿಗಳು ಸಾರ್ವಜನಿಕರ ಸಹಭಾಗಿತ್ವದೊಂದಿಗೆ ಖಾಸಗಿ ವ್ಯಕ್ತಿಗಳು ಅವರದೇ ಹಣದಿಂದ ಜಾಹೀರಾತು ಹಕ್ಕುಗಳ ಎದುರಿಗೆ ನಿರ್ಮಿಸುವ ಮೂಲ ಸೌಕರ್ಯಗಳಾದ ಬಸ್ ತಂಗುದಾಣ ಪಾದಚಾರಿ ರಸ್ತೆಗಳು, ಸ್ಕೈವಾಕ್‌ಗಳು, ರಸ್ತೆ ವಿಭಜಕಗಳು ಹಾಗೂ ಈ ರೀತಿಯ ಇತರೆ ನಿರ್ಮಾಣಗಳಿಗೆ ಅನ್ವಯವಾಗತಕ್ಕದ್ದಲ್ಲ.

9) ಜಾಹೀರಾತಿಗೆ ಅರ್ಜಿ ಸಲ್ಲಿಸಿದ 7 ದಿನಗೊಳಗಾಗಿ ಜಾಹೀರಾತು ಶುಲ್ಕದ 12 ಪಟ್ಟು ಮೊಬಲಗನ್ನು ಪಾಲಿಕೆಗೆ ಭದ್ರತಾ ಠೇವಣಿ (Security Deposit) ಯನ್ನು ಇಡ್ಡತಕ್ಕದ್ದು. ಜಾಹೀರಾತು ಶುಲ್ಕ ಪಾವತಿಸುವಲ್ಲಿ/ಯಾವುದೇ ಷರತ್ತು ಉಲ್ಲಂಘನೆಯಾದಲ್ಲಿ ಸದರಿ ಮೊಬಲಗನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

10) ಯಾವುದೇ ಜಾಹೀರಾತು ಫಲಕಕ್ಕೆ ಯಾವುದೇ ಕಾರಣ ನೀಡದೆ ಅನುಮತಿಸುವ ಅಥವಾ ತಿರಸ್ಕರಿಸುವ ಹಕ್ಕು ಆಯುಕ್ತರಿಗೆ ಪ್ರದತ್ತವಾಗಿರುತ್ತದೆ.

11) ಪ್ಲಾಸ್ಟಿಕ್ ಬಳಸುವ ಜಾಹೀರಾತನ್ನು ನಿಷೇಧಿಸಲಾಗಿದೆ.

ಈ ಉಪ ವಿಧಿಗಳಲ್ಲಿ ಹೆಸರಿಸಿರುವ ಶುಲ್ಕ, ದಂಡ ಇತ್ಯಾದಿಗಳನ್ನು ಮೂರು ವರ್ಷಕ್ಕೊಮ್ಮೆ ಪರಿಷ್ಕರಿಸುವ ಮತ್ತು ಹೆಚ್ಚಿಸುವ ಅಧಿಕಾರವು ಸರ್ಕಾರದ ಅನುಮೋದನೆಯೊಂದಿಗೆ ನಗರ ಪಾಲಿಕೆ ಆಯುಕ್ತರ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುತ್ತೆ.

ವಲಯಗಳ ಪಟ್ಟಿ

ವಲಯ–ಎ

ದಾವಣಗೆರೆ ಮಹಾನಗರ ಪಾಲಿಕೆ, ದಾವಣಗೆರೆ	
ವಲಯ 'ಎ' ವ್ಯಾಪ್ತಿಗೆ ಒಳಪಡುವ ರಸ್ತೆಗಳು ಮತ್ತು ರಾಷ್ಟ್ರೀಯ/ರಾಜ್ಯ ಹೆದ್ದಾರಿಗಳ ವಿವರ.	
ಕ್ರ.ಸಂ.	ರಸ್ತೆಯ ಹೆಸರು
	ಜಗಳೂರು ಬಸ್ ನಿಲ್ದಾಣ ಈಶ್ವರ ದೇವಸ್ಥಾನ ಪಕ್ಕ ವಾರ್ಡ್ ನಂ 14
	ಜಿಲ್ಲಾಧಿಕಾರಿಗಳ ಕಛೇರಿ ಪಿ ಬಿ ರಸ್ತೆ ದಾವಣಗೆರೆ ವಾರ್ಡ್ ನಂ 22
	ಅಗ್ನಿಶಾಮಕ ದಳ ಕಛೇರಿ ಪಿ ಬಿ ರಸ್ತೆ ದಾವಣಗೆರೆ ವಾರ್ಡ್ ನಂ 25
	ಅರುಣ ಥಿಯೇಟರ್ ಎದುರು ಪಶುಸಂಗೋಪನ ಇಲಾಖೆ ಪಿ ಬಿ ರಸ್ತೆ ವಾರ್ಡ್ ನಂ 17
	ಬಿ.ಎಸ್.ಎನ್.ಎಲ್ ಆಫೀಸ್ ಪಿ ಬಿ ರಸ್ತೆ ವಾರ್ಡ್ ನಂ 16
	ಎಲ್.ಐ.ಸಿ ಆಫೀಸ್ ಪಿ ಬಿ ರಸ್ತೆ ವಾರ್ಡ್ ನಂ 23
	ರಿಂಗ್ ರಸ್ತೆ ಎಸ್ಸಿ ಎಸ್ಟಿ ಹಾಸ್ಟೆಲ್ ಪಕ್ಕ ವಾರ್ಡ್ ನಂ 1
	ಆರ್‌ಟಿಓ ಸರ್ಕಲ್ ವಾರ್ಡ್ ನಂ 7
	ಬಾಪೂಜಿ ಸಮೂದಾಯ ಭವನ ಸರ್ಕಲ್ ವಾರ್ಡ್ ನಂ 44
	ಶಾಮನೂರು ಪ್ರವೇಶ ದ್ವಾರ ರಾಜಕಾಲುವೆ ಪಕ್ಕ ವಾರ್ಡ್ ನಂ 42
1.	ವಿಮಾನಮಟ್ಟಿ ಸರ್ಕಲ್ ವಾರ್ಡ್ ನಂ 34
2.	ಶಂಕರರ್ ಲೀಲಾ ಹಾಲ್ ಸರ್ಕಲ್ ವಾರ್ಡ್ ನಂ 30
3.	ಡಿಸಿಎಂ ಟೌನ್ ಶಿಪ್ ಬ್ರಡ್ಜ್ ಹತ್ತಿರ ವಾರ್ಡ್ ನಂ 25

4.	ಕಾಳಿದಾಸ ಸರ್ಕಲ್‌ನಿಂದ ಸಾಯಿಬಾಬಾ ದೇವಸ್ಥಾನದವರೆಗೆ ವಾರ್ಡ್ ನಂ 32 & 33
5.	ಹದಡಿ ರಸ್ತೆ ಶನೇಶ್ವರ ದೇವಸ್ಥಾನದಿಂದ ಸ್ಟೇಡಿಯಂ ವೃತ್ತದವರೆಗೆ ವಾರ್ಡ್ ನಂ 37

ವಲಯ 'ಬಿ' ವ್ಯಾಪ್ತಿಗೆ ಒಳಪಡುವ ಮುಖ್ಯ ರಸ್ತೆಗಳು, ವೃತ್ತಗಳ ವಿವರ.	
ಕ್ರ.ಸಂ.	**ರಸ್ತೆಯ ಹೆಸರು**
	ಚಾಮರಾಜಪೆಟೆ ಸರ್ಕಲ್ ನಯನ ಹೋಟೆಲ್ ಪಕ್ಕ ವಾರ್ಡ್ ನಂ 19
	ಚಾಮರಾಜಪೇಟೆ ಸರ್ಕಲ್ ಇಂದಿರಾ ಕ್ಯಾಂಟೀನ್ ಪಕ್ಕ ವಾರ್ಡ್ ನಂ 19
	ಡಿ.ಆರ್.ಆರ್ ಪಾಲಿಟೆಕ್ನಿಕ್ ಕಾಲೇಜ್ ವಾರ್ಡ್ ನಂ 38
	ಡಿಸಿ ಆಫೀಸ್ ಸರ್ಕಲ್ ವಾರ್ಡ್ ನಂ 15
	ಬಾತಿಕೆರೆ ಪಕ್ಕ ದಾವಣಗೆರೆ ಪ್ರವೇಶ ದ್ವಾರ ವಾರ್ಡ್ ನಂ 44
	ಶಾರದಾಂಬ ಸರ್ಕಲ್ ವಾರ್ಡ್ ನಂ 44
	ಐಟಿಐ ಸರ್ಕಲ್ ಟ್ಯಾಕ್ ಪಾರ್ಕ್ ಒಳಗೆ ವಾರ್ಡ್ ನಂ 36
	ಗ್ರಾಮಾಂತರ ಪೋಲೀಸ್ ಠಾಣೆ ಹದಡಿ ರಸ್ತೆ ವಾರ್ಡ್ ನಂ 36
	ಖಾಸಗಿ ಬಸ್ ನಿಲ್ದಾಣ ಶೌಚಾಲಯ ಪಕ್ಕ ವಾರ್ಡ್ ನಂ 25
1.	ಮಾಗನಹಳ್ಳಿ ರಸ್ತೆ ಟಿಪ್ಪು ಸರ್ಕಲ್ ರಿಂಗ್ ರಸ್ತೆ ವಾರ್ಡ್ ನಂ 3
2.	ಅರಳಿಮರ ಸರ್ಕಲ್ ಇಮಾಂ ನಗರ ಪಕ್ಕ ವಾರ್ಡ್ ನಂ 11
3.	ವೆಂಕಟೇಶ್ವರಸರ್ಕಲ್ ಮುತ್ತುಮಾರಿಯಮ್ಮ ದೇವಸ್ಥಾನ ವಾರ್ಡ್ ನಂ 13,21
4.	ಕೆ ಎಸ್ ಆರ್ ಟಿ ಸಿ ಬೇತೂರು ರಸ್ತೆ ಬಸ್ ನಿಲ್ದಾಣ ವಾರ್ಡ್ ನಂ 13
5.	ಬೂದಾಳ್ ರಸ್ತೆ ಪೆಟ್ರೋಲ್ ಬಂಕ್ ಸರ್ಕಲ್ ರಿಂಗ್ ರಸ್ತೆ ವಾರ್ಡ್ ನಂ 5
6.	ಬಾಲಾಜಿ ಸರ್ಕಲ್ ಮೀಡಿಯನ್ ವಾರ್ಡ್ ನಂ 44
7.	ಇನ್ ಡೋರ್ ಸ್ಟೇಡಿಯಂ ರಸ್ತೆ ಕುಂದುವಾಡ ಕೆರೆ ಸರ್ಕಲ್ ವಾರ್ಡ್ ನಂ 44
8.	ಬಿಐಇಟಿ ಸರ್ಕಲ್ ವಾರ್ಡ್ ನಂ 42
9.	ಶಿರಮಗೊಂಡನಹಳ್ಳಿ ರಸ್ತೆ ಸರ್ಕಲ್ ವಾರ್ಡ್ ನಂ 41
10.	ಜಿಲ್ಲಾ ವ್ಯಾಯಾಮ ಶಾಲೆ ಜಿಲ್ಲಾ ಕ್ರೀಡಾಂಗಣ ವಾರ್ಡ್ ನಂ 17
11.	ಸಾಯಿಬಾಬಾ ದೇವಸ್ಥಾನದಿಂದ ಎಸ್.ಎಸ್ ಹೈಟೆಕ್ ಆಸ್ಪತ್ರೆವರೆಗೆ ವಾರ್ಡ್ ನಂ 32 & 33
12.	ಅಂಬೇಡ್ಕರ್ ವೃತ್ತದಿಂದ ಶಿವಪ್ಪ ವೃತ್ತದವರೆಗೆ ವಾರ್ಡ್ ನಂ 25
13.	ಅಂಬೇಡ್ಕರ್ ವೃತ್ತದಿಂದ ಜನತಾ ಲಾಡ್ಜ್ ಮೂಲಕ ಪಿ.ಬಿ ರಸ್ತೆ ವೃತ್ತದವರೆಗೆ ವಾರ್ಡ್ ನಂ 25
14.	ಎಸ್.ಓ.ಜಿ ಕಾಲೋನಿಯಿಂದ ಎಸ್.ಎಸ್ ಹೈಟೆಕ್ ಆಸ್ಪತ್ರೆವರೆಗೆ ವಾರ್ಡ್ ನಂ 31 & 41
15.	ಜೆ.ಹೆಚ್ ಪಟೇಲ್ ನಗರದಿಂದ ಶಾಮನೂರುವರೆಗೆ ವಾರ್ಡ್ ನಂ 43
16.	ಶಾಮನೂರಿನಿಂದ ನಾಗನೂರು ರಸ್ತೆವರೆಗೆ ವಾರ್ಡ್ ನಂ 43

17.	ಶಿರಮಗೊಂಡನಹಳ್ಳಿ ಎನ್.ಹೆಚ್ ಬೌಂಡರಿಯಿಂದ ಹದಡಿ ರಸ್ತೆವರೆಗೆ ವಾರ್ಡ್ ನಂ 41
18.	ವಿದ್ಯಾನಗರ ಮೇನ್ ರಸ್ತೆಯಿಂದ ಆರ್ಟ್ಸ್ ಕಾಲೇಜ್‌ವರೆಗೆ ವಾರ್ಡ್ ನಂ 39
19.	ಡೆಂಟಲ್ ಕಾಲೇಜ್ ರಸ್ತೆಯಿಂದ ಗುಂಡಿ ಮಹಾದೇವಪ್ಪ ಸರ್ಕಲ್‌ವರೆಗೆ ವಾರ್ಡ್ ನಂ 38

ವಲಯ 'ಸಿ' ವ್ಯಾಪ್ತಿಗೆ ಒಳಪಡುವ ಒಳ/ಅಡ್ಡ ರಸ್ತೆಗಳ ವಿವರ.	
ಕ್ರ.ಸಂ.	**ರಸ್ತೆಯ ಹೆಸರು**
	ಜಯದೇವ ಸರ್ಕಲ್ ಟಾಯ್ಲೆಟ್ ಪಕ್ಕ ವಾರ್ಡ್ ನಂ 25
	ಬೇತೂರು ರಸ್ತೆ ರಿಂಗ್ ರಸ್ತೆ ರಾಜಕಾಲುವೆ ಹತ್ತಿರ ಎಡ ಬಲ ವಾರ್ಡ್ ನಂ 13
	ಚಿಕ್ಕಮಣಿ ದೇವರಾಜ್ ಅರಸ್ ಬಡಾವಣೆ ಡಾಬಾ ಪಾರ್ಕ್ ವಾರ್ಡ್ ನಂ 34
	ನಿಟ್ಟುವಳ್ಳಿಯಿಂದ ಕಾಳಿದಾಸ ಸರ್ಕಲ್‌ವರೆಗೆ ವಾರ್ಡ್ ನಂ 32 & 33
1.	ಶಿವಪ್ಪ ವೃತ್ತದಿಂದ ತ್ರಿಶೂಲ್ ಟಾಕೀಸ್‌ವರೆಗೆ ವಾರ್ಡ್ ನಂ 25 & 27
2.	ರಾಮನಗರ ಮುಖ್ಯ ರಸ್ತೆ ವಾರ್ಡ್ ನಂ 41
3.	ಶಿವಪಾರ್ವತಿ ಬಡಾವಣೆ ಮುಖ್ಯ ರಸ್ತೆ ವಾರ್ಡ್ ನಂ 41 & 43

ಅನುಬಂಧ–1

ಜಾಹೀರಾತು ಶುಲ್ಕ ಮತ್ತು ನೆಲಬಾಡಿಗೆ ದರ ಪಟ್ಟಿ

ಕ್ರ. ಸಂ.	ಜಾಹೀರಾತಿನ ಮಾದರಿ	ಜಾಹೀರಾತು ಶುಲ್ಕ ಪ್ರತಿ ದಿನಕ್ಕೆ ಚ.ಮೀ	ಜಾಹೀರಾತು ಶುಲ್ಕ ದರ ಪ್ರತಿ ಚ.ಮೀ. ದಿನಕ್ಕೆ ರೂ.ಗಳಲ್ಲಿ	ತಿಂಗಳ ನೆಲಬಾಡಿಗೆ ಪ್ರತಿ ಚದರ ಮೀಟರ್‌ಗೆ			
				ಹೋರ್ಡಿಂಗ್ಸ್		ಪೋಲ್ಯಾಡ್	
I	**ಫಲಕಗಳು/ ಕಾಂಟಿಲಿವರ್ (ಶಾಶ್ವತ)**		**ಪ್ರತಿ ದಿನಕ್ಕೆ**	**ವಲಯ**	**ದರ ರೂ**	**ವಲಯ**	**ದರ ರೂ.**
1	ಪ್ರಕಾಶಿತವಲ್ಲದಿರುವ	–	50–00				
2	ಪ್ರಕಾಶಿತವಿರುವ	–	110–00	**ಎ**	**300–00**	**ಎ**	**250–00**
3	ನಿಯಾನ್	–	120–00	**ಬಿ**	**250–00**	**ಬಿ**	**240–00**
4	ಟ್ರೈವಿಜ್	–	160–00	**ಸಿ**	**200–00**	**ಸಿ**	**230–00**
5	ಎಲೆಕ್ಟ್ರಾನಿಕ್ಸ್ ಡಿಜಿಟಲ್ (Single)	–	150–00				
6	ಎಲೆಕ್ಟ್ರಾನಿಕ್ಸ್ ಡಿಜಿಟಲ್ (Multiple)	–	300–00				
7	ಪೋಲ್ ಆಡ್ (Pole Ad) Single Display,	–	85–00				
8	ಪೋಲ್ ಆಡ್ (Pole Ad) Multiple Display	–	170–00				
9	ಸ್ವಫಲಕ (ರೇಡಿಯಂ)	–	75–00				
10	ಇತರೇ ಜಾಹೀರಾತು	–	70–00				
11	ಸಿನಿಮಾ ಮಂದಿರಗಳ ಆವರಣ ಮತ್ತು ಮುಂಭಾಗ	50–00	–	–			

II			**ಪ್ರತಿ ತಿಂಗಳಿಗೆ**	
1	ಅಂಗಡಿ ಜಾಹೀರಾತು (ಪ್ರಕಾಶಿತ)	–	75–00	
2	ಅಂಗಡಿ ಜಾಹೀರಾತು (ಪ್ರಕಾಶಿತವಲ್ಲದಿರುವುದು)	–	50–00	
3	ಬಸ್ ತಂಗುದಾಣ	–	120–00	
4	ಸ್ಲೈಡ್ ಮತ್ತು ಕಿರುಚಿತ್ರಗಳು Singal slides ಸ್ಲೈಡ್ ಮತ್ತು ಕಿರುಚಿತ್ರಗಳು Multiple slides	–	800–00 900–00	
5	ಮಾರ್ಗ ಸೂಚಿಗಳು ಫಲಕಗಳು (ಕ್ಯಾಂಟಿಲಿವರ್)	–	80–00	
6	ಹೊಳೆಯುವ ಸಂಕೇತವುಳ್ಳ ಫಲಕಗಳು	–	120–00	
7	ಕಮಾನುಗಳು	–	100–00	
8	ಎಲೆಕ್ಟ್ರಾನಿಕ್ ಮೂಲಕ ಚಲಿಸುವ ಪ್ರದರ್ಶನಗಳು	–	250–00	
III	ಮೊಬೈಲ್ ಪ್ರತಿ ದಿನಕ್ಕೆ		ಪ್ರದರ್ಶನ	
1	ಆಟೋ ಪ್ಯಾನೆಲ್ (ವಾಹನಗಳ ಮೇಲಿನ ಜಾಹೀರಾತು) ಪ್ರತಿ ವಾಹನಕ್ಕೆ ಚ.ಮೀ.	–	125–00	
2	ಬ್ಯಾನರ್‌ಗಳು **(ಪ್ರತಿ ದಿನಕ್ಕೆ)**	100–00	–	**ನೆಲಬಾಡಿಗೆ ಮೇಲಿನಂತೆ ಅನ್ವಯಿಸತಕ್ಕದ್ದು.**
IV	ಗಾಳಿ ತುಂಬಿರುವ ಮಾಧ್ಯಮಗಳು (ಬಲೂನ್)	–	– –	ಬಲೂನ್ ಗಾತ್ರ 3 ಮೀ. ವರೆಗೆ ರೂ.200/ದಿನಕ್ಕೆ ಬಲೂನ್ ಗಾತ್ರ 3 ಮೀ. ನಿಂದ 10 ಮೀ. ವರೆಗೆ ರೂ.500/ದಿನಕ್ಕೆ

IV	ಎಲ್.ಇ.ಡಿ ಪ್ರದರ್ಶನ		
		ಪ್ರತಿ ನಿಮಿಷಕ್ಕೆ	ಪ್ರತಿ ದಿನಕ್ಕೆ ಚ.ಮೀ.
I	ಎಲ್.ಇ.ಡಿ. ಮೂಲಕ ಪ್ರದರ್ಶನಗೊಳ್ಳುವ ಎಲ್ಲಾ ಉದ್ದೇಶಿತ ಜಾಹೀರಾತುಗಳಿಗೆ ಚಲಿಸುವ ವಾಹನಗಳಿಗೆ/ಪ್ರತಿ ದಿನಕ್ಕೆ.	–	ರೂ.250.00
II	ಕಟ್ಟಡಗಳ ಮೇಲೆ ಎಲ್.ಇ.ಡಿ. ಟಿವಿ ಮೂಲಕ ಪ್ರದರ್ಶನ	–	ರೂ.700.00
III	ದಾವಣಗೆರೆ ಸ್ಮಾರ್ಟ್ ಸಿಟಿ ಲಿ. ನಿಂದ ಅಳವಡಿಸಿರುವ ಎಲ್‌ಇಡಿ ಸ್ಕ್ರೀನ್‌ನಲ್ಲಿ ಪ್ರದರ್ಶಿತಗೊಳ್ಳುವ ಜಾಹೀರಾತುಗಳು ಪ್ರತಿ ನಿಮಿಷಕ್ಕೆ ಮತ್ತು ಪ್ರತಿ ತಿಂಗಳಿಗೆ ಒಳಗೊಂಡಂತೆ 6.00 am to 8.00 am 8.00 am to 2.00 pm 2.00 pm to 6.00 pm 6.00 pm to 10.00 pm 10.00 pm to 6.00 am	 ರೂ.60.00 ರೂ.90.00 ರೂ.90.00 ರೂ.120.00 ರೂ.80.00	–

ಷರಾ: 1. ಮೇಲಿನ ದರಗಳು ಪ್ರತಿ 3 ವರ್ಷಗಳಿಗೊಮ್ಮೆ ಶೇಕಡ 15 ರಷ್ಟು ಪರಿಷ್ಕರಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

2. ಖಾಸಗಿ ಸ್ಥಳಗಳಲ್ಲಿ ಅಳವಡಿಸುವ ಫಲಕಗಳಿಗೆ ನೆಲಬಾಡಿಗೆ ಅನ್ವಯಿಸುವುದಿಲ್ಲ.

Hoardings **ಶಾಶ್ವತ ಫಲಕ** (20 ‘ x 10 ‘ = 18.58 sqm) **ಪ್ರತಿ ತಿಂಗಳಿಗೆ**

zone	Advertisement Fee	G.Rent	Total
A	27,870	5,574	33,444
B	27,870	4,645	32,515
C	27,870	3,716	31,586

Pole Ads **ಪೋಲ್ ಆಡ್** (3 ‘ x 5 ‘ = 1.39 sqm) **ಪ್ರತಿ ತಿಂಗಳಿಗೆ**

zone	Advertisement Fee	G.Rent	Total
A	3,545	347	3,892
B	3,545	334	3,879
C	3,545	320	3,865

ಅನುಬಂಧ–2

ಎ.ಬಿ.ಸಿ ವಲಯಗಳ ಫಲಕಗಳ ಎತ್ತರ ಮತ್ತು ಅಳತೆಯ ವಿವರ

ಕ್ರ. ಸಂ.	ವಲಯ	ಹೋರ್ಡಿಂಗ್ಸ್ (ದೊಡ್ಡಗಾತ್ರ) ಮೀಟರ್‌ನಲ್ಲಿ	ಪೋಲ್ಯಾಡ್ಸ್ (ಚಿಕ್ಕಗಾತ್ರ) ಮೀಟರ್‌ನಲ್ಲಿ	ಹೋರ್ಡಿಂಗ್ಸ್‌ನ ಮೇಲಂಚು ನೆಲದಿಂದ ಇರಬೇಕಾದ ಗರಿಷ್ಟ ಎತ್ತರ		ಹೋರ್ಡಿಂಗ್ಸ್ ಫಲಕದ ಕೆಳಅಂಚು ನೆಲದಿಂದ ಇರಬೇಕಾದ ಕನಿಷ್ಟ ಎತ್ತರ
				ನೆಲದಿಂದ	ಮೇಲ್ಚಾವಣಿ ಮೇಲೆ (ನೆಲದಿಂದ ಅಳತೆ)	
1	ಎ	6.0 x 3.0	1.0 x 1.5	7.00	12.00	3.0
2	ಬಿ	7.0 x4.0	1.0 x 1.5	11.00	15.00	3.0
3	ಸಿ	9.0 x4.5	1.0 x 1.5	12.00	15.00	3.0

ಅನುಬಂಧ–3

Annexure -3

ದಾವಣಗೆರೆ ಮಹಾ ನಗರ ಪಾಲಿಕೆ

Davanagere Mahanagara palike

Sl No. / ಕ್ರಮ ಸಂಖ್ಯೆ:

ಅರ್ಜಿ (ವರ್ಗಾಯಿಸುವಂತಿಲ್ಲ)

Application (Non-transferable)

ಕೆ ಎಂ ಸಿ ಕಾಯಿದೆ 1976, ಸಎಕ್ಷನ್ 135 ಮತ್ತು 2017 ರ ಜಾಹೀರಾತು ಬೈಲಾಗಳ ಅಡಿಯಲ್ಲಿ ಜಾಹೀರಾತು ಫಲಕಗಳ ಅನುಮತಿಗಾಗಿ ಸಲ್ಲಿಸಿರುವ ಅರ್ಜಿ ನಮೂನೆ ಮತ್ತು ವಿಧಾನ

Application for grant of Permission for display of advertisement under Section 135 of the karnataka Municipal Corporation Act 1976 and New Advertisement Bye-law 2025.

1. ಅರ್ಜಿದಾರರ ಹೆಸರು ಮತ್ತು ವಿಳಾಸ Name of the Applicant and Address.	
2. ಜಾಹೀರಾತು ಏಜೆನ್ಸಿ ನೋಂದಾವಣೆ ಸಂಖ್ಯೆ ಮತ್ತು ದಿನಾಂಕ ಜೆರಾಕ್ಸ್ ಪ್ರತಿ ಲಗತ್ತಿಸುವುದು) Advertisemnet agency Enrolment No. & Date (Xerox copy to be enclosed)	
3. I. ಪರವಾನಿಗೆಯನ್ನು ಪಾಲಿಕೆಯ ಸ್ವತ್ತು/ಖಾಸಗಿ ನಿವೇಶನ ಕಟ್ಟಡದ ವಿವರಗಳನ್ನು ನೀಡಿ. Wherher Permission is Sought on Mahanagar palike Land/Private and /Building ? Please Mention Detials of the location II. ಮಾಲೀಕರು ಒಪ್ಪಿಗೆ ಪಡೆಯಲಾಗಿದೆಯೇ? ಹಾಗಿದ್ದಲ್ಲಿ ದಾಖಲಾತಿಗಳನ್ನು ಲಗತ್ತಿಸುವುದು. Wherher consentof the owner is taken? If so Documents to enclosed	

Application Fee Rs. 500.00
(Non Refundable)

4. I. ಹಿಂದೆ ಮಹಾನಗರ ಪಾಲಿಕೆಯಿಂದ ಖಾಸಗಿ ಸ್ವತ್ತುಗಳ ಮೇಲೆ ಜಾಹೀರಾತು ಫಲಕ ಅಳವಡಿಸಲು ಅನುಮತಿ ಪಡೆಯಲಾಗಿದೆಯೇ? ಹಾಗಿದ್ದಲ್ಲಿ ಅಂತಹ ಜಾಹೀರಾತು ಫಲಕಗಳ ಸಂಖ್ಯೆಯನ್ನು ನೀಡುವುದು.

Whether any Permission has been obtained ny the applicant from DCC for any other hoarding in the past? If so mention number of such advertisement hoardings.

ಹೌದು	ಇಲ್ಲ	yes	no

II. ಪ್ರತಿ ಫಲಕದ ಲೈಸೆನ್ಸ್ ನಂಬರ್ ಮತ್ತು ದಿನಾಂಕ ವಿವರಗಳನ್ನು ಲಗತ್ತಿಸಲಾಗಿದೆಯೇ?

Whether the detials of each hoarding licence number & date are enclosed

ಹೌದು	ಇಲ್ಲ	yes	no

III. ಅನುಮತಿಸಿದ ಪ್ರತಿ ಫಲಕಕ್ಕೆ ಪೂರ್ಣವಾಗಿ ತೆರಿಗೆಗಳನ್ನು ಪಾವತಿ ಮಾಡಲಾಗಿದೆಯೇ? ಹಾಗಿದ್ದಲ್ಲಿ ವಿವರಗಳನ್ನು ನೀಡುವುದು.

Whether up to date tax has been paid for the permitted hoardings? If so mention Parcticulars of the same.

ಹೌದು	ಇಲ್ಲ	yes	no

ಸೂಚನೆ : Note

ಮೇಲಿನ (i), (ii) ಮತ್ತು (iii) ನೇ ಅಂಕಣಗಳಿಗೆ ಹೌದು ಎಂದಾದಲ್ಲಿ ಪ್ರತ್ಯೇಕವಾಗಿ ದಾಖಲಾತಿ ಸಲ್ಲಿಸುವುದು

If yes for column (i), (ii) and (iii) above, seprate statement shall be enclosed.

5. ಅನುಮತಿ ಕೋರಿರುವ ಫಲಕಗಳ ಮೇಲಿನ ಜಾಹೀರಾತು ವಿವರಗಳು **Details of oth Hoarding advertisement being applied for**			
ವಿವರಗಳು **Particulars**	ವಿವರ **Description**	ಸ್ಥಳ (ವಾರ್ಡ್ ಹೆಸರು ಮತ್ತು ಸಂಖ್ಯೆ ಸೇರಿ) **Location Inclusive of ward No&Name)**	ಅಡಿಗಳಲ್ಲಿ ಗಾತ್ರ
i) ಭೂಮಿ, ಕಟ್ಟಡ, ಗೋಡೆ ಇತ್ಯಾದಿಗಳ ಮೇಲೆ ಅಳವಡಿಸುವ ಪ್ರಕಾಶ ರಹಿತ ಜಾಹೀರಾತು Non-Illuminated advertisement on land building wall etc.			ಉದ್ದ . . . . . . Length . . . . . . ಅಗಲ . . . . . . Width . . . . . . ಎತ್ತರ . . . . . . Height . . . . .
ii) ಭೂಮಿ, ಕಟ್ಟಡ, ಗೋಡೆ ಇತ್ಯಾದಿಗಳ ಮೇಲೆ ಅಳವಡಿಸುವ ಪ್ರಕಾಶಿತ ಜಾಹೀರಾತು Illuminated advertisement on land building wall etc.			ಉದ್ದ . . . . . . Length . . . . . . ಅಗಲ . . . . . . Width . . . . . . ಎತ್ತರ . . . . . . Height . . . . .
iii) ಭೂಮಿ, ಕಟ್ಟಡ, ಗೋಡೆ ಇತ್ಯಾದಿಗಳ ಮೇಲಿನ ನಿಯಾನ್ ಚಿಹ್ನೆ Neon sign on land building wall etc			ಉದ್ದ . . . . . . Length . . . . . . ಅಗಲ . . . . . . Width . . . . . . ಎತ್ತರ . . . . . . Height . . . . .

v) ಭೂಮಿ, ಕಟ್ಟಡ, ಗೋಡೆ ಇತ್ಯಾದಿಗಳ ಮೇಲಿನ ಗ್ಲೊ ಚಿಹ್ನೆ Glow sign on land building wall etc			ಉದ್ದ . . . . . . Length . . . . . . ಅಗಲ . . . . . . Width . . . . . . ಎತ್ತರ . . . . . . Height . . . . .
vi) ಇತರೆ Others			ಉದ್ದ . . . . . . Length . . . . . . ಅಗಲ . . . . . . Width . . . . . . ಎತ್ತರ . . . . . . Height . . . . .

6. ಇತರೆ ತರಹದ ಜಾಹೀರಾತುಗಳ ವಿವರ (ಜಾಹೀರಾತು ಫಲಕ ಹೊರತುಪಡಿಸಿ)

Details of other form of advertisement (Other than Hoardings)

ವಿವರಗಳು Particulars	ವಿವರ Description	ಸ್ಥಳ (ವಾರ್ಡ್ ಹೆಸರು ಮತ್ತು ಸಂಖ್ಯೆ ಸೇರಿ) Location Inclusive of ward No&Name)	ಅಡಿಗಳಲ್ಲಿ ಗಾತ್ರ
i) ಭೂಮಿ, ಕಟ್ಟಡ, ಗೋಡೆ ಇತ್ಯಾದಿಗಳ ಮೇಲೆ ಅಳವಡಿಸುವ ಪ್ರಕಾಶ ರಹಿತ ಜಾಹೀರಾತು Non-Illuminated advertisement on land building wall etc.			ಉದ್ದ . . . . . . Length . . . . . . ಅಗಲ . . . . . . Width . . . . . . ಎತ್ತರ . . . . . . Height . . . . .
ii) ಭೂಮಿ, ಕಟ್ಟಡ, ಗೋಡೆ ಇತ್ಯಾದಿಗಳ ಮೇಲೆ ಅಳವಡಿಸುವ ಪ್ರಕಾಶಿತ ಜಾಹೀರಾತು Illuminated advertisement on land building wall etc.			ಉದ್ದ . . . . . . Length . . . . . . ಅಗಲ . . . . . . Width . . . . . . ಎತ್ತರ . . . . . . Height . . . . .

iii) ಭೂಮಿ, ಕಟ್ಟಡ, ಗೋಡೆ ಇತ್ಯಾದಿಗಳ ಮೇಲಿನ ನಿಯಾನ್ ಚಿಹ್ನೆ Neon sign on land building wall etc			ಉದ್ದ . . . . . . Length . . . . . . ಅಗಲ . . . . . . Width . . . . . . ಎತ್ತರ . . . . . . Height . . . . .
iv) ಭೂಮಿ, ಕಟ್ಟಡ, ಗೋಡೆ ಇತ್ಯಾದಿಗಳ ಮೇಲಿನ ಗ್ಲೋ ಚಿಹ್ನೆ Glow sign on land building wall etc			ಉದ್ದ . . . . . . Length . . . . . . ಅಗಲ . . . . . . Width . . . . . . ಎತ್ತರ . . . . . . Height . . . . .
v) ವಾಹನಗಳ ಮೇಲೆ ಅಳವಡಿಸುವ ಪ್ರಕಾಶ ರಹಿತ ಜಾಹೀರಾತುಗಳ ವಿವರ Non-Illuminated advertisements carried on back of the Vehicles			ಉದ್ದ . . . . . . Length . . . . . . ಅಗಲ . . . . . . Width . . . . . . ಎತ್ತರ . . . . . . Height . . . . .
vi) ವಾಹನಗಳ ಮೇಲೆ ಅಳವಡಿಸುವ ಪ್ರಕಾಶಮಾನ ಜಾಹೀರಾತುಗಳ ವಿವರ Illuminated advertisements carried on back of the Vehicles			ಉದ್ದ . . . . . . Length . . . . . . ಅಗಲ . . . . . . Width . . . . . . .ಎತ್ತರ . . . . . . Height . . . . .

ಇತರೆ ತರಹದ ಜಾಹೀರಾತುಗಳ ವಿವರ (ಜಾಹೀರಾತು ಫಲಕ ಹೊರತುಪಡಿಸಿ)

Details of other form of advertisement (Other than Hoardings)

8. ಪ್ರದರ್ಶಿಸಬೇಕಾಗಿರುವ ಜಾಹೀರಾತುಗಳಿಗೆ ಮತ್ತು ಫಲಕಗಳ ಸ್ಥಳಕ್ಕೆ ಸಂಬಂಧಪಟ್ಟ/ನಕ್ಷೆ/ಕೀಮ್ಯಾಪ್ ಮತ್ತು ಜಾಹೀರಾತು ಸಂದೇಶದ ಇತ್ಯಾದಿ ವಿವರ ಅರ್ಜಿ ನಮೂನೆ ಜೊತೆಗೆ ಲಗತ್ತಿಸುವುದು.

The applicant shall enclose sketch /key may of the hoarding location and the contents of advertisement to be displayed.

ಸೂಚನೆ / Note

ನಕ್ಷೆಯಲ್ಲಿ ನಮೂದಿಸಿರುವ ಫಲಕಕ್ಕೆ ಅನುಮೋದಿಸಿರುವ ಸ್ಥಳದಿಂದ ಜಾಹೀರಾತು ಫಲಕವನ್ನು ಬೇರೆ ಸ್ಥಳಕ್ಕೆ ಬದಲಾಯಿಸಿದಲ್ಲಿ ಅಂತಹ ಫಲಕವನ್ನು ಅನಧಿಕೃತವೆಂದು ಪರಿಗಣಿಸಲಾಗುವುದು ಮತ್ತು ಅಂತಹ ಫಲಕವನ್ನು ಸೂಚನಾ ಪತ್ರ ನೀಡದೇ ತೆರವುಗೊಳಿಸಲಾಗುವುದು.

The displayed advertisment is shifted from the specified /approved place mentioned in the key map location, the same become un-authorized and shall removed without notice.

9. ಅರ್ಜಿದಾರರು ನೂತನ ಜಾಹೀರಾತು ಫಲಕ ಪರವಾನಿಗೆಗಾಗಿ ಅರ್ಜಿ ನಮೂನೆಯ ಜೊತೆಗೆ ಈ ಕೆಳಗಿನ ಇತರೆ ದಾಖಲಾತಿಗಳನ್ನು ಕಡ್ಡಾಯವಾಗಿ ಲಗತ್ತಿಸುವುದು.

applicant shall compulsorily produce following documents while seeking permission for hoarding advertisment

ಜಾಹೀರಾತು ಫಲಕವನ್ನು ಅಳವಡಿಸಲಾಗುವ ನಿವೇಶನ/ಸ್ವತ್ತಿನ (ಕಟ್ಟಡದ ಚಾಲ್ತಿ ವರ್ಷಕ್ಕೆ ಕಂದಾಯ ಪಾವತಿಸಿರುವ ಆಸ್ತಿ ತೆರಿಗೆಯ ರಸೀದಿಯ ಪ್ರತಿ.

The latest Property tax paid receipt from the owner of the building/site

ಸ್ವತ್ತಿನ ಮಾಲೀಕರಿಂದ ಪಡೆದ ನಿರಾಕ್ಷೇಪಣಾ ಪತ್ರವನ್ನು ರೂ. 20.00 ಛಾಪಾ ಕಾಗದದಲ್ಲಿ ನೋಟರಿಯವರಿಂದ ದೃಢೀಕರಿಸಿದ ಪ್ರಮಾಣ ಪತ್ರ.

The Building /site owner's no objection certificate in the from of an affidavit duly executed on a Non judicial stamp paper of Rs. 20.00 and notarized.

ದಾವಣಗೆರೆ ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರವರಿಂದ ಸ್ವತ್ತಿನ (ಕಟ್ಟಡದ) ದೃಢತೆಯ ಬಗ್ಗೆ ದೃಢೀಕರಣ ಪತ್ರ

The structural stability certificate issued by the concerned executiveEngineer of Davanagere City Corporation

ಜಾಹೀರಾತು ಅಳವಡಿಸುವ ಸ್ಥಳದ ವಿವರವಾದ ಕೀ ಮ್ಯಾಪ್ ಮತ್ತು ನಕ್ಷೆ ಮತ್ತು ಸಂದೇಶದ ವಿವರ

The sketch/key map of the location along with contents of the advertisement it displayed.

10. ನಗರ ಪಾಲಿಕೆಯಿಂದ ಅರ್ಜಿದಾರರಿಗೆ ತಿಳುವಳಿಕೆ ನೀಡಿದ ತಕ್ಷಣ ಜಾಹೀರಾತು ತೆರಿಗೆಯನ್ನು ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಸಲ್ಲಿಸತಕ್ಕದ್ದು ಪಾಲಿಕೆಗೆ ಜಾಹೀರಾತು ತೆರಿಗೆಯನ್ನು ಪಾವತಿಸಿದ ನಂತರ ಪರವಾನಿಗೆ ಪತ್ರವನ್ನು ನೀಡಲಾಗುವುದು.

The applicant hereby under takes to deposit the advertisement tax by way of Demand draft immediately on receipt of the intimation from Davanagere City Corporation. The Permission shall be issued only after deposit after deposit of the advertisment tax to Davanagere Mahanagara palike.

ಸೂಚನೆ / Note

12) ಅರ್ಜಿ ನಮೂನೆಯಲ್ಲಿ ಈ ಕೆಳಗಿನ ಕರಾರುಗಳನ್ನು ಪಾಲಿಸದೇ ಇದ್ದಲ್ಲಿ ಅರ್ಜಿಯು ಅಧಿಕೃತವೆಂದು ಭಾವಿಸಲಾಗುವುದಿಲ್ಲ.

The applicant shall not be considered as valid application if the following conditions are not fulfilled.

(i) ಅಂಕಣ 9 ರಲ್ಲಿ ಎಲ್ಲಾ ದಾಖಲಾತಿಗಳನ್ನು ಕಡ್ಡಾಯವಾಗಿ ಪೂರ್ತಿಗೊಳಿಸುವುದು/ಸಲ್ಲಿಸುವುದು.

All Documents mentioned in column 9 above should be furnished/ submitted.

(ii) ಭರ್ತಿ ಮಾಡಿದ ಅರ್ಜಿ ನಮೂನೆಯನ್ನು ನಿಗಧಿಪಡಿಸಿದ ದಾಖಲೆಗಳೊಂದಿಗೆ ಖುದ್ದಾಗಿ ಈ ಮುಂದೆ ನಮೂದಿಸಲಾದ ವಿಳಾಸದ ಕಛೇರಿಯಲ್ಲಿ ಮಾತ್ರ ಸಲ್ಲಿಸತಕ್ಕದು. ಆಯುಕ್ತರು, ದಾವಣಗೆರೆ ಮಹಾನಗರ ಪಾಲಿಕೆ ಇಲ್ಲಿ ಬೆಳಿಗ್ಗೆ 10.00 ರಿಂದ ಸಂಜೆ 5:30 ರವರೆಗೆ ಕಛೇರಿ ವೇಳೆಯಲ್ಲಿ ಸಲ್ಲಿಸಿ ಸ್ವೀಕೃತಿಯನ್ನು ಪಡೆಯತಕ್ಕದ್ದು.

Duly filled application with necessary enclosures should be submitted by hand delivery to th following prescribed address only.The commissioner (Advertisment) Mahanagra Palike officers. (Annex Building) Between 10:00 A.M to 5:30 P.M During working hours necessary acknowledgement shall be obtained.

(iii) ಪ್ರತಿ ಜಾಹೀರಾತು ಫಲಕಗಳಿಗೆ ಪ್ರತ್ಯೇಕವಾದ ಅರ್ಜಿಯನ್ನು ಸಲ್ಲಿಸತಕ್ಕದ್ದು.

Individual application for each hoarding to be submitted separately.

(iv) ಇತರೆ ಯಾವುದೇ ಕಛೇರಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.

The application submitted to any other office will not be considered.

12. ಪರವಾನಿಗೆಯನ್ನು ವರ್ಷದ ಯಾವುದೇ ಅವಧಿಯಲ್ಲಿ ನೀಡಿದ್ದರೂ ಸಹಿತ 31 ಮಾರ್ಚ್ ಅಂತ್ಯಕ್ಕೆ ಕೊನೆಗೊಳ್ಳುವುದು ಪರವಾನಗಿ ಏಪ್ರಿಲ್ 01 ರಿಂದ 31 ಮಾರ್ಚ್‌ವರೆವಿಗೂ ಚಾಲ್ತಿಯಲ್ಲಿರುವುದು.

The permission shall be valid from 1st April to 31 March not with standing anything to the contrary, the Permission issued any time during the yar shal expiry by 31st march

13. ಅರ್ಜಿದಾರರು ಜಾಹೀರಾತು ಪ್ರದರ್ಶಿಸುವಲ್ಲಿ ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಬಳಸತಕ್ಕದ್ದು.

The applicant shall include Kannada Language in displaying the advertisements.

14. ಅರ್ಜಿದಾರರ ಅರ್ಜಿಯಲ್ಲಿ ಪತ್ರ ವ್ಯವಹಾರಕ್ಕೆ ಪೂರ್ಣ ವಿಳಾಸವನ್ನು ಖಚಿತವಾಗಿ ನಮೂದಿಸುವುದು. ಪಾಲಿಕೆಯಿಂದ ಕಳುಹಿಸುವ ಯಾವುದೇ ತಿಳುವಳಿಕೆಯನ್ನು ಸ್ವೀಕರಿಸದೇ ವಾಪಸ್ಸು ಬಂದಲ್ಲಿ ಸದರಿ ತಿಳುವಳಿಕೆ ಪತ್ರವನ್ನು ಅರ್ಜಿದಾರರು ಅರ್ಜಿಯಲ್ಲಿ ಸಲ್ಲಿಸಿರುವ ವಿಳಾಸದ ಮನೆಯ ಗೋಡೆ ಮೇಲೆ ಪ್ರಕಟಿಸಲಾಗುವುದು ಹಾಗೂ ಸದರಿ ತಿಳುವಳಿಕೆ ಪತ್ರವನ್ನು ಸ್ವೀಕೃತವಾಗಿದೆ ಎಂದು ಭಾವಿಸಲಾಗುವುದು.

The applicant shall specify the addres for receipt of all correspondence sent by DCC in Case of refusal to receive any communication issued by DCC the same will be affixed on the premises of the address furnished by the applicant in this application and the same shall be considerd as sufficient service.

ದಾವಣಗೆರೆ **Davanagere** ದಿನಾಂಕ **Date**	ಅರ್ಜಿದಾರರ ಹೆಸರು ಮತ್ತು ಸಹಿ **Name and Signature of the applicant**

ಸ್ವೀಕೃತಿ (ಅರ್ಜಿದಾರರ ಪ್ರತಿ)

ACKNOWLEDGEMENT (Candidate Copy)

ನೂತನ ಜಾಹೀರಾತು ಫಲಕದ ಪರವಾನಗಿ ಕುರಿತು ಮೆ: _____ ದಿನಾಂಕ: _____ ಸಮಯ_____ ಅರ್ಜಿ ನಮೂನೆಯನ್ನು ಈ ಕೆಳಕಂಡ ದಾಖಲೆಗಳೊಂದಿಗೆ ಸ್ವೀಕರಿಸಲಾಯಿತು.

Received the application No. ……. for grant of fresh permission for display advertisement from Sri/M/s ……on…… Time……..along with the following enclosures.

i	ಜಾಹೀರಾತು ಏಜೆನ್ಸಿಯ ನೋದಾವಣೆ ಪತ್ರ/ನವೀಕರಣ ಪತ್ರ	ಹೌದು	ಇಲ್ಲ
	Copy of the Agency enrollment letter/renewal letter	**yes**	**no**
ii	ಕಟ್ಟಡದ/ನಿವೇಶನದ ಮಾಲೀಕರಿಂದ ರೂಪಾಯಿ 20.00 ಛಾಪ ಕಾಗದದ (**NonJudicial stamp Paper)** ಮೇಲೆ ಅಫಿಡವಿಟ್ ರೂಪದಲ್ಲಿ ಅಕ್ಷೇಪಣೆ ರಹಿತ ಪ್ರಮಾಣ ಪತ್ರ ಸಲ್ಲಿಸುವುದು.	ಹೌದು	ಇಲ್ಲ
	The Building /Site owner's No abjection Certificate in the from od an affidavit duly executed on a Non judicial stamp paper of Rs. 20.00 and notarized	**yes**	**no**
iii	ಈ ಹಿಂದೆ ಪರವಾನಿಗೆ ಪಡೆದ ಪತ್ರದ ಪ್ರತಿ	ಹೌದು	ಇಲ್ಲ
	Copy of the Pervious Permission, if any	**yes**	**no**
iv	ಈ ಹಿಂದೆ ಪರವಾನಿಗಿ ನೀಡಿದ ಜಾಹೀರಾತು ಫಲಕದ ತೆರಿಗೆ ಪಾವತಿಸಿದ ರಶೀದಿ.	ಹೌದು	ಇಲ್ಲ
	Copy of the Pervious tax paid receipt for the Previous Permission obtained if any	**yes**	**no**
v	ಜಾಹೀರಾತು ಫಲಕ ಅಳವಡಿಸುವ ಸ್ಥಳದ ವಿವರವಾದ ಕೀ ಮ್ಯಾಪ್ ಮತ್ತು ನಕ್ಷೆ	ಹೌದು	ಇಲ್ಲ
	Key map and sketch of the location	**yes**	**no**
vi	ಜಾಹೀರಾತು ಸಂದೇಶದ ವಿವರ	ಹೌದು	ಇಲ್ಲ
	Detials of contents of advertisement	**yes**	**no**
vii	ಕಟ್ಟಡದ/ನಿವೇಶನದ ಮಾಲೀಕರಿಂದ ಪ್ರಸಕ್ತ ಸಾಲಿನ ಆಸ್ತಿ ತೆರಿಗೆ ಪಾವತಿಸಿದ ರಶೀದಿ ಲಗತ್ತಿಸುವುದು.	ಹೌದು	ಇಲ್ಲ
	The latest Property tax paid receipt from the owner of the building/site	**yes**	**no**
viii	ದಾವಣಗೆರೆ ಮಹಾನಗರ ಪಾಲಿಕೆಯ ಸಂಬಂಧಪಟ್ಟ ಕಾರ್ಯ ಪಾಲಕ ಅಭಿಯಂತರವರಿಂದ ಸ್ವತ್ತಿನ ಕಟ್ಟಡ ಸದೃಢತೆಯ ಪ್ರಮಾಣ ಪತ್ರ.	ಹೌದು	ಇಲ್ಲ
	The structural stability certificate issued by the concerned Executive Enggineer of DCC	**yes**	**no**

ಸ್ಥಳ : ದಾವಣಗೆರೆ
Palce : Davanagere
ದಿನಾಂಕ:
Date

ಆಯುಕ್ತರು (ಜಾಹೀರಾತು) ರವರ ಪರವಾಗಿ
ದಾವಣಗೆರೆ ಮಹಾನಗರ ಪಾಲಿಕೆ
For Commissioner
Davanagere Mahanagara Palike

ಸ್ವೀಕೃತಿ (ಕಛೇರಿ ಪ್ರತಿ)

ACKNOWLEDGEMENT (Office Copy)

ನೂತನ ಜಾಹೀರಾತು ಫಲಕದ ಪರವಾನಗಿ ಕುರಿತು ಮೆ: _____ದಿನಾಂಕ: _____ ಸಮಯ_____ ಅರ್ಜಿ ನಮೂನೆಯನ್ನು ಈ ಕೆಳಕಂಡ ದಾಖಲೆಗಳೊಂದಿಗೆ ಸ್ವೀಕರಿಸಲಾಯಿತು.

Received the application No. ……. for grant of fresh permission for display advertisement from Sri/M/s ……on…… Time…….along with the following enclosures.

i	ಜಾಹೀರಾತು ಏಜೆನ್ಸಿಯ ನೋದಾವಣೆ ಪತ್ರ/ನವೀಕರಣ ಪತ್ರ	ಹೌದು	ಇಲ್ಲ
	Copy of the Agency enrollment letter/renewal letter	**yes**	**no**
ii	ಕಟ್ಟಡದ/ನಿವೇಶನದ ಮಾಲೀಕರಿಂದ ರೂಪಾಯಿ 20.00 ಛಾಪ ಕಾಗದದ (**Non Judicial stamp Paper)** ಮೇಲೆ ಅಫಿಡವಿಟ್ ರೂಪದಲ್ಲಿ ಅಕ್ಷೇಪಣೆ ರಹಿತ ಪ್ರಮಾಣ ಪತ್ರ ಸಲ್ಲಿಸುವುದು.	ಹೌದು	ಇಲ್ಲ
	The Building /Site owner's No abjection Certificate in the from od an affidavit duly executed on a Non judicial stamp paper of Rs. 20.00 and notarized	**yes**	**no**
iii	ಈ ಹಿಂದೆ ಪರವಾನಿಗಿ ಪಡೆದ ಪತ್ರದ ಪ್ರತಿ	ಹೌದು	ಇಲ್ಲ
	Copy of the Pervious Permission, if any	**yes**	**no**
iv	ಈ ಹಿಂದೆ ಪರವಾನಿಗಿ ನೀಡಿದ ಜಾಹೀರಾತು ಫಲಕದ ತೆರಿಗೆ ಪಾವತಿಸಿದ ರಶೀದಿ.	ಹೌದು	ಇಲ್ಲ
	Copy of the Pervious tax paid receipt for the Previous Permission obtained if any	**yes**	**no**
v	ಜಾಹೀರಾತು ಫಲಕ ಅಳವಡಿಸುವ ಸ್ಥಳದ ವಿವರವಾದ ಕೀ ಮ್ಯಾಪ್ ಮತ್ತು ನಕ್ಷೆ	ಹೌದು	ಇಲ್ಲ
	Key map and sketch of the location	**yes**	**no**
vi	ಜಾಹೀರಾತು ಸಂದೇ ವಿವರ	ಹೌದು	ಇಲ್ಲ
	Detials of contents of advertisement	**yes**	**no**
vii	ಕಟ್ಟಡದ/ನಿವೇಶನದ ಮಾಲೀಕರಿಂದ ಪ್ರಸಕ್ತ ಸಾಲಿನ ಆಸ್ತಿ ತೆರಿಗೆ ಪಾವತಿಸಿದ ರಶೀದಿ ಲಗತ್ತಿಸುವುದು.	ಹೌದು	ಇಲ್ಲ
	The latest Property tax paid receipt from the owner of the building/site	**yes**	**no**
viii	ದಾವಣಗೆರೆ ಮಹಾನಗರ ಪಾಲಿಕೆಯ ಸಂಬಂಧಪಟ್ಟ ಕಾರ್ಯ ಪಾಲಕ ಅಭಿಯಂತರವರಿಂದ ಸ್ವತ್ತಿನ ಕಟ್ಟಡ ಸದೃಢತೆಯ ಪ್ರಮಾಣ ಪತ್ರ.	ಹೌದು	ಇಲ್ಲ
	The structural stability certificate issued by the concerned Executive Enggineer of DCC	**yes**	**no**

ಸ್ಥಳ : ದಾವಣಗೆರೆ
Palce : Davanagere
ದಿನಾಂಕ:
Date

ಆಯುಕ್ತರು (ಜಾಹೀರಾತು) ರವರ ಪರವಾಗಿ
ದಾವಣಗೆರೆ ಮಹಾನಗರ ಪಾಲಿಕೆ
For Commissioner
Davanagere Mahanagara Palike

(ಮಾಲೀಕರ ಪ್ರತಿ)

ಅನುಬಂಧ–3A

Annexure -3A

ದಾವಣಗೆರೆ ಮಹಾನಗರ ಪಾಲಿಕೆ

Davanagere Mahanagara palike

No. DCC : 20 -

ಆಯುಕ್ತರವರ ಕಛೇರಿ

Office of the Commissioner

ಜಾಹೀರಾತು ವಿಭಾಗ

ದಾವಣಗೆರೆ ಮಹಾನಗರ ಪಾಲಿಕೆ

Davanagere Mahanagara palike

ದಿನಾಂಕ :

Date :

ಸ್ವೀಕೃತಿ ಕಂ ಅನುಮತಿ ಪತ್ರ

ವರ್ಷವಾರು ಜಾಹೀರಾತು ತೆರಿಗೆ ಪಾವತಿಸಿರುವ ವಿವರಗಳನ್ನೊಳಗೊಂಡ ಸ್ವೀಕೃತಿ ಕಂ ಅನುಮತಿ ಪತ್ರ

ಕ್ರ. ಸಂ.Sl. No	ವರ್ಷ Year	ಜಾಹೀರಾತು ಅಳತೆ ಒಟ್ಟು ಚ.ಮೀಗಳಲ್ಲಿ Measurement (in sq.mt)	ಅನುಮತಿ ಕೋಡ್ ಸಂಖ್ಯೆ Permission /code No	ಜಾಹೀರಾತು ತೆರಿಗೆದರ Rate off Advertisement tax	ಒಟ್ಟು ಜಾಹೀರಾತು ತೆರಿಗೆ Total advertisement tax	ಹಣ ಪಾವತಿಸಿರುವ ಡಿ.ಡಿ. /ನಗದು ರಶೀದಿ ಸಂಖ್ಯೆ Amount paid D.D./cash receipt No.	ಡಿ.ಸಿ.ಬಿ. ಪುಟ ಸಂಖ್ಯೆ D.C.B page No.	ಪಾಲಿಕೆಯ ಅಧಿಕೃತ ಅಧಿಕಾರಿಯ ಸಹಿ DCC authorized officer signature
1	2	3	4	5	6	7	8	9
1								
2								
3								
4								
5								

ಅನುಬಂಧ – 3 ರಲ್ಲಿ ಅಂಗಡಿ ಮಾಲೀಕರಾದ ಶ್ರೀ./ಶ್ರೀಮತಿ . . . . . ರವರು ನೀಡಿರುವ ವಿವರಗಳ ಆಧಾರದ ಮೇಲೆ ಅನುಬಂಧ –3ಎ ರ ಪ್ರಕಾರ ಅನುಮತಿ ನೀಡಲು ಕ್ರಮ ತೆಗೆದುಕೊಳ್ಳಲಾಗಿರುವುದಾಗಿ ತಿಳಿಯುವುದು.

As per the information furnished by Sri/Smt . . . . . at Annexure -3, action has been taken to issue the said permission letter as Annexure- 3A.

ಸಹಿ/ಪದನಾಮ
Sigh/Designation

ಕಛೇರಿಯ ಅಧಿಕೃತ ಮೊಹರು
Office authorized seal

(ಕಛೇರಿ ಪ್ರತಿ)

(Office Copy)

ಅನುಬಂಧ – 3ಎ

Annexure - 3A

ದಾವಣಗೆರೆ ಮಹಾನಗರ ಪಾಲಿಕೆ

Davanagere Mahanagara Palike

No. DCC : SAT : PR : : 2006-07

ಆಯುಕ್ತರವರ ಕಛೇರಿ,
Office of the Commissioner
ಜಾಹೀರಾತು ವಿಭಾಗ,
Advertisement Section
ದಾವಣಗೆರೆ ಮಹಾನಗರ ಪಾಲಿಕೆ,
ದಿನಾಂಕ : . . . . . .
Date : . . . . . .

ಸ್ವೀಕೃತಿ ಕಂ ಅನುಮತಿ ಪತ್ರ

ವರ್ಷವಾರು ಜಾಹೀರಾತು ತೆರಿಗೆ ಪಾವತಿಸಿರುವ ವಿವರಗಳನ್ನೊಳಗೊಂಡ ಸ್ವೀಕೃತಿ ಕಂ ಅನುಮತಿ ಪತ್ರ

ಕ್ರ. ಸಂ Sl. No	ವರ್ಷ Year	ಜಾಹೀರಾತು ಅಳತೆ ಒಟ್ಟು ಚ.ಮೀ ಗಳಲ್ಲಿ Measurement (in sq.mt)	ಅನುಮತಿ ಕೋಡ್ ಸಂಖ್ಯೆ Permission /code No.	ಜಾಹೀರಾತು ತೆರಿಗೆ ದರ Rate of Advertisement tax	ಒಟ್ಟು ಜಾಹೀರಾತು ತೆರಿಗೆ Total advertisement tax	ಹಣ ಪಾವತಿಸಿರುವ ಡಿ.ಡಿ./ನಗದು ರಶೀದಿ ಸಂಖ್ಯೆ Amount paid D.D./cash receipt No	ಡಿ.ಸಿ.ಬಿ ಪುಟ ಸಂಖ್ಯೆ DCB page No.	ಪಾಲಿಕೆಯ ಅಧಿಕೃತ ಅಧಿಕಾರಿಯ ಸಹಿ DCC authorized officer Signature
1	2	3	4	5	6	7	8	9
1								
2								
3								
4								
5								

ಅನುಬಂಧ – 3 ರಲ್ಲಿ ಅಂಗಡಿ ಮಾಲೀಕರಾದ ಶ್ರೀ/ಶ್ರೀಮತಿ ..... ರವರು ನೀಡಿರುವ ವಿವರಗಳ ಆಧಾರದ ಮೇಲೆ ಅನುಬಂಧ – 3ಎ ರ ಪ್ರಕಾರ ಅನುಮತಿ ನೀಡಲು ಕ್ರಮ ತೆಗೆದುಕೊಳ್ಳಲಾಗಿರುವುದಾಗಿ ತಿಳಿಯುವುದು.

As per the information furnished by Sri/Smt. ..... at Annexure–3. action has been taken to issue the said permission letter as Annexure–3A.

ಸಹಿ/ಪದನಾಮ
Sign / Designation

ಕಛೇರಿಯ ಅಧಿಕೃತ ಮೊಹರು
Office authorized seal

ಅನುಬಂಧ–4

ದಾವಣಗೆರೆ ಮಹಾನಗರ ಪಾಲಿಕೆ

Davanagere Mahanagara Palike

(By law-3.A(23) ANNEXURE-4

Sl. No./ ಕ್ರಮ ಸಂಖ್ಯೆ: .....

ಕೆ.ಎಂ.ಸಿ. ಕಾಯಿದೆ 1976, ಸೆಕ್ಷನ್ 135 ಮತ್ತು 2025ರ ಜಾಹೀರಾತು ಬೈಲಾಗಳ ಅಡಿಯಲ್ಲಿ ಜಾಹೀರಾತು ಫಲಕಗಳ ನವೀಕರಣದ ಅನುಮತಿಗಾಗಿ ಸಲ್ಲಿಸಿರುವ ಅರ್ಜಿ ನಮೂನೆ ಮತ್ತು ವಿಧಾನ

Application for grant of Renewal Permission for display of advertisement under Section 135 of the Karnataka Municipal corporation Act. 1976 and Advertisement Bye-Laws 2025.

1. ಅರ್ಜಿದಾರರ ಹೆಸರು ಮತ್ತು ವಿಳಾಸ Name of the Applicant and address	
2. ಜಾಹೀರಾತು ಏಜೆನ್ಸಿ ನೋಂದಾವಣೆ ಸಂಖ್ಯೆ ಮತ್ತು ದಿನಾಂಕ (ಜೆರಾಕ್ಸ್ ಪ್ರತಿ ಲಗತ್ತಿಸುವುದು) Advertisement Agency Enrolment No. & Date (Xerox copy to be enclosed)	
3. i) ಜಾಹೀರಾತು ಫಲಕದ ಪರವಾನಿಗಿಯನ್ನು ನವೀಕರಿಸಲು ಪಾಲಿಕೆಯ ಸ್ವತ್ತು/ಖಾಸತಿ ನಿವೇಶನ/ಕಟ್ಟಡದ ಮೇಲೆ ಅಳವಡಿಸಲು ಕೋರಲಾಗಿದೆಯೇ? ದಯವಿಟ್ಟು ಸ್ಥಳದ ವಿವರಗಳನ್ನು ನೀಡಿ. whether renewal permission for hoarding is sought on Mahanagara Palike Land/private Land/Building? Please Mention details of the Location. ii) ಮಾಲೀಕರ ಒಪ್ಪಿ ಪಡೆಯಲಾಗಿದೆಯೇ? ಹಾಗಿದ್ದಲ್ಲಿ ದಾಖಲಾತಿಗಳನ್ನು ಲಗತ್ತಿಸುವುದು. whether consent of the owner is taken? If so, documents to be enclosed	
4. i) ಹಿಂದೆ ಮಹಾನಗರ ಪಾಲಿಕೆಯಿಂದ ಖಾಸಗಿ ಸ್ವತ್ತುಗಳ ಮೇಲೆ ಜಾಹೀರಾತು ಫಲಕ ಅಳವಡಿಸಲು ಅನುಮತಿ ಪಡೆಯಲಾಗಿದೆಯೇ? ಹಾಗಿದ್ದಲ್ಲಿ ಅಂತಹ ಜಾಹೀರಾತು ಫಲಕಗಳ ಸಂಖ್ಯೆಯನ್ನು ನೀಡುವುದು. Whether any Permission has been obtained by the applicant from Davanagere City Corporation for any other hoarding in the past? if so, mention number of such advertisement. ii) ಪ್ರತಿ ಫಲಕದ ಲೈಸೆನ್ಸ್ ನಂಬರ್ ಮತ್ತು ದಿನಾಂಕ, ವಿವರಗಳನ್ನು ಲಗತ್ತಿಸಲಾಗಿದೆಯೇ? whether the details of each hoarding license number & date are enclosed ?	Yes/No ಹೌದು/ಇಲ್ಲ Yes/No ಹೌದು/ಇಲ್ಲ

Application Fee Rs. 500.00
(Non refundable)

iii) ಅನುಮತಿಸಿದ್ದ ಪ್ರತಿ ಫಲಕಕ್ಕೆ ಪೂರ್ಣವಾಗಿ ತೆರಿಗೆಗಳನ್ನು ಪಾವತಿ ಮಾಡಲಾಗಿದೆಯೇ? ಹಾಗಿದ್ದಲ್ಲಿ ವಿವರಗಳನ್ನು ನೀಡುವುದು. Whether upto date tax has been paid for the permitted Hoardings? If so, mention particulars of the same ಸೂಚನೆ : Note : ಮೇಲಿನ (i) ಮತ್ತು (ii) ನೇ ಅಂಕಣಗಳಿಗೆ ''ಹೌದು'' ಎಂದಾದಲ್ಲಿ ಪ್ರತ್ಯೇಕವಾಗಿ ದಾಖಲಾತಿ ಸಲ್ಲಿಸುವುದು If yes for colum (i) and (ii) abvoe separate statement shall be enclosed	Yes/No ಹೌದು/ಇಲ್ಲ

5. ನವೀಕರಣ ಅನುಮತಿ ಕೋರಿರುವ ಜಾಹೀರಾತು ಫಲಕಗಳ ಮೇಲಿನ ವಿವರಗಳು

Details of the Hoarding advertisement being appliee dfor renewal :

i) ಭೂಮಿ, ಕಟ್ಟಡ, ಗೋಡೆ ಇತ್ಯಾದಿಗಳ ಮೇಲೆ ಅಳವಡಿಸುವ ಪ್ರಕಾಶ ರಹಿತ ಜಾಹೀರಾತು Non-Illuminated advertisement on land building wall etc.			ಉದ್ದ . . . . . . Length . . . . . . ಅಗಲ . . . . . . Width . . . . . . ಎತ್ತರ . . . . . . Height . . . . .
ii) ಭೂಮಿ, ಕಟ್ಟಡ, ಗೋಡೆ ಇತ್ಯಾದಿಗಳ ಮೇಲೆ ಅಳವಡಿಸುವ ಪ್ರಕಾಶಿತ ಜಾಹೀರಾತು Illuminated advertisement on land building wall etc.			ಉದ್ದ . . . . . . Length . . . . . . ಅಗಲ . . . . . . Width . . . . . . ಎತ್ತರ . . . . . . Height . . . . .

ವಿವರಗಳು **Particulars**	ವಿವರ **Description**	ಸ್ಥಳ (ವಾರ್ಡ್ ಹೆಸರು ಮತ್ತು ಸಂಖ್ಯೆ ಸೇರಿ) **Location Inclusive of ward No&Name)**	ಅಡಿಗಳಲ್ಲಿ ಗಾತ್ರ
iii) ಭೂಮಿ, ಕಟ್ಟಡ, ಗೋಡೆ ಇತ್ಯಾದಿಗಳ ಮೇಲಿನ ನಿಯಾನ್ ಚಿಹ್ನೆ Neon sign on land building wall etc			ಉದ್ದ . . . . . . Length . . . . . . ಅಗಲ . . . . . . Width . . . . . . ಎತ್ತರ . . . . . . Height . . . . .
iv) ಭೂಮಿ, ಕಟ್ಟಡ, ಗೋಡೆ ಇತ್ಯಾದಿಗಳ ಮೇಲಿನ ಗ್ಲೋ ಚಿಹ್ನೆ Glow sign on land building wall etc			ಉದ್ದ . . . . . . Length . . . . . . ಅಗಲ . . . . . . Width . . . . . . ಎತ್ತರ . . . . . . Height . . . . .
v)ಇತರೆ Others			ಉದ್ದ . . . . . . Length . . . . . . ಅಗಲ . . . . . . Width . . . . . . ಎತ್ತರ . . . . . . Height . . . . .

6. ಇತರೆ ತರಹದ ಜಾಹೀರಾತುಗಳ ವಿವರ (ಜಾಹೀರಾತು ಫಲಕ ಹೊರತುಪಡಿಸಿ) **Details of other form of advertisement (Other than Hoardings)**			
i) ಭೂಮಿ, ಕಟ್ಟಡ, ಗೋಡೆ ಇತ್ಯಾದಿಗಳ ಮೇಲೆ ಅಳವಡಿಸುವ ಪ್ರಕಾಶ ರಹಿತ ಜಾಹೀರಾತು Non-Illuminated advertisement on land building wall etc.			ಉದ್ದ . . . . . . Length . . . . . . ಅಗಲ . . . . . . Width . . . . . . ಎತ್ತರ . . . . . . Height . . . . .
ii) ಭೂಮಿ, ಕಟ್ಟಡ, ಗೋಡೆ ಇತ್ಯಾದಿಗಳ ಮೇಲೆ ಅಳವಡಿಸುವ ಪ್ರಕಾಶಿತ ಜಾಹೀರಾತು Illuminated advertisement on land building wall etc.			ಉದ್ದ . . . . . . Length . . . . . . ಅಗಲ . . . . . . Width . . . . . . ಎತ್ತರ . . . . . . Height . . . . .
iii) ಭೂಮಿ, ಕಟ್ಟಡ, ಗೋಡೆ ಇತ್ಯಾದಿಗಳ ಮೇಲಿನ ನಿಯಾನ್ ಚಿಹ್ನೆ Neon sign on land building wall etc			ಉದ್ದ . . . . . . Length . . . . . . ಅಗಲ . . . . . . Width . . . . . . ಎತ್ತರ . . . . . . Height . . . . .
iv) ಭೂಮಿ, ಕಟ್ಟಡ, ಗೋಡೆ ಇತ್ಯಾದಿಗಳ ಮೇಲಿನ ಗ್ಲೋ ಚಿಹ್ನೆ Glow sign on land building wall etc			ಉದ್ದ . . . . . . Length . . . . . . ಅಗಲ . . . . . . Width . . . . . . ಎತ್ತರ . . . . . . Height . . . . .

v) ವಾಹನಗಳ ಮೇಲೆ ಅಳವಡಿಸುವ ಪ್ರಕಾಶ ರಹಿತ ಜಾಹೀರಾತುಗಳ ವಿವರ Non-Illuminated advertisements carried on back of the Vehicles			ಉದ್ದ . . . . . . Length . . . . . . ಅಗಲ . . . . . . Width . . . . . . ಎತ್ತರ . . . . . . Height . . . . .
vi) ವಾಹನಗಳ ಮೇಲೆ ಅಳವಡಿಸುವ ಪ್ರಕಾಶಮಾನ ಜಾಹೀರಾತುಗಳ ವಿವರ Illuminated advertisements carried on back of the Vehicles			ಉದ್ದ . . . . . . Length . . . . . . ಅಗಲ . . . . . . Width . . . . . . ಎತ್ತರ . . . . . . Height . . . . .

ಅನುಬಂಧ–5

ದಾವಣಗೆರೆ ಮಹಾನಗರ ಪಾಲಿಕೆ

Davanagere Mahanagara Palike

(By - law-4.E) ANNEXURE-5

Sl. No./ ಕ್ರಮ ಸಂಖ್ಯೆ: .....

ಅರ್ಜಿ (ವರ್ಗಾಯಿಸುವಂತಿಲ್ಲ)

ಕೆ.ಎಂ.ಸಿ. ಕಾಯಿದೆ 1976, ಸೆಕ್ಷನ್ 135 ಮತ್ತು ಜಾಹೀರಾತು ಉಪವಿಧಿ 2017ರ ಅಡಿಯಲ್ಲಿ ನೂತನ ದಿಕ್ಸೂಚಿ ಫಲಕ/ಕ್ಯಾಂಟಿಲಿವರ್ ಅನುಮತಿಗಾಗಿ ಸಲ್ಲಿಸಿರುವ ಅರ್ಜಿ ನಮೂನೆ ಮತ್ತು ವಿಧಾನ

Application for grant of Permission for display under Section 135 of the Karnataka Municipal corporation Act. 1976 and Advertisement Bye-Laws 2017.

1. ಅರ್ಜಿದಾರರ ಹೆಸರು ಮತ್ತು ವಿಳಾಸ Name of the Applicant and address	
2. ಅನುಮತಿಯನ್ನು ಪಾಲಿಕೆ/ಖಾಸಗಿ/ಸ್ವಂತ ಸ್ಥಳದಲ್ಲಿ ಅಳವಡಿಸಲು ಕೋರಲಾಗಿದೆಯೇ? ವಿವರಗಳೊಂದಿಗೆ ಸ್ಪಷ್ಟವಾದ ನಕ್ಷೆಯನ್ನು ಲಗತ್ತಿಸುವುದು. Whether permission is sought to display board in D.C.C/Private /Own Place? Please furnish the sketch along with details.	

3. ಪ್ರಸ್ತಾವಿತ ದಿಕ್ಸೂಚಿ ಫಲಕವನ್ನು ವಾಣಿಜ್ಯ/ವೈದ್ಯಕೀಯ ಅಥವಾ ಯಾವ ಉದ್ದೇಶಕ್ಕಾಗಿ ಅಳವಡಿಸಲು ಕೋರಲಾಗಿದೆ? Wherher the proposed direction board display is for medical or other purpose ?	
4. ಪ್ರಸ್ತಾವಿತ ದಿಕ್ಸೂಚಿ ಫಲಕವು ದಾವಣಗೆರೆ ಮಹಾನಗರ ಪಾಲಿಕೆಯ ಜಾಹೀರಾತು ಉಪವಿಧಿಗಳಿಗೆ ಅನುಗುಣವಾಗಿದೆಯೇ? Whether the proposed direction board is in accordance with advertisement Bye-laws of D.C.C.	Yes/No ಹೌದು/ಇಲ್ಲ
5. ದಿಕ್ಸೂಚಿ ಫಲಕದ ಮೇಲೆ ಪ್ರದರ್ಶಿಸ ಬೇಕಾಗಿರುವ ಜಾಹೀರಾತು ವಿವರ Details of advertisement to be displayed on direction board.	
6. ಪ್ರಸ್ತಾವಿತ ದಿಕ್ಸೂಚಿ ಫಲಕಕ್ಕೆ ಸಂಬಂಧಪಟ್ಟ ನಕ್ಷೆ/ಕೀಮ್ಯಾಪ್ ಲಗತ್ತಿಸಲಾಗಿದೆಯೇ? Whether the sketch and key map of the proposed direction board has been attached to the application.	Yes/No ಹೌದು/ಇಲ್ಲ

ದಿನಾಂಕ : ಅರ್ಜಿದಾರರ ಸಹಿ (ಹೆಸರಿನೊಂದಿಗೆ)

Date : Signature of the Applicant (With Name)

Application Fee Rs. 100.00
(Non Refundable)

ಅನುಬಂಧ–6

ದಾವಣಗೆರೆ ಮಹಾನಗರ ಪಾಲಿಕೆ

Davanagere Mahanagara Palike

ANNEXURE -3 K (By law-5.(7)) -

Sl. No./ ಕ್ರಮ ಸಂಖ್ಯೆ: .....

ಸ್ವಯಂ ಘೋಷಿತ ಯೋಜನೆಯಲ್ಲಿ ಅಂಗಡಿ ಮುಂಗಟ್ಟುಗಳ ಮೇಲಿನ ಜಾಹೀರಾತು ತೆರಿಗೆಯನ್ನು ಪಾವತಿಸುವ ಅರ್ಜಿ ನಮೂನೆ

Application for payment of shop front advertisement tax under Self Assessment Scheme (SAS) Commencing period ……
(Applicable only for shop front advertisement)

1	a) Name of the applicant & residential address	
	b) Telephone Number	Residence …… office .....… Mobile ……..
	a) ಅರ್ಜಿದಾರರ ಹೆಸರು ಮತ್ತು ಮತ್ತು ಮನೆ ವಿಳಾಸ:	

	b) ದೂರವಾಣಿ ಸಂಖ್ಯೆ	ಮನೆ: ..... ಕಛೇರಿ ..... ಮೊಬೈಲ್ ನಂ .....
2.	Shop Address ಅಂಗಡಿಯ ವಿಳಾಸ	
3	Ward No ವಾರ್ಡ್ ಸಂಖ್ಯೆ	
4	Zone ವಲಯ	
5	Measurment (in sq.mts)&amount : ಅಳತೆ(ಚ.ಮೀ. ಗಳಲ್ಲಿ) ಮತ್ತು ಮೊತ್ತ	
6	Shop front owners shall adhere to the following instruction : ಅಂಗಡಿ ಮುಂಗಟ್ಟಿನ ಮಾಲೀಕರು ಈ ಕೆಳಕಂಡ ನಿರ್ದೇಶನಗಳನ್ನು ಅನುಸರಿಸತಕ್ಕದ್ದು.	
i)	Shall mention the total advertisement measurement displayed on shop in column (7) (total) ಪ್ರದರ್ಶಿಸುವ ಎಲ್ಲಾ ಜಾಹೀರಾತುಗಳ ಅಳತೆಯ ವಿವರಗಳನ್ನು ನೀಡಬೇಕು	
ii)	For all types of advertisement shall calculate as per the table below at the rate of Rs. 50 per month per sq mtr plus 15 % health cess. ಎಲ್ಲಾ ರೀತಿಯ ಜಾಹೀರಾತುಗಳಿಗೆ, ಈ ಕೆಳಗೆ ತೋರಿಸಿರುವ ಪಟ್ಟಿಯಲ್ಲಿದ್ದಂತೆ ಪ್ರತಿ ಚ.ಮೀ.ರಿಗೆ ರೂ. 50/– ರ ಪ್ರಮಾಣದಲ್ಲಿ ಮತ್ತು ಶೇ.15 ಆರೋಗ್ಯ ಸೆಸ್‌ನೊಂದಿಗೆ ಲೆಕ್ಕ ಹಾಕಬೇಕು .	
Application Fee Rs. 100.00 (Non Refundable)		
iii)	One self name board (including tin board/wall painting) shal be exempted from the tax .Shop owners shall pay tax on all other types of advertisement. ಒಂದು ಸ್ವನಾಮಫಲಕ (ಟಿನ್ ಫಲಕವನ್ನೊಳಗೊಂಡು/ಗೋಡೆ ಪೇಂಟಿಂಗ್‌ಗಳಿಗೆ ತೆರಿಗೆಯಿಂದ ವಿನಾಯಿತಿ ನೀಡಬೇಕು ಅಂಗಡಿ ಮಾಲೀಕರು ಉಳಿದೆಲ್ಲಾ ಜಾಹೀರಾತುಗಳಿಗೆ ತೆರಿಗೆ ಪಾವತಿ ಮಾಡಬೇಕು.	
iv)	If the advertisement board measurement is in fraction it should be rounded off to the next higher number eq:1¼ of 1½ or ¾ should be rounded off as 2 ಒಂದು ವೇಳೆ ಜಾಹೀರಾತು ಫಲಕದ ಅಳತೆ ಅಪೂರ್ಣಾಂಕವಾಗಿದ್ದಲ್ಲಿ ಅದನ್ನು ಮುಂದಿನ ಪೂರ್ಣ ಅಂಕಕ್ಕೆ ಪರಿವರ್ತಿಸಿ ಕೊಳ್ಳಬೇಕು. ಉದಾ: 1¼ ಅಥವಾ 1½ ಅಥವಾ ¾ ಇದ್ದಲ್ಲಿ 2 ಎಂದು ಎಣಿಸಿಕೊಳ್ಳಬೇಕು.	

TABLE

Sl. No. ಕ್ರ.ಸಂ.	Type of advertisement ಜಾಹೀರಾತಿನ ಮಾದರಿ	Written on wall or tin board ನೋಡಲು ಮೇಲೆ ಬರೆದಿರುವ ಅಥವಾ ಫಲಕದ ಮೇಲೆ	Glow sign board ಹೊಳೆಯುವ ಸಂಕೇತದ ಫಲಕ	Neon sigh ನಿಯಾನ್ ಸಂಕೇತ	Others ಇತರೆ	Total (3+4+5+6) ಒಟ್ಟು (3+4+5+6)
1	2	3	4	5	6	7
1	Measurement(in sq.mt) ಆಳತೆ(ಚ.ಮೀ.ಗಳಲ್ಲಿ)					
2	Advertisment tax (in Rs.) ಜಾಹೀರಾತು ತೆರಿಗೆ(ರೂ.ಗಳಲ್ಲಿ)					
3	Health cess (in Rs.) ಆರೋಗ್ಯ ಸೆಸ್ (ರೂ.ಗಳಲ್ಲಿ					
4	Total (in Rs.) (2+3) ಒಟ್ಟು (2+3)					

Details of tax payment made :
ಪಾವತಿ ಮಾಡಿರುವ ವಿವರಗಳು.

i) Measurement : ……. (in sq.mt)
ಆಳತೆ . . . . . ಚ.ಮೀಟರ್‌ಗಳು

ii) Total Amount Rs. . . . . .
ಒಟ್ಟು ಮೊತ್ತ ರೂ. . . . . ಗಳು

iii) Mode of payment : a) if D.D.No. …….. Dated …… drawn ……. Bank …….. ….. branch . b) If cash Receipt No. ……. Date ……. and place ……

ಪಾವತಿ ಮಾಡಿರುವ ವಿಧಾನ ಡಿ.ಡಿ. ಮೂಲಕವಾದಲ್ಲಿ

ಡಿ.ಡಿ.ಸಂಖ್ಯೆ: . . . . . ದಿನಾಂಕ . . . . . ಬ್ಯಾಂಕಿನಿಂದ . . . . . ಶಾಖೆಯಿಂದ . . . . .

ನಗದು . . . . . ರಸೀದಿ ಸಂಖ್ಯೆ . . . . . ದಿನಾಂಕ : . . . . . ಸ್ಥಳ . . . . . .

The following conditions shall apply

ಷರತ್ತುಗಳು :

1. If for any reason the address declared in the SAS form is changed or the shop closed, shall pay arrears of tax & intimate the same to the DCC in writing.
ಸ್ವಯಂ ಘೋಷಣಾ ನಮೂನೆಯಲ್ಲಿ ಘೋಷಿಸಿರುವ ವಿಳಾಸವು ಕಾರಣಾಂತರದಿಂದಾಗಿ ಬದಲಾವಣೆಯಾದಲ್ಲಿ ಅಥವಾ ಸಂಸ್ಥೆಯನ್ನು ನಷ್ಟದಿಂದ ಮುಚ್ಚಿದಲ್ಲಿ ಬಾಕಿ ತೆರಿಗೆ ಪಾವತಿಸಿ ಪಾಲಿಕೆಗೆ ಲಿಖಿತವಾಗಿ ತಿಳಿಸತಕ್ಕದ್ದು.

2. If the tax has not been paid as per the norms, action as per law be initiated which may include cancellation of trade license and other license.
ನಿಯಮಗಳಂತೆ ತೆರಿಗೆ ಪಾವತಿಸದಿದ್ದಲ್ಲಿ ಪಾಲಿಕೆಯು ನೀಡುವ ಟ್ರೇಡ್‌ಲೈಸೆನ್ಸ್ ಸೇರಿದಂತೆ ಇತರೆ ಲೈಸೆನ್ಸ್‌ಗಳನ್ನು ರದ್ದುಪಡಿಸಲು ಕಾನೂನು ರೀತ್ಯಾಕ್ರಮ ಜರುಗಿಸಲಾಗುವುದು.

3. If any variations in declared measurement are found or an attempt to cheat to avoid payment of advertisement tax at the time of random inspection by Corporation`s officers, action will be initiated against concerned shop front owner as per law and the penalty imposed will include imposition of an amount double ithe advertisement tax.
ಪಾಲಿಕೆಯ ಅಧಿಕಾರಿಗಳು ರ್‍ಯಾಂಡಮ್ ಸ್ಥಳ ತನಿಖೆ ನಡೆಸಿದಾಗ ಜಾಹೀರಾತು ಅಳತೆಯಲ್ಲಿ ಯಾವುದಾದರೂ ವ್ಯತ್ಯಾಸಗಳು ಮತ್ತು ಜಾಹೀರಾತು ತೆರಿಗೆ ಪಾವತಿಸಲು ವಂಚಿಸುವ ಪ್ರಯತ್ನ ಕಂಡು ಬಂದಲ್ಲಿ ಅಂಗಡಿ ಮುಂಗಟ್ಟುಗಳ ಮಾಲೀಕರ ವಿರುದ್ದ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುವುದು ಮತ್ತು ವಾಸ್ತವವಾಗಿ ಪಾವತಿಸಬೇಕಾಗಿರುವ ಜಾಹೀರಾತು ತೆರಿಗೆಯ ಎರಡರಷ್ಟನ್ನು ವಸೂಲಿ ಮಾಡಲಾಗುವುದು.

4. If any conditions mentioned above are violated the DCC without giving any notice, remove the boards and collect removal charges and Rs. 5,000 as administrative expenses per shop and advertisement tax for the particular period.
ಈ ಮೇಲಿನ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ನಿಮಗೆ ಯಾವುದೇ ನೋಟೀಸ್ಸನ್ನು ನೀಡದೆ ಪಾಲಿಕೆಯು ಫಲಕವನ್ನು ತೆಗೆದು ಹಾಕಿ ಅದಕ್ಕೆ ತಗಲುವ ವೆಚ್ಚ ಮತ್ತು ಪ್ರತಿ ಅಂಗಡಿ ಮಾಲೀಕರಿಂದ ರೂ. 5,000 ಳನ್ನು ಆಡಳಿತಾತ್ಮಕ ವೆಚ್ಚವನ್ನು ಜಾಹೀರಾತು ಪಡಿಸಿದ ಅವಧಿಗೆ ಪಾವತಿಸಬೇಕಾದ ತೆರಿಗೆ ಮೊತ್ತದೊಂದಿಗೆ ವಸೂಲಾತಿ ಮಾಡಲಾಗುವುದು.

ಪ್ರಮಾಣ ಪತ್ರ

